MADAM SPEAKER.—As a special case I agree to the request of the Minister for Agriculture and permit him to move the demands listed in the names of the Minister of State for Information and Youth services.

Budget Estimates for 1976-77 Demands for Grants

DEMAND NOS. 17, 23, 24 AND 30.

SRI N. CHIKKE GOWDA.—(Minister for Agriculture) [(on behalf of the Minister of State for Information and Youth Servies)], Madam, on the recommendation of the Governor, I beg to move :

"That a sum not exceeding Rs. 2,49,01,000 be granted to the Government to defray the charges which will come in course of payment during the financial year ending 31st day of March 1977 in respect of Demand No 24 "Youth Services, Archaeology, Museums and Flying School".

' That a sum not exceeding Rs. 1, 54,90,000 be granted to the Government to defray the charges which will come in course of payment during the financial year ending 31st day of March 1977 in respect of Demand No. 30 ' Information and Publicity".

MADAM SPEAKER.—Motion moved :

"That a sum not exceeding Rs. 2, 49,01,000 be granted to the Government to defray the charges which will come in course of payment during the financial year ending 31st day of March 1977 in respect of Demand No. 24 "Youth Services Archaeology, Museums and Flying School".

All the demands are before the House for discussion.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಮಾನ್ಯ ವಿದ್ಯಾಸಚಿವರು ೧೯೭೬-೭೭ನೇ ಸಾಲಿಗೆ ಮಂಡಿಸಿರತಕ್ಕ ಡಿಮ್ಯಾಂಡ್ ನಂಬರ್ ೧೭, ೨೩, ೨೪, ಹಾಗೂ ಗೈರು ಹಾಜರಾದ ಇನ್‌ಫರ್‌ಮೇಷನ್ ಅಂಡ್ ಪಬ್ಲಿಸಿಟಿ ಪರವಾಗಿ ಮಂಡಿಸಿರತಕ್ಕ ಡಿಮ್ಯಾಂಡ್ ನಂಬರ್ ೩೦ ಇಷ್ಟು ಡಿಮ್ಯಾಂಡ್‌ಗಳನ್ನು ನಾನು ವಿರೋಧಿಸಿ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಈ ಶಿಕ್ಷಣ ಕ್ಷೇತ್ರದ ಬಗ್ಗೆ ಯೋಚನೆ ಮಾಡುವಾಗ ನಮ್ಮ ದೇಶದ, ನಮ್ಮ ರಾಜ್ಯದ ಭವಿಷ್ಯದ ಬಗ್ಗೆ ಯೋಚನೆ ಬರುತ್ತದೆ ಇವೊತ್ತು ಇಂದಿನ ವಿದ್ಯಾರ್ಥಿಗಳೇ, ಇಂದಿನ ಮಕ್ಕಳೇ ಮುಂದೆ ದೇಶದ ಭವಿಷ್ಯದ ಪ್ರಜೆಗಳು ಎಂದು ಹಿಂದಿನಿಂದ ಹೇಳಿರತಕ್ಕದ್ದು ಹಳೆಯ ಮಾತು, ತಾವು ಇಂದಿನ ವಿದ್ಯಾರ್ಥಿಗಳೇ ಮುಂದಿನ ಭವಿಷ್ಯ ಎಂದು ತಾವು ಹೇಳುತ್ತಾ ಇರುವುದು ಇವೊತ್ತು ಸವೆದು ಹೋಗಿದೆ. ಇದನ್ನು ಬಹಳ ಕಾಲದಿಂದ ಹೇಳಿಕೊಂಡು ಬಂದು ಅವರ ಭವಿಷ್ಯದ ಬಗ್ಗೆ ಅಂದರೆ ನಾಡಿನ ಮಕ್ಕಳ ಬಗ್ಗೆ ಅವರ ಪ್ರಗತಿಗೋಸ್ಕರ ಯಾವರೀತಿ ಯೋಜನೆಯನ್ನು ಕೈಗೊಂಡಿದ್ದೀರಾ ಎಂದು ಯೋಚನೆ ಮಾಡಬೇಕು. ಇದು ಹೇಗೆ ಆಗಿದೆ ಎಂದರೆ ಬೇವಿನ ಬೀಜವನ್ನು ಬಿತ್ತಿ ಬೆಲ್ಲದ ಕಟ್ಟೆಯನ್ನು ಕಟ್ಟಿದ ಅದರಲ್ಲಿ ಬೆಲ್ಲದ ಹಾಲು ಎರೆದು ಜೇನುತುಪ್ಪ ಹಾಕಿದರೆ ಅದು ಕಹಿಯಾಗದೇ ಸಿಹಿಯಾಗಬಲ್ಲದೇ ? ಈಗ ಬೇವಿನ ಬೀಜ ಬಿತ್ತಿ ಬೆಲ್ಲದ ಕಟ್ಟೆಯನ್ನು ಕಟ್ಟಿದ್ದಾರೆ. ನಂತರ ಪ್ರತಿವರ್ಷ ಕೋಟಿಕೋಟಿ ರೂಪಾಯಿ ಹಾಲು ಎರೆದು ಜೇನುತುಪ್ಪ ಸವಿಯಲಿಕ್ಕೆ ಮಂಡನೆ ಮಾಡಿದ್ದಾರೆ. ಈ ಬೇವಿನ ಬೀಜ ನೆಟ್ಟು ಜನ ಅದರಿಂದ ಸಿಹಿ ಬೆಲ್ಲ ಬರುತ್ತದೆ ಎಂದು ಭಾವಿಸಿದ್ದಾರೆ. ಅದು ತಪ್ಪು ಎಂದು ವಿದ್ಯಾಸಚಿವರು ಒಪ್ಪುತ್ತಾರೆ.

ಎಂದು ವಿಶ್ವಾಸ ಇಡುತ್ತೇನೆ. ಇದು ನಮ್ಮ ಶಿಕ್ಷಣ ಪದ್ಧತಿ ನನಗೆ ಗೊತ್ತಿದೆ. ಅವರು ಮಾತನಾಡುವಾಗ, ಮಂತ್ರಿ ಅವರ ಡಿಪಾರ್ಟ್‌ಮೆಂಟ್ ವರದಿಯಲ್ಲಿ ಈ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಅವರು ಕೊಡತಕ್ಕ ಯಾವುದೇ ಒಂದು ವರದಿಯನ್ನು ತೆಗೆದುಕೊಂಡರು ಕೂಡ ಈ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಇದು ಎಂತಹ ವಿಪರ್ಯಾಸ ಎಂದರೆ ಮೂಲಭೂತವಾದ ಪದ್ಧತಿಯನ್ನು ಬದಲಾವಣೆ ಮಾಡುವ ಯಾವುದೇ ಕಾರ್ಯಕ್ರಮವನ್ನು ಕೈಗೊಳ್ಳದೇ ಇವರು ಕೇವಲ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕ ಹಂಚತಕ್ಕ ಒಂದು ದೊಡ್ಡ ಪಾಯಿಂಟ್ ಮಾಡಿದ್ದಾರೆ, ಒಂದು ದೊಡ್ಡ ಕ್ರಾಂತಿ ತರತಕ್ಕ ಕ್ರಾಂತಿವೀರರು ಇವರು, ಕ್ರಾಂತಿ ರಾಣಿ ಕಿತ್ತೂರು ರಾಣಿ ಚೆನ್ನಮ್ಮ ಇವರ ನಾಯಕಿ ಎಂದು ತಿಳಿದುಕೊಂಡು ಸ್ಲೇಟು, ಪುಸ್ತಕ ಕೊಡುತ್ತಿದ್ದಾರೆ. ಇವೊತ್ತಿನ ದಿವಸ ವಿದ್ಯಾಭ್ಯಾಸ ಮೂಲಭೂತವಾಗಿ ಬದಲಾವಣೆ ಮಾಡುವುದಕ್ಕೆ ಯಾವರೀತಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂದು ನೋಡಬೇಕಾಗಿದೆ. ವಿದ್ಯಾಭ್ಯಾಸ ನಮ್ಮ ಅವಶ್ಯಕತೆ ಇದೆ, ರಾಷ್ಟ್ರದ ಅವಶ್ಯಕತೆ ಇದೆ, ರಾಜ್ಯದ ಆವಶ್ಯಕತೆ ಇದೆ. ಆ ಒಂದು ದೃಷ್ಟಿಗನುಗುಣವಾಗಿ ಈ ಶಿಕ್ಷಣ ಪದ್ಧತಿ ಇರಬೇಕು ಎಂದು ಹೇಳುತ್ತೇನೆ ನಾವು ಮೊದಲಿನಿಂದಲೂ ಪಾಶ್ಚಿಮಾತ್ಯ ರೀತಿಯನ್ನು, ವೆಸ್ಟರ್ನೈಜೇಷನ್ ಟೈಪ್ ಬಿಟ್ಟು ನಿಜವಾದ ಆಧುನಿಕವಾದಂತ ರೀತಿಯಲ್ಲಿ ಶಿಕ್ಷಣ ಪದ್ಧತಿಯನ್ನು ನಮ್ಮಲ್ಲಿ ಜಾರಿಗೆ ತರಬೇಕೆಂದು ಹೇಳಿಕೊಂಡು ಬಂದಿದ್ದೇವೆ. ಹಾಗೆ ರಾಷ್ಟ್ರದ ಅವಶ್ಯಕತೆ ಹಾಗೂ ಆದರ್ಶಗಳಿಗನುಗುಣವಾಗಿ ಶಿಕ್ಷಣ-ಗುಣಮಟ್ಟವಲ್ಲಿ ತೀವ್ರವಾದ ಸುಧಾರಣೆಯಾಗಬೇಕು. ಅಲ್ಲದೇ ನಾವು ಕೊಡುವ ವಿದ್ಯೆ ಆರ್ಥಿಕ ಸ್ವಾವಲಂಬನೆಗೆ ಮೂಲವಾಗಬೇಕು. ಒಂದು ಡಿಗ್ರಿ ಮಾನದಂಡವಾಗಬಾರದು. ಹಾಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಸಾರ್ವತ್ರಿಕ ವಯಸ್ಕರ ಶಿಕ್ಷಣ ಕಡ್ಡಾಯವಾಗಬೇಕು. ಅಲ್ಲದೇ ಒಂದು ಅವಧಿಯಲ್ಲಿ ಸಂಪೂರ್ಣವಾಗಿ ಕಾರ್ಯಗತಗೊಳಿಸುವಂತ ಯೋಜನಾಬದ್ಧವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅಷ್ಟೇ ಅಲ್ಲದೆ ಸರ್ಕಾರ ವಿದ್ಯಾಸಂಸ್ಥೆಗಳ ವ್ಯವಹಾರದಲ್ಲಿ ನೇರವಾಗಿ ಪ್ರತಿನಿತ್ಯ ಕೈಹಾಕಬಾರದು. ಹಾಗೆ ವಿದ್ಯಾರ್ಥಿ ಸಂಘ, ಅಧ್ಯಾಪಕರ ಸಂಘ ಇವುಗಳ ಸಂಘಟನೆಗೆ ಸಂಪೂರ್ಣ ಸ್ವತಂತ್ರ ಕೊಡಬೇಕು ಎಂದು ನಾವು ಸಾರಿ ಸಾರಿ ಹೇಳಿಕೊಂಡು ಬಂದಿದ್ದೇವೆ ಇವೊತ್ತು ನಮ್ಮ ವಿದ್ಯಾಸಂಸ್ಥೆಯಲ್ಲಿ ೨೫-೩೦ ವರ್ಷದಿಂದ ಒಂದು ಪರಂಪರೆ ಇದೆ. ಈ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಒಂದು ಸೂಜಿ ಮೊನೆಯಷ್ಟು ಮೂಲಭೂತವಾದ ಬದಲಾವಣೆಯಾಗಿಲ್ಲ ಎಂದು ಹೇಳಬೇಕಾಗಿಲ್ಲ, ಬ್ರಿಟಿಷರ ಕಾಲದಲ್ಲಿ ಯಾವ ಒಂದು ಪದ್ಧತಿ ಇತ್ತು ಅದೇ ಒಂದು ಪದ್ಧತಿ ಇವೊತ್ತು ನಡೆದುಕೊಂಡು ಬಂದಿದೆ ಅಂತಹ ತರಹ ಗುಮಾಸ್ತರನ್ನು ತಯಾರು ಮಾಡತಕ್ಕ ಒಂದು ಶಿಕ್ಷಣ ಪದ್ಧತಿ ಇದೆ, ಇವೊತ್ತಿನ ದಿವಸ ವಿದ್ಯಾಭ್ಯಾಸ ಮಾಡಿ ಹೊರಕ್ಕೆ ಬಂದ ಜನರು ಕೆಲಸಕ್ಕೆ ಅಲೆಯುತಕ್ಕದ್ದನ್ನು ನೋಡುತ್ತಿದ್ದೇವೆ. ಹೀಗೆ ನಿರುದ್ಯೋಗಿಗಳನ್ನು ಸೃಷ್ಟಿಮಾಡತಕ್ಕದ್ದು ಏನು ಇದೆ ಅದನ್ನು ಸಂಪೂರ್ಣವಾಗಿ, ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು ಎಂದು ಹೇಳಿಕೊಂಡು ಬಂದಿದ್ದೇವೆ. ಈ ಸಂಬಂಧದಲ್ಲಿ ಮಹಾತ್ಮ ಗಾಂಧಿಯವರು ಟಾಸ್ಕ್ ಆಫ್ ಬೆಂಗಳೂರು ಯೂನಿವರ್ಸಿಟಿ ಪುಸ್ತಕದಲ್ಲಿ ಬೇಕಾದಷ್ಟು ವಿಷಯವನ್ನು ತಿಳಿಸಿದ್ದಾರೆ.

ಬಹುಶಃ ಈಗ ೧೯೭೫ರ ಜೂನ್ ೨೬ ಆದನಂತರ ಆ ಕಡೆ ಕುಳಿತಿರತಕ್ಕವರಿಗೆ ಮಹಾತ್ಮ ಗಾಂಧಿಯವರ ಹೆಸರು ಗೊತ್ತಿಲ್ಲ ಎಂದು ಕಾಣುತ್ತದೆ, ಅವರಿಗೆ ಗೊತ್ತಿರುವುದು ಒಂದೇ ಗಾಂಧಿಯ ಹೆಸರು. ಮಹಾತ್ಮ ಗಾಂಧಿಯವರು ಶಿಕ್ಷಣದ ಬಗ್ಗೆ ಮೂಲಭೂತವಾದ ಬದಲಾವಣೆಯಾಗಬೇಕು. ಬ್ರಿಟಿಷರ ಕಾಲದಲ್ಲಿ ಇದ್ದಂತೆ ಆಗಬಾರದು ಎಂದು ಹೇಳಿದ್ದಾರೆ. ಆದರೆ ಇವೊತ್ತು ಅವರ ಮಾತಿಗೆ ಏನೂ ಬೆಲೆ ಇಲ್ಲ, ಅದೇರೀತಿ ಪಂಡಿತ್ ಜವಹರ್‌ಲಾಲ್ ನೆಹರೂರವರು ಕೂಡ ಶಿಕ್ಷಣದ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಅಲ್ಲಲ್ಲಿ ಹೇಳಿದ್ದಾರೆ. ಆದುದರಿಂದ ಈ ತರಹ ಪುಸ್ತಕಗಳನ್ನು ಅಧ್ಯಯನ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೇ ಈ ಪುಸ್ತಕಗಳನ್ನು ಮಾನ್ಯಮಂತ್ರಿಗಳಿಗೆ ತಲುಪಿಸಲಿಕ್ಕೆ ಸಿದ್ಧನಿದ್ದೇನೆ. ನಮ್ಮ ನಾಡಿನಲ್ಲಿ ಒಬ್ಬರು ಹಿರಿಯ ಶಿಕ್ಷಣ ತಜ್ಞರಿದ್ದಾರೆ. ಅವರು ಯಾವ ವಿಶ್ವವಿದ್ಯಾನಿಲಯದ ಪದವಿಯನ್ನೂ ಪಡೆದವರಲ್ಲ. ಆದರೆ ವಿಶ್ವವಿದ್ಯಾನಿಲಯವೇ ಅವರನ್ನು ಕರೆದು ಸನ್ಮಾನ್ಯ ಮಾಡಿದೆ. ಅವರು ಡಾ: ಶಿವರಾಮ ಕಾರಂತರು. ಅವರು ಶಿಕ್ಷಣದ ಬಗ್ಗೆ ಏನು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ ಎಂಬುದನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

> ''ಯಾವ ಬಗೆಯ ಶಿಕ್ಷಣ ನಾವು ಕೊಡುತ್ತಿದ್ದೇವೆ ಅದು ಸಾರ್ಥಕವಾಗಬೇಕಾದರೆ ನಾವು ಈ ಶಿಕ್ಷಣವನ್ನು ಯಾರಿಗೆ ಕೊಡುತ್ತಿದ್ದೇವೆ ಮತ್ತು ಏತಕ್ಕೆ ಕೊಡುತ್ತಿದ್ದೇವೆ ಎನ್ನುವ ಉದ್ದೇಶ ಸ್ಪಷ್ಟವಾಗಿರಬೇಕು. ಗುರಿ ಸ್ಪಷ್ಟವಾಗಿದ್ದರೂ ಸಾಲದು. ಈ ಗುರಿ ಸಾಧಿಸಲು

ಇರಬೇಕಾದ ಶಿಕ್ಷಣ ಕ್ರಮ ಅತಿ ಮುಖ್ಯ....''ಎಂದು ಹೇಳಿದ್ದಾರೆ. ಅವರು ಶಿಕ್ಷಣ ಕ್ಷೇತ್ರದಲ್ಲಿ ಆಳವಾಗಿ ವಿಚಾರ ಮಾಡಿದ ಅನುಭವವಿರುವುದರಿಂದ ಈ ಕ್ಷೇತ್ರದ ಬಗ್ಗೆ ಅಧಿಕೃತವಾಗಿ ಹೇಳಲಿಕ್ಕೆ ಅವರಿಗೆ ಅಧಿಕಾರ ಉಂಟು. ಆದುದರಿಂದ ಈ ಬಗ್ಗೆ ಅವರು ಸಾಕಷ್ಟು ಹೇಳಿದ್ದಾರೆ ಈ ಮಾತುಗಳನ್ನು ನಾನು ಸರ್ಕಾರದವರಿಗೆ ನೆನಪು ಮಾಡಿಕೊಟ್ಟು, ಈ ಮಾತುಗಳಿಗೂ ಮತ್ತು ಇವತ್ತಿನ ಶಿಕ್ಷಣ ಕ್ರಮಕ್ಕೂ ಯಾವ ರೀತಿ ಹೊಂದಾಣಿಕೆ ಇದೆ, ಎಲ್ಲಾದರೂ ಇದರ ಸಾರ್ಥಕತೆಯನ್ನು ಕಂಡಿದೆಯೋ ಎಂದು ನಾನು ಕೇಳುತ್ತೇನೆ

2–00PM

ನಾನು ಇವತ್ತು ಶಿಕ್ಷಣದ ಕುರಿತು ಅಡಿಯಿಂದ ಮುಡಿಯವರೆಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇಚ್ಛೆಪಡುತ್ತೇನೆ ಮೊದಲನೆಯದಾಗಿ, ಯಾವ ದೇಶದಲ್ಲಿ ಆಡಳಿತ ಮತ್ತು ವಿದ್ಯಾಭ್ಯಾಸ ಆಡು ಮಾತಿನಲ್ಲಿ ದೊರಕುವುದಿಲ್ಲ ಆ ನಾಡು ಸುಡುಗಾಡು ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಯಾವ ದೇಶದಲ್ಲಿ ಜನಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಇಂಥಾ ಒಂದು ಅವಕಾಶವಿರುವುದಿಲ್ಲ; ಅಂಥಾ ನಾಡು: ಅಂಥಾ ದೇಶ ಸ್ಮಶಾನಸದೃಶವಾದುದು. ನಮ್ಮ ನಾಡಿನ ಚಿಕ್ಕ ಮಕ್ಕಳಿಗೆ, ನರ್ಸರಿ ಶಾಲೆಗಳಲ್ಲಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಅವರ ಮಾತೃಭಾಷೆಯಲ್ಲಿ ಶಿಕ್ಷಣ ಕೊಡದೆ, ಬೇರೆ ಭಾಷೆಯಲ್ಲಿ ಶಿಕ್ಷಣ ಕೊಡುತ್ತಿರುವುದನ್ನು ಕಂಡಿದ್ದೇವೆ. ಕೇಳಿದ್ದೇವೆ : ಇದು ಈಗಲೂ ನಿತ್ಯಸತ್ಯವಾಗಿ ಉಳಿದಿದೆ. ಮೂಲಭೂತವಾದ ಈ ವಿಚಾರವನ್ನು ತಾತ್ವಿಕವಾಗಿ ನಮ್ಮ ಸರ್ಕಾರ ಮತ್ತು ನಮ್ಮ ಶಿಕ್ಷಣ ಮಂತ್ರಿಗಳು ಇಲ್ಲಿಂದಲ್ಲಿಯವರೆಗೆ ಒಪ್ಪಿಕೊಂಡರೂ ಕೂಡ, ಇದನ್ನು ಕಾರ್ಯಗತ ಮಾಡಿಲ್ಲ ಎನ್ನುವ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗಿದೆ.

ನಮ್ಮ ರಾಜ್ಯದಲ್ಲಿ ಒಟ್ಟು ೧,೧೮೦ ನರ್ಸರಿ ಶಾಲೆಗಳು ಇವೆ. ಇದರಲ್ಲಿ ೯೫,೯೬೨ ಮಕ್ಕಳು ಸೇರಿದ್ದಾರೆ : ಮತ್ತು ಪ್ರಾಥಮಿಕ ಶಾಲೆಗಳು ೧೯೭೫–೭೬ರ ಹೊತ್ತಿಗೆ ೩೩,೪೪೧ ಇದೆ. ಇವುಗಳಲ್ಲಿ ೧೯೭೪–೭೫ರ ಅಂತ್ಯಕ್ಕೆ ಸುಮಾರು ೩೩ ಲಕ್ಷ ಜನ ಸೇರಿದ್ದಾರೆ. ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ೯.೬೮ ಲಕ್ಷ ಜನ ಸೇರಿದ್ದಾರೆ. ಈ ಅಂಕಿ–ಅಂಶಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶಾಲೆಗಳಿಗೆ ಸೇರಿದ ಬಗ್ಗೆ ಮಾತ್ರ, ಆದರೆ, ಇಲ್ಲಿ ಶಾಲೆಯ ಹಾಜರಾತಿ ಬಗ್ಗೆ ಒಂದಕ್ಷರವನ್ನೂ ಹೇಳಿಲ್ಲ ಮೊದಲು ಸೇರಿಸಿದ್ದು : ಕೊನೆಗೆ ಬಿಟ್ಟಿದ್ದು—ಇವುಗಳನ್ನು ಮಾತ್ರ ಹೇಳುತ್ತಿದ್ದಾರೆಯೇ ಹೊರತು, ಈ ಶಾಲೆಗಳಲ್ಲಿ ಹಾಜರಾತಿ ಹೇಗಿತ್ತು ಎನ್ನುವ ಮಾತನ್ನು ಹೇಳುತ್ತಿಲ್ಲ. ನಾನು ಈ ಮಾತನ್ನು ಹಳ್ಳಿಗಳ ಚಿತ್ರವನ್ನು ನೆನಪು ಮಾಡಿಕೊಂಡು, ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ೯೯ ಭಾಗ ಹಳ್ಳಿಗಳಲ್ಲಿ ಸಾಮಾನ್ಯವಾಗಿ ನರ್ಸರಿ ಶಾಲೆಗಳು ಇಲ್ಲ. ಆದರೆ ಇರತಕ್ಕ ಕಡೆ, ಮತ್ತು ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹೇಗೆ ಇದೆ ಎಂಬುದರ ಬಗ್ಗೆ ಮಾಹಿತಿ ಒದಗಿಸಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಹಾಜರಾತಿ, ಬಹುಪಾಲು, ಎಷ್ಟು ವಿದ್ಯಾರ್ಥಿಗಳು ಶಾಲೆಗಳಿಗೆ ಸೇರಿದ್ದಾರೆ ಅಷ್ಟು ಸಂಖ್ಯೆಯಲ್ಲಿ ಕಡೆಯವರೆಗೂ ಇರುವುದಿಲ್ಲ. ಇದಕ್ಕೆ ಕಾರಣ ಏನು ? ಯಾರು ಹೊಣೆ ? ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಕಡ್ಡಾಯವಾಗಿ ಪ್ರತಿನಿತ್ಯ ಶಾಲೆಗೆ ಹೋಗದೆ ಇರುವುದಕ್ಕೆ ಯಾರು ಹೊಣೆ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇದಕ್ಕೆ ಸರ್ಕಾರವೇ ಹೊಣೆ ಎಂದು ಹೇಳುತ್ತೇನೆ ಕಡ್ಡಾಯ ಶಿಕ್ಷಣ ಏನು ಇದೆ, ಅದು ಕೇವಲ ಕಾನೂನು ಪುಸ್ತಕದಲ್ಲಿದೆಯೇ ಹೊರತು ಅದನ್ನು ಕಡ್ಡಾಯ ಮಾಡಬೇಕೆನ್ನುವ ಶಬ್ದವನ್ನು ಸಂಪೂರ್ಣವಾಗಿ ಬಳಸಿಲ್ಲ ; ಮತ್ತು ಇದನ್ನು ಶಕ್ತಿಯುತವಾಗಿ ಹಾಗೂ ಸಮರ್ಪಕವಾಗಿ ಕಾರ್ಯಗತ ಮಾಡಿಲ್ಲ ಎಂದು ನಾನು ಹೇಳುತ್ತೇನೆ. ಹೇಗಾದರೂ ಮಾಡಲಿ, ಎಷ್ಟು ಜನರಾದರೂ ಬರಲಿ, ಅವರು ಓದಲಿ, ಬಿಡಲಿ, ಹಳ್ಳಿಗಳ ಮತ್ತು ಪಟ್ಟಣಗಳ ಮಕ್ಕಳು ಓದಲಿ, ಬಿಡಲಿ, ಶ್ರೀಮಂತ ವರ್ಗದ ಜನ ಮತ್ತು ಅವರ ಮಕ್ಕಳು ಮರಿ ಮಾತ್ರ ಓದಿದರೆ ಸಾಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇರುವ ಹಾಗಿದೆ- ಸರ್ಕಾರದವರಿಗೆ ಶ್ರೀಮಂತರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಕಳಕಳಿ ಇದೆಯೇ ಹೊರತು ಹಳ್ಳಿಯ ಮಕ್ಕಳಿಗೆ, ತುಳಿಯಲ್ಪಟ್ಟ ಮತ್ತು ಅಳಿಯಲ್ಪಟ್ಟ ಕುಟುಂಬಗಳಿಂದ ಬಂದ ಭೂಗತವಾಗಿ ಇವತ್ತು ಮೇಲೆ ಏಳುತ್ತಿರುವವರ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಬಗೆ ಪ್ರಾಮಾಣಿಕ ಕಳಕಳಿ ಇಲ್ಲ ಎನ್ನುವ ಮಾತು ಕಂಡುಬರುತ್ತದೆ.

ಇನ್ನು ರಾಜ್ಯದಲ್ಲಿರತಕ್ಕ ನರ್ಸರಿ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳಲ್ಲಿರತಕ್ಕ ಅಧ್ಯಾಪಕರುಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಸ್ವಲ್ಪ ತುಲನೆ ಮಾಡಬೇಕಾಗಿದೆ. ಸುಮಾರು ೪೩ ಲಕ್ಷ ವಿದ್ಯಾರ್ಥಿಗಳು ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ, ಅವರಿಗೆ ಕೊಟ್ಟಿರತಕ್ಕ ಅಧ್ಯಾಪಕರ ಸಂಖ್ಯೆ ೧೧ ೦೦,೮೯೧. ನಮ್ಮ ವಿದ್ಯಾರ್ಥಿಗಳು ಬುದ್ಧಿವಂತರು. ದೇಶದ ಮುಂದಿನ ಭವಿಷ್ಯ ಇವರ ಕೈಯಲ್ಲಿದೆ. ಎಂದು ಹೇಳಿ ಯಾರು ಯಾರು ಬರುತ್ತಾರೋ ಅವರಿಗೆ ಈ ಮಕ್ಕಳ ಕೈಲಿ ಚಪ್ಪಾಳೆ ಹೊಡಿಸಿ, ಮೆರವಣಿಗೆ ಮಾಡಿಸುವ ಮಕ್ಕಳಿಗೆ ಈ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೀರಾ ? ನಮ್ಮ ಹಳ್ಳಿಗಳಲ್ಲಿ ಸುಮಾರು ೩೦೦-೪೦೦ ವಿದ್ಯಾರ್ಥಿಗಳಿಗೆ ಒಬ್ಬರು ಅಥವಾ ಇಬ್ಬರು ಅಧ್ಯಾಪಕರು ಇರುತ್ತಾರೆ ಇನ್ನು ಏಕೋಪಾಧ್ಯಾಯರ ಶಾಲೆಗಳನ್ನು ಬಿಡಿ ; ಎಲ್ಲಾ ಬಾಗಿಲುಗಳನ್ನು ಹಾಕಿ ಬೀಗ ಜಡಿದು, ಛೇರ್ಮನ್ ಕೈಲಿ ಬೀಗದೆಸಲು ಇರುತ್ತದೆ. ಮಂತ್ರಿಗಳು ಅಥವಾ ಇನ್‌ಸ್ಪೆಕ್ಟರುಗಳು ಬರುತ್ತಿದ್ದಾರೆ ಎಂದು ಕೇಳಿದಾಗ ಬಾಗಿಲು ತೆರೆಯುತ್ತಾರೆ. ಹೀಗೆ, ವಿದ್ಯಾರ್ಥಿಗಳ ಪ್ರಮಾಣಕ್ಕನುಗುಣವಾಗಿ ಅಧ್ಯಾಪಕರನ್ನು ಕೊಡದೇ ಇರುವುದು ಬಹಳ ವಿಷಾದಕರ ಎಂದು ಹೇಳಬೇಕಾಗಿದೆ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೆ ಅಧ್ಯಾಪಕರು ನೇರ ಸಂಪರ್ಕ ಇಟ್ಟು ಕೊಳ್ಳಬೇಕಾದರೆ, ಕನಿಷ್ಠ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರಂತೆ ನೇಮಕ ಮಾಡಬೇಕಾಗಿದೆ, ಹಾಗೆ ಮಾಡಿದ ಪಕ್ಷದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಹೆಸರು, ಎಲ್ಲಿಂದ ಬರುತ್ತಾನೆ, ಈತನ ಸ್ಥಿತಿಗತಿಗಳೇನು ಎಂಬುದನ್ನು ಉಪಾಧ್ಯಾಯರು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ನನಗೆ ಉಪಾಧ್ಯಾಯನಾಗಿ ಅನುಭವವಿರುವುದರಿಂದ, ಈ ವಿಚಾರ ಚೆನ್ನಾಗಿ ಗೊತ್ತಿದೆ. ಆದುದರಿಂದ ಕನಿಷ್ಠ ೨೦ ಅಥವಾ ೨೫ ಮಂದಿ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸುವುದು ಒಳ್ಳೆಯದು, ಆದರೆ, ೪೩ ಲಕ್ಷ ಚಿಲ್ಲರೆ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಚಿಲ್ಲರೆ ಅಧ್ಯಾಪಕರನ್ನು ಕೊಟ್ಟಿರತಕ್ಕ ಈ ಸರ್ಕಾರ, ಇವತ್ತಿನ ದಿವಸ ನೂರು ಹನ್ನೊಂದು ಕೋಟಿ ರೂಪಾಯಿಗಳನ್ನು ಕೇಳುವುದಕ್ಕೆ ಕೂತಿದೆ ಯಾವ ದೃಷ್ಟಿಯಿಂದ ಕೊಡಬೇಕು ? ಏತಕ್ಕೆ ಕೊಡಬೇಕು ? ಹಳ್ಳಿಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಶಾಲೆಗೆ ಕಳುಹಿಸುವ ಏರ್ಪಾಡು ಮಾಡದೇ ಇರುವುದಕ್ಕೆ ಕೊಡಬೇಕೇ ? ಅಥವಾ ೪೩ ಲಕ್ಷ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಅಧ್ಯಾಪಕರನ್ನು ನೇಮಕ ಮಾಡಿದ ಪಾಪಕ್ಕೆ ಕೊಡಬೇಕೇ ? ಅಥವಾ ಬೆಂಚು, ಕುರ್ಚಿ, ಟೇಬಲುಗಳಿಗೆ ಕೊಡಬೇಕೇ ? ಯಾವುದಕ್ಕೆ ಕೊಡಬೇಕು ? ಈ ವಿದ್ಯಾ ಇಲಾಖೆಗೆ, ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರಿಗೆ ನಾವು ಮೂರು ಕಾಸೂ ಕೊಡುವುದಕ್ಕೆ ತಯಾರಿಲ್ಲ.

ಶ್ರೀ ಎ. ಮಲ್ಲಿಕಾರ್ಜುನಸ್ವಾಮಿ.— ನನಗೆ ಕೊಡಬೇಡಿ : ವಿದ್ಯಾ ಇಲಾಖೆಗೆ ಕೊಡಿ.

ಶ್ರೀ ಎಸ್. ಹಮೀದ್ ಷಾ —ಈಗ ಮೂರು ಕಾಸು ಚಲಾವಣೆಯಲ್ಲಿ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಈಗ ಎಲ್ಲಾ ಪೈಸೆ ಲೆಕ್ಕ. ಎಲ್ಲರೂ ಹೊಸಬರೇ. ಎಲ್ಲೆಲ್ಲೂ ಹೊಸತನವೇ, ಈಗೆಲ್ಲಾ ಹೊಸದಾಗಿ ಹುಟ್ಟುತ್ತಿದ್ದಾರೆ, ಹನ್ನೊಂದು ತಿಂಗಳಿಂದೀಚೆಗೆ ಈಗ ತೊಟ್ಟಿಲು ಶಾಸ್ತ್ರ, ಪ್ರಾರಂಭವಾಗಿದೆ.

ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ನಡೆಯತಕ್ಕಂಥ ಶಿಕ್ಷಣ ಏನು ಇದೆ ಇದು ಮಕ್ಕಳಿಗೆ ಸರಿಯಾಗಿ ಮುಟ್ಟುವಂತಾಗಲು ಅಧ್ಯಾಪಕರ ನೇಮಕದ ಬಗ್ಗೆ ತೀವ್ರ ತರವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢ ಶಾಲೆಗಳಲ್ಲಿ ಬಹಳವಾಗಿ ಖಾಸಗೀ ವಿದ್ಯಾಸಂಸ್ಥೆಗಳು ಇವೆ. ಖಾಸಗೀ ವಿದ್ಯಾಸಂಸ್ಥೆಗಳ ಬಗ್ಗೆ ಅಂದಿನಿಂದ ಇಂದಿನವರೆಗೆ ಬಹುಶಃ ಈ ಸರ್ಕಾರ ಉರುಳಿ, ನಮ್ಮ ಪಕ್ಷದ ಸರ್ಕಾರಬರುವವರೆಗೆ ಹೇಳುತ್ತಲೇ ಇದ್ದೇನೆ. ಈ ವಿಚಾರದಲ್ಲಿ ಈ ಸದನದಲ್ಲೇ ಸಾಕಷ್ಟು ಹೇಳಿದ್ದೇನೆ. ಇವತ್ತಿಗೂ ಕಣ್ಣು ಕುಕ್ಕುವ ರೀತಿಯಲ್ಲಿ ಒಂದು ವರ್ಷಕ್ಕೆ ಕನಿಷ್ಠಪಕ್ಷ ೨೫ ಲಕ್ಷ ರೂಪಾಯಿಗಳನ್ನು ದುಡಿಮೆ ಮಾಡತಕ್ಕ ವ್ಯಕ್ತಿ ಇವತ್ತು ಬೆಂಗಳೂರು ನಗರದಲ್ಲಿ ಖಾಸಗೀ ಶಾಲೆಯನ್ನು ನಡೆಸುತ್ತಿದ್ದಾರೆ, ಅಂದರೆ ಆಶ್ಚರ್ಯ ಅಲ್ಲವೇ ? ಇಲಾಖೆಗೆ ಕೆಳಗೆ ಸರ್ಕಾರದ ಕೆಳಗೆ ವಿಧಾನ ಸೌಧದ ಬುಡದಲ್ಲಿ, ರಾಜಧಾನಿಯಲ್ಲಿ ಇಂದು ನಡೆಯುತ್ತಿದೆ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಶ್ರೀಮಾನ್ ಶಾಮಣ್ಣನವರು ಮತ್ತಿತರ ಸದಸ್ಯರು ಹೇಳಿದ್ದಾರೆ ತಮಗೆ ಗೊತ್ತಿದೆ ಸ್ವಾಮಿ, 'ಕಮಲಾ ನೆಹರು ಮಕ್ಕಳ ಮಂದಿರ, ಜಯನಗರ, ಬೆಂಗಳೂರು' ಈ ಖಾಸಗೀ ವಿದ್ಯಾಸಂಸ್ಥೆಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇಲ್ಲಿ ಇವತ್ತಿಗೂ ಕೂಡ ಶಿಶುವಿಹಾರ, ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಂದ ತಿಂಗಳಿಗೆ ೩ರೂಪಾಯಿ, ೭ ರೂಪಾಯಿ, ೫ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಇದರ

ಜೊತೆಗೆ ಡೊನೇಷನ್ ಫೀ ಎಂದು ತೆಗೆದುಕೊಳ್ಳುತ್ತಿದ್ದಾರೆ. ಬಿಲ್ಡಿಂಗ್ ಗ್ರಾಂಟ್ ೧೯೭೩-೭೪ರಲ್ಲಿ ೧೧,೦೦೦ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್ ಮೀಡಿಯಂ ಎರಡೂ ಇದೆ. ಸರ್ಕಾರ ಮತ್ತು ಇಲಾಖೆಯ ಕಣ್ಣಿಗೆ ಮಣ್ಣು ಹಾಕಿದ್ದಾರೆ. ಇವತ್ತು ಶಾಲೆಯಿರತಕ್ಕಂಥಾದ್ದನ್ನು ನಮ್ಮದೇ ಸ್ವಂತ ಕಟ್ಟಡ ಎಂದು ಹೇಳುತ್ತಿದ್ದಾರೆ. ಕಟ್ಟಡದ ನಂಬರು ೩೦೦. ೩ನೇ ಕ್ರಾಸ್. ಮನೆಯ ಮಾಲೀಕರು ಎಸ್. ಎಸ್. ತಿವಾರಿ, ರಿಟೈರ್ ಪರ್ಚೇಸ್ ಆಫೀಸರ್, ಹೆಚ್. ಎ. ಎಲ್. ಇವರು ಸಾಲ ತೆಗೆದು ಮನೆ ಕಟ್ಟಿ ಬಾಡಿಗೆ ಕೊಟ್ಟಿದ್ದಾರೆ. ಇದಕ್ಕೆ ಸಾಕಷ್ಟು ರುಜುವಾತು ಇದೆ. ತನ್ನ ಬಿಲ್ಡಿಂಗ್ ಎಂದು ಹೇಳಿಕೊಂಡು ಸರ್ಕಾರದಿಂದ ಹಣ ಲಪಟಾಯಿಸುತ್ತಿದ್ದಾರೆ. ಬೆಟರ್‌ಮೆಂಟ್ ಫೀ ಮತ್ತಿತರ ಫೀಜುಗಳಿಂದ ಪ್ರತಿ ತಿಂಗಳೂ ಮತ್ತು ಪ್ರತಿ ವರ್ಷವೂ ಹಣವನ್ನು ಲಪಟಾಯಿಸುತ್ತಿದ್ದಾರೆ. ಇದರ ಬಗ್ಗೆ ಯಾರಿಗೆ ಹೇಳುವುದು ? ಆಫೀಸರ್ಸ್ ಬಗ್ಗೆ ಹೇಳುವುದಾದರೆ, ಇವತ್ತು ಮಲ್ಲಿಕಾರ್ಜುನಸ್ವಾಮಿಯವರ ಅದೃಷ್ಟ ಚೆನ್ನಾಗಿದೆ, ನಿಷ್ಠೆ ಮತ್ತು ಪ್ರಾಮಾಣಿಕರಾದ ಅಧಿಕಾರ ವರ್ಗ ಇದೆ. ನಿಷ್ಠೆಯಿಂದಿರುವ ಅಧಿಕಾರಿಗಳು ಯಾರನ್ನು ಹಿಡಿಯುವುದಕ್ಕೆ ಹೋಗುತ್ತಾರೆ, ಅಂಥವರ ಬಗ್ಗೆ ಇಲ್ಲಸಲ್ಲದ ಅಪವಾದಗಳೂ ನಾನಾರೀತಿಯ ಕಾಗದಗಳನ್ನು ಬರೆಸುವುದು, ತಂತಿಗಳನ್ನು ಕಳುಹಿಸುವುದು ಮಾಡುತ್ತಾರೆ; ಯಾರಿಗೆ, ಪ್ರಧಾನ ಮಂತ್ರಿಯವರಿಗೆ, ರಾಷ್ಟ್ರಪತಿಯವರೆಗೆ ಇನ್ನೂ ಅಂಥಜನ ಎಲ್ಲೂ ಇಲ್ಲ; ಭೂಲೋಕದೊಳಗೂ ಇಲ್ಲ, ಅಂಥವರ ಕಡೆಯಿಂದ ಬಚಾವಾಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥವರು ಸರ್ಕಾರಕ್ಕೆ ವಂಚನೆ ಮಾಡಿ ಹಣ ದೋಚುತ್ತಿದ್ದಾರೆ. ಖಾಸಗೀ ಶಾಲೆಗಳ ಜನರೆಲ್ಲಾ ಸೇರಿ "ಕರ್ನಾಟಕ ವಾಲಂಟರಿ ಎಜುಕೇಷನ್ ಇನ್‌ಸ್ಟಿಟ್ಯೂಟ್ ಆರ್ಗನೈಜೇಷನ್" ಎಂದು ಬೆಂಗಳೂರಿನಲ್ಲಿ ಒಂದು ಸಂಸ್ಥೆ ಮಾಡಿಕೊಂಡು, ಈ ಸಂಸ್ಥೆ ಮೂಲಕ ಭಾರಿ ದೊಡ್ಡ ಆಂದೋಲನವನ್ನು ಪ್ರಾಮಾಣಿಕರಾದ ಅಧಿಕಾರಿಗಳ ವಿರುದ್ಧ, ಇಲಾಖೆ ವಿರುದ್ಧ ನಡೆಸಲಿಕ್ಕೆ ಸನ್ನಾಹಮಾಡಿದ್ದಾರೆ. ಮೋಜವಾಣಿಗಳಿಗೆ ಒಳಗಾಗದೇ ಇರತಕ್ಕ ಅಧಿಕಾರಿಗಳ ಬಗ್ಗೆ ಸತ್ಯಕ್ಕೆ ದೂರವಾದ ಆರೋಪಗಳನ್ನು ಹೊರಿಸುತ್ತಿದ್ದಾರೆ. ಅವರೂ ಒಪ್ಪದೇ ಇದ್ದಾಗ ನಾನಾರೀತಿಯ ಮಾಯಾಜಾಲ; ಬಲೆಗಳನ್ನು ಹಾಕುತ್ತಾರೆ. ಮಾಯಾಜಾಲಕ್ಕೆ ಮತ್ತು ಬಲೆಗೆ ಬೀಳತಕ್ಕ ಒಂದು ಸಣ್ಣ ವೀಕ್‌ನೆಸ್ ಯಾವಾದರೂ ಅಧಿಕಾರಿಗಳಲ್ಲಿ ಇದ್ದರೆ, ಅವರ ನೆತ್ತಿಯಮೇಲೆ, ಕತ್ತಿನ ಮೇಲೆ ಕೂತುಕೊಂಡು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಈ ವ್ಯಕ್ತಿ ಈರೀತಿ ನಡೆದುಕೊಂಡು ಬಂದಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿವೆ ? ಏನು ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಹೇಳುವುದಾದರೆ ಮಾನ್ಯ ಅಧ್ಯಕ್ಷರೇ ವ್ಯಕ್ತಿಯ ಹೆಸರು ಎಂ. ಎಸ್. ಶೇಷಗಿರಿರಾವ್. ಇಂಥ ವ್ಯಕ್ತಿಗಳಿಗೆ ಮೀಸಾ ಮತ್ತು ಡಿ. ಐ. ಆರ್. ಇಲ್ಲ. ಯಾರು ಪ್ರಾಮಾಣಿಕವಾಗಿ ಇರುತ್ತಾರೆ. ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಒಳ್ಳೆಯದನ್ನು ಹೇಳುತ್ತಾರೆ ಅಂಥವರಿಗೆ ಇದೆಲ್ಲಾ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಕ್ಕಳಿಂದ ಫೀ ತೆಗೆದುಕೊಳ್ಳುವುದು ಅಪರಾಧವೆ ?

ಶ್ರೀ ಕೋಣಂದೂರು ಲಿಂಗಪ್ಪ.—ತೆಗೆದುಕೊಳ್ಳಲಿ ಅದಕ್ಕೆ ಲೆಕ್ಕ ಇಲ್ಲ; ಹಣವನ್ನು ಬ್ಯಾಂಕಿಗೆ ಕಟ್ಟಿ ಅಕೌಂಟ್ ಇಡಬೇಕು ; ಅದನ್ನೂ ಮಾಡಿಲ್ಲ. ಎಲ್ಲವೂ ತಮ್ಮ ಸ್ವಂತ ಕಿಸೆಯೊಳಗೆ ಇರುತ್ತದೆಯೋ, ಹೊರತು ಬೇರೆ ಇಲ್ಲ. ಸರ್ಕಾರದಿಂದ ೧೮ ಪರ್ಸೆಂಟ್ ಗ್ರಾಂಟ್ ಕೂಡ ಸಿಗುತ್ತದೆ. ಅಧ್ಯಾಪಕ ವರ್ಗದವರೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಕ್ಕಳಿಗೆ ವಿದ್ಯಾಭ್ಯಾಸ ಚೆನ್ನಾಗಿ ದೊರೆಯುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಚಾಕು ಚೆನ್ನಾಗಿದೆಯೆಂದು ಕತ್ತು ಕೊಯ್ದುಕೊಳ್ಳುವುದಕ್ಕೆ ಆಗುತ್ತದೆಯೋ ? ಶಿಕ್ಷಣದ ನೆಪದಲ್ಲಿ ಸರ್ಕಾರಿ ಖಜಾನೆಯನ್ನು ದೋಚುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಇಂಥ ಖಾಸಗೀಶಾಲೆಗಳು ಬೇಕಾದಷ್ಟು ನಮ್ಮ ರಾಜ್ಯದಲ್ಲಿ, ಬೆಂಗಳೂರು ನಗರದಲ್ಲಿ ಮೈಸೂರಿನಲ್ಲೂ ಕೂಡ ಇವೆ. ಇವರು ಮೈಸೂರಿನಲ್ಲಿರುವುದನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. ಇವರಿಗೆ ತುಂಬಾ ಭಯ ಉಂಟು. ಅಲ್ಲಿ ಯಾರು ನಡೆಸುತ್ತಿದ್ದಾರೆಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಇವರು ನಾನಾ ಶಾಲೆಗಳನ್ನು ನಡೆಸುತ್ತಿದ್ದಾರೆ. ಎ. ಐ. ಸಿ. ಸಿ. ಮೆಂಬರ್, ಇವರ ಬಗ್ಗೆ ಮಾತ್ರ ಹೋಗುವುದಿಲ್ಲ. ಬಹುಶಃ ನಾನಾದರೂ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ, ರಾಯಲ್ ಸ್ಕೂಲ್ ಎಜುಕೇಷನ್ ಸೊಸೈಟಿ ಮೈಸೂರಿನಲ್ಲಿದೆ. ನಾವು ಹೇಳುತ್ತಿದ್ದೇವೆ, ಅವರು ಕೇಳುತ್ತಿದ್ದಾರೆ, ಹೇಳಿದ್ದೇ ಹೇಳೋ ಕಿಸ್‌ಬಾಯ್‌ದಾಸ ಎಂದ ಹಾಗೆ ಇಂಥಾದ್ದು ಬೇಕಾದಷ್ಟು ಇದೆ, ಇಂಥವರನ್ನು ಒಬ್ಬರನ್ನಾದರೂ ಹಿಡಿದ್ದಿದ್ದೀರಾ ? ವಿದ್ಯಾ ಇಲಾಖೆಯಲ್ಲಿ ಜಾಯಿಂಟ್ ಡೈರೆಕ್ಟರ್ ಟಿ. ರಾಮಯ್ಯ ಎಂದು ಇದ್ದಾರೆ.

ಇವರು ಶುದ್ಧಹಸ್ತರು ಇಂಥವರಿಗೆ ಕೆಟ್ಟ ಹೆಸರು ತರುವುದಕ್ಕೆ ಒಂದು ದೊಡ್ಡ ಜಾಲವನ್ನೇ ಹೂಡಿ ಪಿತೂರಿ ಮಾಡುತ್ತಿದ್ದಾರೆ, ಈ ಬಗ್ಗೆ ಸರ್ಕಾರ ಏನೂ ಕ್ರಮ ಕೈಗೊಂಡಿದೆ ಎಂದು ನಾನು ಕೇಳುತ್ತೇನೆ, ಇನ್ನೂ ಇಂಥ ಅನೇಕ ವಿಷಯಗಳು ಇವೆ. ಅನೇಕ ಇಂಥ ಗೋಲಿಮಾಲಿ ಕಂಪನಿಗಳು ಇವೆ, ತಮ್ಮ ಸರ್ಕಾರದ 20 ಪಾಯಿಂಟ್ ಪ್ರೋಗ್ರಾಂನಲ್ಲಿ ಇಂಥ ಆಪಾ ಬಿಸಿನೆಸ್ ಎಲ್ಲೆಲ್ಲೂ ನಡೆಯುತ್ತಿದೆ, ಈ ಬಗ್ಗೆ ತೀವ್ರತರವಾದ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ,

ಇನ್ನು ನಮ್ಮ ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ನಡೆಯುತಕ್ಕಂಥಾ ಜೂನಿಯರ್ ಅಪ್‌ಗ್ರೇಡ್ ಜೂನಿಯರ್ ಕಾಲೇಜುಗಳು ಮತ್ತು ಹೈಸ್ಕೂಲ್‌ಗಳಲ್ಲಿ ಕಾಲೇಜುಗಳಲ್ಲಿ ಸುಮಾರು 12 ಲಕ್ಷ ಜನ ವಿದ್ಯಾರ್ಥಿಗಳು ಇದ್ದಾರೆ. ಇವರಲ್ಲಿ ಅಧ್ಯಾಪಕರ ಸಂಖ್ಯೆ 25 ಸಾವಿರ. ಈ ಬಗ್ಗೆ ತಾವು ಸ್ವಲ್ಪ ವಿಚಾರ ಮಾಡಬೇಕು, ಹೀಗಿದ್ದರೆ ವಿದ್ಯಾಭ್ಯಾಸದಲ್ಲಿ ಪ್ರಗತಿ ಆಗುವುದಕ್ಕೆ ಸಾಧ್ಯವೇ ಎಂದು. ಈ ವಿದ್ಯಾಭ್ಯಾಸದಲ್ಲಿ ಬಹಳ ಪ್ರಗತಿ ಆಗಬೇಕು ಎಂದು ತಾವೇನು ಘೋಷಣೆ ಮಾಡುತ್ತಿದ್ದೀರಿ, ಈ ಒಂದು ಕಡಿಮೆ ಸಂಖ್ಯೆಯಲ್ಲಿ ಅಧ್ಯಾಪಕರು ಇದ್ದರೆ ಪ್ರಗತಿ ಸಾಧಿಸುವುದಕ್ಕೆ ಸಾಧ್ಯವೇ, ಆಲೋಚನೆ ಮಾಡಿ. ಕಾಲೇಜುಗಳಲ್ಲಿ ನಾನಾ ಸಬ್ಜೆಕ್ಟ್‌ಗಳು ಇವೆ, ಒಂದೊಂದು ಸಬ್ಜೆಕ್ಟ್‌ನಲ್ಲೂ ಪರಿಣತರಾದಂಥಾ ಅಧ್ಯಾಪಕರು ಇರಬೇಕಾಗುತ್ತದೆ. ಹೀಗಿರುವಾಗ 12 ಲಕ್ಷ ಹುಡುಗರಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ 25 ಸಾವಿರ ಅಧ್ಯಾಪಕರು ಸಾಕೇ! ಈ ಒಂದು ಕೊರತೆಯಿಂದಾಗಿ ಈವೊತ್ತಿನ ದಿವಸ ಸರ್ಕಾರಕ್ಕೆ ಸಾರ್ವಜನಿಕರಿಂದ ದೂರು ಬರುತ್ತದೆ. ಆ ಶಾಲೆಗಳಲ್ಲಿ ಫಲಿತಾಂಶ ಸರಿಯಾಗಿ ಬಾರದೇ ಹೋದರೆ ಅಧ್ಯಾಪಕರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ಎಂದು ಹೇಳುತ್ತೀರಿ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 42 ಲಕ್ಷ ಜನ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಒಂದು ಲಕ್ಷ ಜನ ಅಧ್ಯಾಪಕರು ಇರಬೇಕಾದರೆ, ಈ ರೀತಿ ಅಧ್ಯಾಪಕರ ಕೊರತೆ ಇರುವಾಗ ಈ ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧಿಸುವುದಕ್ಕೆ ಹೇಗೆ ಸಾಧ್ಯ, ತಾವು ಇದನ್ನು ಆಲೋಚನೆ ಮಾಡಬೇಕು. ಅದರಿಂದ ಹೆಚ್ಚು ಜನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅಧ್ಯಾಪಕರ ಕೊರತೆಯೇ ಮುಖ್ಯ ಕಾರಣ. ನರ್ಸರಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮತ್ತು ಜೂನಿಯರ್ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಇರುವುದರಿಂದ ಸರ್ಕಾರದವರು ಇದರ ಬಗ್ಗೆ ತತ್‌ಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಬರೇ ಡಂಬಾಚಾರಗಳ ಮಾತುಗಳನ್ನಾಡದೇ, ಬರೇ ಭಾಷಣಗಳನ್ನು ಮಾಡದೇ ಈ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಏನು ಇದ್ದಾರೆ ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವೊತ್ತು ಪ್ರತಿಯೊಂದು ಖಾಸಗಿ ಶಾಲೆ ನೋಡಿದರೂ ಕೂಡ ಫಲಿತಾಂಶಗಳೂ ಚೆನ್ನಾಗಿ ಬರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಇದೇ ಸರ್ಕಾರೀ ಮತ್ತು ಸರ್ಕಾರೀತರ ಅಂದರೆ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಿಗೆ ಸೇರಿದ ಶಾಲೆಗಳಲ್ಲಿ ಫಲಿತಾಂಶ ನೋಡಿದರೆ ಕಡಿಮೆ ಬರುತ್ತಾ ಇದೆ. ಈ ಮಾತನ್ನು ನನ್ನ ಅನುಭವದಿಂದ ಹೇಳುತ್ತಾ ಇದ್ದೇನೆ. ಇದಕ್ಕೆ ಮೂಲ ಕಾರಣ ಅಧ್ಯಾಪಕರ ಕೊರತೆಯೇ ಹೊರತು ಬೇರೆ ಇನ್ನಾವುದೂ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಲು ಇಚ್ಛಿಸುತ್ತೇನೆ.

ಇನ್ನು ಬೆಟರ್‌ಮೆಂಟ್ ಕಮಿಟಿ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಈ ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ 35 ಸಾವಿರ ಬೆಟರ್‌ಮೆಂಟ್ ಕಮಿಟಿಗಳು ಇದೆ. ಇರಲಿ, ಬೇಡ ಎಂದು ಹೇಳುವುದಿಲ್ಲ. ಈ ಬಗ್ಗೆ ನನ್ನ ಅನುಭವಕ್ಕೆ ಬಂದಿರುವುದನ್ನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಈ ಬೆಟರ್‌ಕಮಿಟಿಗಳು ಏನು ಇವೆ ಅವು ಸಭೆ ಸೇರುವುದಿಲ್ಲ. ಅದರ ಬದಲು ಅಲ್ಲಿರತಕ್ಕಂಥಾ ಅಧ್ಯಾಪಕರುಗಳು ತಮಗೆ ಬೇಕಾದ ರೀತಿಯಲ್ಲಿ ನಿರ್ಣಯ ಮಾಡಿ ಆ ಪುಸ್ತಕಗಳನ್ನು ಮನೆಗಳಿಗೆ ತೆಗೆದುಕೊಂಡು ಹೋಗಿ ರುಜುಗಳನ್ನು ಹಾಕಿಸಿಕೊಂಡು ಬರುತ್ತಾರೆ. ನನಗೆ ಚೆನ್ನಾಗಿ ಗೊತ್ತಿರುವ ಹಾಗೆ ಎಷ್ಟೋ ಒಂದು ಕಡೆ ಬಹುಶಃ ಈ ವಿಚಾರ ತಮಗೂ ಗೊತ್ತಿರಬಹುದು, ತಮ್ಮ ಇಲಾಖೆಗೂ ಗೊತ್ತಿದೆ, ತಮ್ಮ ಇಲಾಖೆಯ ಅಧಿಕಾರಿಗಳಿಗೂ ಗೊತ್ತಿದೆ. ಅಲ್ಲಿ ಏನಾಗಿದೆ ಎಂದರೆ ಮಿಡ್ಡೇ ಮೀಲ್ಸ್‌ಗೆ ಕೇರ್ ಸಂಸ್ಥೆಯಿಂದ ಬಂದಂಥಾ ಹಾಲಿನ ಪುಡಿ ಏನಾಗಿದೆ ಎಂದರೆ ಆ ಹಾಲಿನ ಪುಡಿ ಡೊನೇಟ್ ಕೇರ್ ಆಗಿದೆ.

ಅಲ್ಲಿಗೆ ಬಂದಿರತಕ್ಕಂಥಾ ಎಲ್ಲಾ ಹಾಲಿನ ಪುಡಿಯನ್ನೂ ಹೋಟೇಲ್‌ಗೆ ಕೊಟ್ಟುಬಿಟ್ಟಿದ್ದಾರೆ. ಆ ಬಗ್ಗೆ ನಾನು ವಿಚಾರ ಮಾಡಿಕೊಡಬಲ್ಲೆ. ಅವರು ನಿಮಗೆ ಪ್ರಿಯವಾದ ವ್ಯಕ್ತಿ, ಅವರು ಯಾರು ಎನ್ನುವುದು ಕೂಡ ನಿಮಗೆ ಗೊತ್ತಿದೆ, ಆದರೆ ಈ ಸಂದರ್ಭದಲ್ಲಿ ನಾನು ಅವರ ಹೆಸರನ್ನು ಹೇಳುವುದಿಲ್ಲ ಅಂಥಾ ಜನ ಒಂದೇ ಕಡೆ ಶಾಶ್ವತವಾಗಿ ಅಲ್ಲಿಯೇ ಇದ್ದಾರೆ ಮಂತ್ರಿಗಳಾದರೆ ಈವೊತ್ತು ಬರುತ್ತಾರೆ ನಾಳೆ ಹೋಗಬಹುದು. ಆದರೆ ಅವರುಗಳು ಮಾತ್ರ 18-20 ವರ್ಷದಿಂದಲೂ ಕೂಡ ಒಂದೇ ಕಡೆ ಇದ್ದಾರೆ. ರಾಜಗುರುಗಳು ಇದ್ದ ಹಾಗೆ ಅಲ್ಲೇ ಇದ್ದಾರೆ. ರಾಜ ಗುರು ಎಂದರೆ ಏನರ್ಥ ಅನ್ನುವುದನ್ನು ತಿಳಿದುಕೊಂಡಿದ್ದೀರಿ! ರಾಜ ಅಂದರೆ ರಾಜಕೀಯ ಗುರು ಅಂಥಾ ಗುರು ಎಂದು ಅರ್ಥ. ಒಟ್ಟಿನಲ್ಲಿ ಇದರ ಅರ್ಥ ರಾಜಕೀಯ ಕೆಲಸ ಮಾಡುವುದು ಎಂದರ್ಥ. ಇಂಥಾ ರಾಜಗುರುಗಳು ನಮ್ಮ ರಾಜ್ಯದಲ್ಲಿ ಬಹಳ ಜನ ಇದ್ದಾರೆ. ಅವರು ಈ ಕೇರ್ ಸಂಸ್ಥೆಯನ್ನು ಡೋಂಟ್ ಕೇರ್ ಮಾಡುವುದೂ ಅಲ್ಲದೆ ಮಿನಿಸ್ಟರನ್ನೂ ಕೂಡ ಡೋಂಟ್ ಕೇರ್ ಮಿನಿಸ್ಟರ್ ಮಾಡುತ್ತಾರೆ. ಅವರು ಏನು ಬೇಕಾದರೂ ಮಾಡುತ್ತಾರೆ ಅಂಥಾ ಜನ ಇದರಲ್ಲಿ ಇದ್ದಾರೆ. ನಾನು ಈ ಬಗ್ಗೆ ನಾಲ್ಕು ವರ್ಷದಿಂದಲೂ ಕೂಡ ಹೇಳುತ್ತಾ ಇದ್ದೇನೆ. ಅವರು ಅಲ್ಲೇ ಬೇರು ಬಿಟ್ಟಿದ್ದಾರೆ, ನಿಮ್ಮ ಡಿ.ಪಿ.ಐ. ಆಫೀಸಿನಲ್ಲಿರತಕ್ಕಂಥಾ ಇಂಥಾ ಅಧಿಕಾರಿಗಳನ್ನು ಇಲ್ಲಿಯವರಿಗೇನಾದರೂ ಟ್ರಾನ್ಸ್‌ಫರ್ ಮಾಡಿದ್ದೀರಾ ಎಂದು ಕೇಳುತ್ತೇನೆ. ಒಂದುವೇಳೆ ನೀವು ಟ್ರಾನ್ಸ್‌ಫರ್ ಮಾಡಿದ್ದರೂ ಕೂಡ ಯಾವ ರೀತಿ ಮಾಡಿದ್ದೀರಿ ಎಂದರೆ ಒಂದು ಕುರ್ಚಿಯಿಂದ ಇನ್ನೊಂದು ಕುರ್ಚಿಗೆ, ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಅತಿ ಹೆಚ್ಚು ಎಂದರೆ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ, ಒಂದು ಜಾಯಿಂಟ್ ಡೈರೆಕ್ಟರ್ ಆಫೀಸಿನಿಂದ ಇನ್ನೊಂದು ಜಾಯಿಂಟ್ ಡೈರೆಕ್ಟರ್ ಆಫೀಸಿಗೆ ಟ್ರಾನ್ಸ್‌ಫರ್ ಮಾಡಿದ್ದೀರಿ. ಅಲ್ಲೇ ಬಿಡದಲ್ಲೇ ಇರತಕ್ಕಂಥಾವರನ್ನು ಒಬ್ಬೊಬ್ಬರನ್ನೂ ಕೂಡ ನೀವು ಈವೊತ್ತಿನವರೆಗೂ ಅಲ್ಲಿಂದಾಚೆ ಅಲುಗಾಡಿಸುವುದಕ್ಕಾಗಲಿಲ್ಲ. ಅವರನ್ನು ಅಲುಗಾಡಿಸುವುದಕ್ಕೆ ನಿಮ್ಮ ಹಣೆಯಲ್ಲಿ ಬರೆದಿಲ್ಲ. ಅಂಥಾ ಜನರು ಈ ಕೇರ್ ಸಂಸ್ಥೆಯಲ್ಲಿ ಇದ್ದಾರೆ. ಈ ಕೇರ್ ಬಗ್ಗೆ ಬೆಟರ್‌ಮೆಂಟ್ ಕಮಿಟಿಗಳು ಏನು ಇವೆ ಅವರಿಂದ ರಾಜು ಹಾಕಿಸಿಕೊಂಡು ಈ ಕೇರ್ ಸಂಸ್ಥೆಯಿಂದ ಬಂದಿರತಕ್ಕಂಥಾ ಹಾಲಿನಪುಡಿಯನ್ನು ಏನು ಮಾಡುತ್ತಾ ಇದ್ದಾರೆ ಎನ್ನುವುದನ್ನು ಹೇಳಬೇಕಾದರೆ ಇದು ಶ್ವೇತಕಥೆ ಆದ ಹಾಗೆ ಆಗುತ್ತದೆ. ಶ್ರೀಮಾನ್ ಚಿಕ್ಕೇಗೌಡರ ಹಾಲಿನ ಶ್ವೇತಕಥೆ ಇದ್ದ ಹಾಗೆ, ವಿದ್ಯಾಕ್ಷೇತ್ರದಲ್ಲಿ ಈ ಕೇರ್ ಸಂಸ್ಥೆಯ ಒಂದು ಹಾಲಿನಕಥೆ ಶ್ವೇತಕಥೆಯನ್ನು ಹೇಳಬೇಕಾಗುತ್ತದೆ, ಈ ಬಗ್ಗೆ ಒಂದು ಘಟನೆ ನಡೆದಿರುವುದನ್ನು ಹೇಳುತ್ತೇನೆ. ಒಂದು ಹೆಂಚಿನ ಮನೆಯಲ್ಲಿ 4 ಹಂಚುಗಳನ್ನು ತೆಗೆದಿದ್ದಾರೆ ರಿಪೀಸ್ ಹಾಗೆಯೇ ಇದೆ ಹಾಗೆಯೇ ಕೆಳಗೆ ಹಗ್ಗ ಬಿಟ್ಟು ಈ ಕೇರ್‌ನ ಮಿಲ್ಕ್ ಪುಡಿಯ ಮೂಟೆಗಳನ್ನು ಎತ್ತುವುದಕ್ಕೆ ಸಾಧ್ಯವೇ? ಈಗಿನ ಕಾಲ ಮಾಯಾ ಬಜಾರ್ ಕಾಲ, ತುರ್ತುಪರಿಸ್ಥಿತಿ ಕಾಲ ಮಂಗಮಾಯ ಕಾಲ, ಈ ನವಕಾಲದಲ್ಲಿ ಏನು ಬೇಕಾದರೂ ಮಾಡಬಹುದು ಹೀಗೆ ಮಾಡಿ ಅಲ್ಲಿ ಲಕ್ಷಾಂತರ ರೂಪಾಯಿನ ಹಾಲಿನ ಪುಡಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿನ ಹಾಲಿನ ಪುಡಿಯ ಮೂಟೆ ನಾಪತ್ತೆಯಾಗಿದೆ. ಈ ಒಂದು ಘಟನೆ ನಡೆದಿದ್ದು ಇದೇ ಬೆಂಗಳೂರಿನ ಪಟ್ಟಣದಲ್ಲೇ, ಅಂದರೆ ಮಡಿವಾಳದಲ್ಲಿ; ಇಲ್ಲಿ 2 1/2 ಲಕ್ಷ ರೂಪಾಯಿನ ಹಾಲಿನ ಪುಡಿ ಈ ರೀತಿ ಮಂಗಮಾಯವಾಗಿದೆ. ನಿಮ್ಮ ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ? ಎಂದು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಆ ಮನೆಯಲ್ಲಿ ರಿಪೀಸ್ ಹಾಗೆಯೇ ಇದ್ದು 4 ಹೆಂಚು ತೆಗೆದು ಕೆಳಗೆ ಹಗ್ಗ ಬಿಟ್ಟು ಆ ಹಾಲಿನ ಪುಡಿಯ ಮೂಟೆಯನ್ನು ಮೇಲಕ್ಕೆ ತೆಗೆದಿದ್ದಾರೆ ಎಂದರೆ ಇದು ಒಂದು ಕಟ್ಟು ಕಥೆಯಾಗುತ್ತದೆ. ನಮ್ಮ ನಾಡಿನಲ್ಲಿ ಒಳ್ಳೆಯ ಕಥೆಗಳೂ ಇದ್ದರೂ ಕೂಡ ಆದರ ಬಗ್ಗೆ ಏನಾದರೂ ಒಂದು ಕಟ್ಟುಕಥೆ ಕಟ್ಟುತ್ತಾರೆ. ಅದು ಏನೇ ಇರಲಿ, ಮಾನ್ಯ ಅಧ್ಯಕ್ಷರೇ, ಈ ದಿವಸ ಆ ಮನುಷ್ಯನನ್ನು ಬಚಾವು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲದೆ ಆ ಮನುಷ್ಯ ಈ 2 1/2 ಲಕ್ಷ ರೂಪಾಯಿನ ಹಾಲಿನ ಪುಡಿ ಕಳುವಾಗ ಹೇಗೆ ಸಿಕ್ಕಿಬಿದ್ದ ಎಂದರೆ ಆ ಹಾಲಿನ ಪುಡಿಯನ್ನು ಮತ್ತಷ್ಟು ತುಂಬಲಿಕ್ಕೆ ಪ್ರಯತ್ನ ಮಾಡಿದ. ಅದು ಸಾಧ್ಯವಾಗದೇ ಹೋಯಿತು ಮತ್ತು ಅದನ್ನು ಹೇಗಾದರೂ ಭರ್ತಿಮಾಡಿ ಲೆಕ್ಕ ಸರಿಮಾಡುವುದಕ್ಕೆ ಪ್ರಯತ್ನಪಟ್ಟ ಅದೂ ಕೂಡ ಸಾಧ್ಯವಾಗದೇ ಹೋಯಿತು. ಈ ರೀತಿಯಲ್ಲಿ ಒಟ್ಟಿನಲ್ಲಿ 2 1/2 ಲಕ್ಷ

ರೂಪಾಯಿನ ಹಾಲಿನ ಪುಡಿ ನಾಪತ್ತೆಯಾಗಿದೆ. ಇದನ್ನು ಬಚಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ನಾನು ಈ ಬಗ್ಗೆ ಹೇಳುವುದು ಸರ್ಕಾರ ಇದರ ಬಗ್ಗೆ ತೀವ್ರವಾಗಿ ತನಿಖೆ ಮಾಡಬೇಕು ಎಂದು ಮತ್ತು ಇದನ್ನು ಸಿ.ಐ.ಡಿ. ತನಿಕೆಗೆ ಒಪ್ಪಿಸಬೇಕು ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ವಿಧ್ಯಾಭ್ಯಾಸದ ಬಗ್ಗೆ ಒಟ್ಟಿನಲ್ಲಿ ನನ್ನ ಒಂದು ಸಲಹೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪ್ರೈವೇಟ್ ಇನ್ಸಿಟ್ಯೂಷನ್ ಏನು ಇವೆ ಮತ್ತು ಬೋಗಸ್ ಇನ್ಸ್ಟಿಟ್ಯೂಟ್ಸ್ ಏನು. ಇವೆ ಇವೆಲ್ಲವನ್ನೂ ಕೂಡ ಸರ್ಕಾರವೇ ತಮ್ಮ ಹತೋಟಿಗೆ ಸಂಪೂರ್ಣವಾಗಿ ತೆಗೆದುಕೊಳ್ಳುವುದಾದರೆ ಈ ಒಂದು ಖಾತೆಗೆ 111 ಕೋಟಿ ರೂಪಾಯಿ ಏನು ಇಟ್ಟಿದ್ದೀರಿ ಇದರಲ್ಲಿ 25 ಕೋಟಿ ರೂಪಾಯಿಯಷ್ಟು ತಮಗೆ ಉಳಿಯುತ್ತದೆ ಎಂದು ಹೇಳುತ್ತೇನೆ. ಮತ್ತು ಈ ಬಗ್ಗೆ ಎಜುಕೇಷನ್ ಸೆಸ್ ಕೂಡ ಇರುವುದನ್ನು ಕೈ ಬಿಡಬಹುದು ಮತ್ತು ರಾಜ್ಯದ ಬೊಕ್ಕಸಕ್ಕೂ ಕೂಡ ಇಷ್ಟು ಹಣ ಉಳಿಯುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ನನ್ನ ಇನ್ನೊಂದು ಸಲಹೆ ಏನೆಂದರೆ ಸರ್ಕಾರ ನಾನು ಹೇಳಿದ ಸಲಹೆಯನ್ನು ಮಾಡುತ್ತದೋ ಇಲ್ಲವೋ, ಆದರೂ ಹೇಳುತ್ತೇನೆ ನಿವು ಇಲಾಖೆಯಲ್ಲಿ ಯಾರು ಪ್ರಾಮಾಣಿಕರಾಗಿ ದಕ್ಷರಾದ ಅಧಿಕಾರಿಗಳು ಇರುತ್ತಾರೋ ಅವರ ಸೇವೆಯನ್ನು ಮುಂದುವರಿಸಿ ಎನ್ನುವ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ.

ಈ ಜಾಯಿಂಟ್ ಡೈರೆಕ್ಟರ್ ಅವರು ಈ ತಿಂಗಳ ಕಡೆಯಲ್ಲಿ ನಿವೃತ್ತರಾಗಲಿದ್ದಾರೆ. ಅವರನ್ನು ಮತ್ತೆ ಮೂರು ವರ್ಷಗಳ ಕಾಲ ಜಾಯಿಂಟ್ ಡೈರೆಕ್ಟರ್ ಕಮ್ ಸ್ಪೆಷಲ್ ಆಫೀಸರ್ರಾ ಎಂದು ನೇಮಕಮಾಡಿ ಕೆಲವೊಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇ ಆದರೆ, ನಿಮ್ಮ ಇಲಾಖೆಯಲ್ಲಿಂತಕ್ಕಂಥ ದುಷ್ಟಾಚಾರ ಮತ್ತು ಭ್ರಷ್ಟಾಚಾರ ಶೇಕಡಾ 7[illegible]ರಷ್ಟು ಆದರೂ ಕಡಿಮೆಯಾಗುತ್ತದೆಂದು ಹೇಳುತ್ತೇನೆ. ಇಂತಹ ದಕ್ಷರಾದಂಥಾ ಮತ್ತು ಶುದ್ಧಹಸ್ತರಾದಂಥ ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿರುವುದು ನಿಮ್ಮ ಒಂದು ಪುಣ್ಯವೆಂದೇ ಹೇಳಬೇಕು ಆದಕಾರಣ ಶ್ರೀ ಟಿ. ರಾಮಯ್ಯ ಎಂಬುವರಿಗೆ ವಿಶೇಷವಾದಂಥಾ ಅಧಿಕಾರವನ್ನು ಕೊಟ್ಟು ಅಧಿಕಾರದಲ್ಲಿ ಮುಂದುವರೆಸಬೇಕೆಂದು ಹೇಳುತ್ತೇನೆ.

2-30 P.M.

ಇನ್ನು ಶಾಲಾ ಕೊಠಡಿಗಳ ಬಗ್ಗೆ ಸರ್ಕಾರದವರು ದುಡ್ಡು ಕೊಡುತ್ತೇವೆಂದು ಹೇಳುತ್ತಾರೆ ಆದರೆ ಈಗ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳ ಕೊರತೆ ಬಹಳ ಇದೆ. ಅವುಗಳನ್ನು ಕಟ್ಟಿಸಿಕೊಡಿ ಎಂದರೆ ಹಣವಿಲ್ಲವೆಂದು ಹೇಳುತ್ತಾರೆ. ಈಗ ಮಕ್ಕಳು ಬೇಸಿಗೆಯಲ್ಲಿ ಮತ್ತು ಮಳೆಗಾಲದಲ್ಲಿ ಹೊರಗಡೆ ಇದ್ದುಕೊಂಡು ವಿದ್ಯಾಭ್ಯಾಸ ಮಾಡಬೇಕಾಗಿದೆ. ಇದನ್ನು ತಪ್ಪಿಸಲು ಎಲ್ಲೆಲ್ಲಿ ಶಾಲಾ ಕಟ್ಟಡಗಳ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂಥಾ ಶಾಲಾ ಅಧ್ಯಾಪಕರಿಗೂ ಸಹ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ವಿಶೇಷವಾದಂಥ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ನರ್ಸರಿ ಮತ್ತು ಪ್ರೈಮರಿ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಲು ಏರ್ಪಾಡು ಮಾಡಿರುವಂತೆ ವಯಸ್ಕರ ಶಿಕ್ಷಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು ಈಗ ಇದನ್ನು ನೋಡಿಕೊಳ್ಳಲು ಒಳ್ಳೆಯ ಅಧ್ಯಕ್ಷರು ಇದ್ದಾರೆ. ಆದಕಾರಣ ಅವರಿಗೆ ಬೇಕಾದಂಥ ಸವಲತ್ತುಗಳನ್ನು ಕೊಟ್ಟು ಈ ಕೆಲಸ ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ಹೇಳುತ್ತೇನೆ, ಈಗ ನಮ್ಮ ರಾಜ್ಯದಲ್ಲಿ ಅವಿದ್ಯಾವಂತರ ಸಂಖ್ಯೆ ಜಾಸ್ತಿ ಇದೆ. ಈಗ ಅಫ್-ಎ-ಮಿಲಿಯನ್ ಜಾಬ್ ಎಂದು ಒಂದು ಸ್ಕೀಮ್ ಮಾಡಿದ್ದೀರಿ. ಆ ಸ್ಕೀಮ್ ಮೂಲಕ ಪ್ರತಿಯೊಬ್ಬ ವಿದ್ಯಾವಂತನು 3 ತಿಂಗಳಲ್ಲಿ ಹತ್ತು ಜನ ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಹೇಳಿ ಮಾಡಿಸಬೇಕು: ಆದಕ್ಕಾಗಿ ಅವರಿಗೆ ಸೂಕ್ತ ಸಂಭಾವನೆ ಕೊಟ್ಟರೆ, ಅವರು ಆ ಕೆಲಸ ಮಾಡುತ್ತಾರೆ. ಮತ್ತು ಈಗ ನಮ್ಮ ರಾಜ್ಯದಲ್ಲಿ ವಯಸ್ಕರ ಮಟ್ಟದಲ್ಲಿ ಅನಕ್ಷರಸ್ಥರ ಸಂಖ್ಯೆ ಏನಿದೆ, ಅದು ಇನ್ನು 5 ವರ್ಷಗಳಲ್ಲಿ ಸಂಪೂರ್ಣವಾಗಿ ಹೋಗುತ್ತದೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ಸೆಕೆಂಡರಿ ಶಿಕ್ಷಣ ಮಂಡಲಿಯವರು ಪರೀಕ್ಷಾ ಫೀ ಏನು ವಸೂಲಿ ಮಾಡುತ್ತಿದ್ದಾರೆ ಅದು ಬಹಳ ಹೆಚ್ಚಾಗಿದೆ, ಈ ಮೂಲಕ ಅವರು ವ್ಯಾಪಾರ ಮಾಡುತ್ತಿದ್ದಾರೋ ಅಥವಾ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೋ ಎಂಬುದು ತಿಳಿಯುತ್ತಿಲ್ಲ. ಪರಿಕ್ಷಾ ಸಮಯದಲ್ಲಿ ಫೀ ಕಟ್ಟಲು ಹಳ್ಳಿಗಳಲ್ಲಿ ಮತ್ತು ಪೇಟೆಗಳಲ್ಲಿರತಕ್ಕಂಥ ಬಡವಿದ್ಯಾರ್ಥಿಗಳು ಬಹಳ ಪರಿತಾಪ ಪಡುತ್ತಿದ್ದಾರೆ. ಆದಕಾರಣ ಅದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಠ್ಯ ಪುಸ್ತಕಗಳ ಬಗ್ಗೆ ನಾವು ಸಾಕಷ್ಟು ಹೇಳುತ್ತಾ ಬಂದಿದ್ದೇವೆ, ಆದರೆ ಸರ್ಕಾರದವರು ಅದರ ಬಗ್ಗೆ ಸರಿಯಾದಂಥ ಕ್ರಮತೆಗೆದುಕೊಂಡಿಲ್ಲ : ಇಲ್ಲಿ ಬಲ್ಕ್ ಪರ್ಚೇಸ್ ಎಂದು ಹೇಳಿದ್ದಾರೆ. ಇವರು ಯಾವ ಯಾವ ಪುಸ್ತಕಗಳನ್ನು ಬಲ್ಕ್‌ಪರ್ಚೆಸ್ ಮಾಡಿದ್ದಾರೆಂದು ಹೇಳುವುದಾದರೆ :

1. Purchase of 40 series of Kannadanadu Mathu Kannadigara Parampare.
2. Purchase of 120 items of Bharata-Bharathi Pustaka Sampada.
3. Purchase of 2,5000 copies-VII Volume of Kannada Viswakosha.

ಇತ್ಯಾದಿ ಇತ್ಯಾದಿ ಎಂದು ಇಲ್ಲಿ ಹೇಳಿದ್ದಾರೆ. ಆದರೆ ಒಂದೇ ಕಡೆ ಏತಕ್ಕೆ ಕೊಳ್ಳಬೇಕೆಂದು ನಾನು ತಮ್ಮನ್ನು ಕೇಳುತ್ತೇನೆ. ಬೇರೆ ಬೇರೆ ಸಂಸ್ಥೆಗಳು ಇಲ್ಲವೇ ? ಆ ಸಂಸ್ಥೆಗಳು ಸಾಕಷ್ಟು ಪುಸ್ತಕಗಳನ್ನು ಪ್ರಕಟ ಮಾಡುತ್ತಿಲ್ಲವೇ ? ಈಗ ಕನ್ನಡ ಸಾಹಿತ್ಯ ಪರಿಷತ್ತಿನವರು ಸಾಕಷ್ಟು ಪುಸ್ತಕಗಳನ್ನು ಪ್ರಕಟ ಮಾಡುತ್ತಿದ್ದಾರೆ. ಸುಪ್ರಸಿದ್ಧವಾದಂಥ ಸಂಸ್ಥೆಗಳವರು ಅನೇಕ ಪುಸ್ತಕಗಳನ್ನು ಪ್ರಕಟವಾಡುತ್ತಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ, ಶಾರದ ಪ್ರಕಾಶನ ಮಂದಿರ ಎಂದು ಇದೆ, ಅದೇರೀತಿ ಧಾರವಾಡದಲ್ಲಿ ಮನೋಹರ ಗ್ರಂಥ ಮಾಲೆ ಎಂದು ಇದೆ, ಇವರುಗಳು ಇದನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಸರ್ಕಾರದವರು ಇಂತಹವರನ್ನು ಕೇಳುವುದಿಲ್ಲ ಮತ್ತು ಇವರಿಗೆ ಪ್ರೋತ್ಸಾಹ ಕೊಡುವುದಿಲ್ಲ. ಸರ್ಕಾರದವರು ಈಗ ಕೆಲವೇ ಸಂಸ್ಥೆಗಳಿಂದ ಪುಸ್ತಕಗಳನ್ನು ಕೊಳ್ಳುತ್ತಿರುವುದನ್ನು ನೋಡಿದರೆ ಇದರಲ್ಲಿ ಏನೋ ಕೊಳೆ ಇದೆ ಎಂಬತಕ್ಕಂಥ ಅನುಮಾನ ನನಗೆ ಗೋಚರವಾಗುತ್ತಿದೆ. ಕೆಲವು ಸಂಸ್ಥೆಗಳವರು ಬಹಳ ಹಿಂದಿನಿಂದಲೂ ಪುಸ್ತಕಗಳನ್ನು ಪ್ರಕಟಣೆ ಮಾಡುತ್ತಾ ಅದನ್ನೇ ತಮ್ಮ ಜೀವನದ ಗುರಿಯನ್ನಾಗಿ ಇಟ್ಟುಕೊಂಡು ಬಂದಿರುವವರಿದ್ದಾರೆ. ಅಂತಹವರು ಇಂದು ಬಿಳಿ ಕಾಗದಕ್ಕಾಗಿ ಭಿಕ್ಷೆ ಬೇಡಬೇಕಾಗಿದೆ, ಅವರನ್ನು ಕೇಳುವವರೇ ಇಲ್ಲವಾಗಿದೆ. ಅದೇ ಆಲ್-ಇಂಡಿಯಾ ಲೆವೆಲ್‌ನಲ್ಲಿ ಇರತಕ್ಕಂಥವವರಿಗೆ ಸರ್ಕಾರದವರು ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಇಂತಹ ಗೋಲ್‌ಮಾಲ್ ಕೆಲಸವನ್ನು ಇನ್ನಾದರೂ ನಿಲ್ಲಿಸಬೇಕೆಂದು ಹೇಳುತ್ತೇನೆ. ನಿಷ್ಪಕ್ಷಪಾತದಿಂದ ಎಲ್ಲರಿಂದಲೂ ಪುಸ್ತಕಗಳನ್ನು ಕೊಳ್ಳುವಂತಹ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ ಸರ್ಕಾರದವರು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಹೋದತಿಂಗಳು ಒದಗಿಸಿದ್ದಾರೆ. ಮೊನ್ನೆತಾನೆ ಎಲ್ಲ ಪರೀಕ್ಷೆಗಳು ಪ್ರಾರಂಭವಾಗಿದೆ, ಈ ರೀತಿಯಾದರೆ ಅವರು ಓದುವುದು ಯಾವಾಗ ? ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಪಟ್ಟಂತೆ ಈ ರೀತಿಯಾಗುತ್ತಿದೆ, ಹಳ್ಳಿಗಳಿಗೆ ಪಠ್ಯಪುಸ್ತಕಗಳು ಕಳೆದ ತಿಂಗಳು ಬಂದಿದೆ ಅವುಗಳನ್ನು ಅವರು ಓದಿ ಪಾಸು ಮಾಡುವುದು ಯಾವ ರೀತಿಯಿಂದ ಸಾಧ್ಯ ಎಂಬುದನ್ನು ತಾವೇ ವಿಚಾರಮಾಡಿ ನೋಡಬೇಕೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ನಾನು ಅಕ್ಯಾಡಮಿಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ಈಗ ಲಲಿತಾ ಕಲಾ ಅಕ್ಯಾಡಮಿ, ಸಾಹಿತ್ಯ ಅಕ್ಯಾಡಮಿ, ಉರ್ದು ಅಕ್ಯಾಡಮಿ, ಸಂಗೀತ ನಾಟಕ ಅಕ್ಯಾಡಮಿ ಎಂದು ಒಂದೊಂದಕ್ಕೆ ಒಂದೊಂದು ಅಕ್ಯಾಡಮಿಗಳನ್ನು ಮಾಡಿ ಅವುಗಳಿಗೆಲ್ಲಾ ಒಬ್ಬೊಬ್ಬ

ರನ್ನು ಡಮ್ಮಿ ಅಧ್ಯಕ್ಷರನ್ನಾಗಿ ಮಾಡಿ ಅವರುಗಳೆಲ್ಲಾ ಅಲ್ಲ ಡೋಲು ಡ್ರಮ್ಮು ಭಾರಿಸಿಕೊಂಡು ಇರುವುದರ ಬದಲು, ಅವುಗಳನ್ನೆಲ್ಲಾ ಒಂದುಗೂಡಿಸಿ, ಒಂದು ಅಕಾಡೆಮಿಯನ್ನಾಗಿ ಮಾಡಬೇಕು. ಮತ್ತು ಅದರ ಮೂಲಕ ಸಮಗ್ರವಾದಂಥ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ,

ಇನ್ನು ಪ್ರೀ ಯೂನಿವರ್ಸಿಟಿ ಎಜುಕೇಷನ್ ಬಗ್ಗೆ ಹೇಳಬೇಕೆಂದರೆ, ಪೇಜ್ 64ರಲ್ಲಿ "..........one private Junior College with Hindi as Medium of Instruction in Bangalore City were started. This is the first time that a Junior College with Hindi as Medium of Instruction has been started in the State. ಎಂದು ಹೇಳಿದ್ದಾರೆ. ಇವರ ಮನೆಮುರುಕುತನಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ಇಂದು ಕರ್ನಾಟಕ ರಾಜ್ಯದ ಯಾವುದೇ ಒಂದು ಕಾಲೇಜಿನಲ್ಲಿ, ಯಾವುದೇ ಒಂದು ಪ್ರೌಢಶಾಲೆಯಲ್ಲಿ ಕನ್ನಡವನ್ನೇ ಸಂಪೂರ್ಣ ಶಿಕ್ಷಣ ಮಾಧ್ಯಮವನ್ನಾಗಿ ಮಾಡಿರುವ ಈ ಭಾಷಾದ್ರೋಹಿ ಮತ್ತು ದೇಶದ್ರೋಹಿ ಸರ್ಕಾರ ಇವೊತ್ತು ಬೆಂಗಳೂರು ನಗರದಲ್ಲಿ ಸಂಪೂರ್ಣ ಹಿಂದಿ ಶಿಕ್ಷಣ ಮಾಧ್ಯಮ ಇರತಕ್ಕಂಥ ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡಿದೆ ಎಂದರೆ, ಇವರ ಗುಲಾಮಗಿರಿ ಬುದ್ಧಿಗೆ ಏನು ಹೇಳಬೇಕೋ ಗೊತ್ತಿಲ್ಲ, ಕನ್ನಡದ ಮೂಲಕವೇ ಶಿಕ್ಷಣವನ್ನು ಪ್ರತಿಯೊಬ್ಬರಿಗೂ ಕೊಡಬೇಕೆಂದು ನಾನು ಹೇಳುತ್ತೇನೆ. ಇಂಗ್ಲೀಷ್ ಮರಾಟಿ ಹಿಂದಿ ಮುಂತಾದ ಭಾಷೆಗಳು ಐಚ್ಛಿಕ ಭಾಷೆಯಾಗಿರಬೇಕು. ಅಂದರೆ ಅಪೇಕ್ಷೆ ಪಟ್ಟವರು ಅದನ್ನು ಕಲಿಯುವುದಕ್ಕೆ ಅವಕಾಶವಿರಬೇಕು. ಕನ್ನಡ ನಾಡಿನಲ್ಲಿ ಸಂಪೂರ್ಣ ಕನ್ನಡವೇ ಮಾಧ್ಯಮವಾಗಿರತಕ್ಕಂಥ ಕಾಲೇಜು ಏನಾದರೂ ಇದೆಯೇ ಎಂದು ನಾನು ತಮ್ಮನ್ನು ಕೇಳುತ್ತೇನೆ ? ಕನ್ನಡಕ್ಕೆ ಸಾಕಷ್ಟು ಅವಕಾಶ ಇಲ್ಲದಿರುವಾಗ ಸರ್ಕಾರದವರು ಹಿಂದಿ ಮಾಧ್ಯಮವಿರತಕ್ಕಂಥ ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡಲು ಅವಕಾಶ ಕೊಟ್ಟಿದ್ದಾರೆ. ಇಂದು ಇದಕ್ಕೆ ಅವಕಾಶ ಕೊಟ್ಟಿರುವ ಸರ್ಕಾರದವರು ನಾಳೆ ಹಿಂದಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಮಟ್ಟಕ್ಕೂ ಸಹ ಹೋಗುತ್ತಾರೆ. ಹಿಂದೆ ಇಂತಹ ಒಂದು ಸುದ್ದಿ ಬಂದಿತ್ತು. ಈ ಮೊದಲು ಇಂಗ್ಲೀಷಿನವರು ನಮ್ಮ ಮೇಲೆ ಇಂಗ್ಲೀಷ್ ಭಾಷೆಯನ್ನು ಹೇರುವುದರ ಮೂಲಕ ಅವರು ಇಂಗ್ಲೇಡಿನಲ್ಲಿಯೇ ಕುಳಿತು ಅನೇಕ ವರ್ಷಗಳವರೆಗೆ ರಾಜಭಾರ ಮಾಡಿದರು, ಅದೇ ರೀತಿ ಈಗ ನಮ್ಮ ಮಕ್ಕಳಿಗೆ ಹಿಂದಿಭಾಷೆ ಕಲಿಯಬೇಕೆಂದು ಹೇಳಿ ಅವರನ್ನು ಆ ಒಂದು ದಾಸ್ಯಕ್ಕೆ ನೂಕುವುದಾದರೆ, ಅದಕ್ಕೆ ನಾವು ಸಿದ್ಧರಿಲ್ಲ ನಮ್ಮ ಮಕ್ಕಳಿಗೆ ಈಗ ನಮ್ಮ ಭಾಷೆಯಲ್ಲಿಯೇ ಸರಿಯಾದ ರೀತಿಯಲ್ಲಿ ಶಿಕ್ಷಣ ದೊರಕದಿರುವಾಗ, ಹಿಂದಿ ಮಾಧ್ಯಮವಿರತಕ್ಕಂಥ ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡುತ್ತಿರುವುದರ ಉದ್ದೇಶವಾದರೂ ಏನು ? ಕನ್ನಡ ಭಾಷೆಯನ್ನು ಬಿಟ್ಟು ಬೇರೆ ಭಾಷೆಗಳನ್ನು ನಮ್ಮ ಮೇಲೆ ಹೇರುವುದಕ್ಕೆ ತಾವು ಹೊರಟರೆ ಅದಕ್ಕೆ ನಾವು ಒಪ್ಪುವುದಿಲ್ಲವೆಂದು ಹೇಳುತ್ತೇನೆ,

ಶ್ರೀ ಡಿ. ಬಿ. ಕಲ್ಮಣಕರ್.—ಹಿಂದಿ ನ್ಯಾಷನಲ್ ಲಾಂಗ್ವೇಜ್ ಅಲ್ಲವೇ ?

ಶ್ರೀ ಕೋಣಂದೂರ್ ಲಿಂಗಪ್ಪ.—ಹೌದು; ಹಿಂದಿ ಭಾಷೆಯ ಜೊತೆಗೆ ಈಗ ನಮ್ಮ ದೇಶದಲ್ಲಿರತಕ್ಕಂಥ 14 ಭಾಷೆಗಳೂ ಸಹ ರಾಷ್ಟ್ರೀಯ ಭಾಷೆಗಳಾಗಿವೆ. ಹಾಗಿದ್ದರೆ ನಾನು ಕೇಳುತ್ತೇನೆ; ದೆಹಲಿಯಲ್ಲಾಗಲೀ, ಲಕ್ನೋದಲ್ಲಾಗಲೀ, ಪಾಟ್ನಾದಲ್ಲಾಗಲೀ ಒಂದು ಕನ್ನಡ ಮಾಧ್ಯಮವಿರತಕ್ಕಂಥ ಶಾಲೆಯನ್ನು ತಾವು ಪ್ರಾರಂಭ ಮಾಡಿ ನೋಡೋಣ; ತಮಗೇನಾದರೂ ಕನ್ನಡದ ಬಗ್ಗೆ ಪ್ರಾಮಾಣಿಕವಾದಂಥ ಕಳಕಳಿಯಿದ್ದರೆ ಅಥವಾ ತಮಗೇನಾದರೂ ತಾಕತ್ ಇದ್ದರೆ ಈ ಒಂದು ಕೆಲಸವನ್ನು ಮಾಡಿ. ಈಗ ದೆಹಲಿ ರೈಲ್ವೇ ಸ್ಟೇಷನ್‌ನಲ್ಲಿ ಇಂಗ್ಲೀಷಿನಲ್ಲಿ ಏನಾದರೂ ಬೋರ್ಡ್ ಇದೆಯೇ ಎಂಬುದನ್ನು ನೋಡಿಕೊಂಡು ಬಂದು ನನಗೆ ಹೇಳಿ ಅಲ್ಲಿ ಬೇರೆ ಭಾಷೆಗಳಿಗೆ ಅವಕಾಶ ಕೊಡದಿರುವಾಗ ಇಲ್ಲಿ ನಮ್ಮ ಮಿತ್ರರಿಗೆ ವಿಶಾಲವಾದಂಥ ಮನೋಭಾವ ಬಂದುಬಿಟ್ಟಿದೆ. ಮಾತೆತ್ತಿದರೆ ಇವರು ರಾಷ್ಟ್ರೀಯ ಭಾಷೆ ಅಂತರರಾಷ್ಟ್ರೀಯ ಭಾಷೆ ಎಂದು ಹೇಳಿಕೊಂಡು ಬೇರೆ ಭಾಷೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ರೀತಿಯಿಂದ ತಮ್ಮ ಮನೆಗೆ ಬೆಂಕಿ ಹಚ್ಚಿಕೊಂಡು ಊರಿಗೆ ಬೆಳಕು ತೋರಿಸುವಂತಹ ಮನೆಮುರುಕ ಬುದ್ಧಿಯನ್ನು ಕೈಬಿಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನಾನು ನೇರವಾಗಿ ವಿಶ್ವವಿದ್ಯಾನಿಲಯಗಳಿಗೆ ಸೇರಿರತಕ್ಕಂಥ ಡಿಪಾರ್ಟ್‌ಮೆಂಟ್ ಆಫ್ ಕ್ಯಾಲೇಜಿಯೇಟ್ ಎಜುಕೇಷನ್ ಸೇರಿರುವ 23 ಗವರ್ನಮೆಂಟ್ ಕಾಲೇಜುಗಳಲ್ಲಿ 17,654 ವಿದ್ಯಾರ್ಥಿಗಳು ಹಾಗೂ 233 ಏಡೆಡ್ ಕಾಲೇಜುಗಳಲ್ಲಿ 60,965 ವಿದ್ಯಾರ್ಥಿಗಳು ಓದುತ್ತಾ ಇದ್ದಾರೆ, ಇದರಲ್ಲಿ ಏಡೆಡ್ ಕಾಲೇಜುಗಳಲ್ಲಿ ಏನು ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ ಅದಕ್ಕೆ ನನಗೆ ಅಂಕಿಅಂಶಗಳನ್ನು ಕೊಡಬೇಕು. ಈ ಏನು 233 ಏಡೆಡ್ ಕಾಲೇಜುಗಳು ಇವೆ ಅವುಗಳನ್ನು ಸಂಪೂರ್ಣವಾಗಿ ಸರ್ಕಾರ ಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್ ಏನು ಕೊಡುತ್ತಿದ್ದಾರೆ ಅದನ್ನು ವರ್ಷದ ಅಂತ್ಯದಲ್ಲಿ ಕೊಡುವುದರಿಂದ ಬಹಳ ತೊಂದರೆ ವಿದ್ಯಾರ್ಥಿಗಳಿಗೆ ಆಗುತ್ತಿದೆ. ಆದ್ದರಿಂದ ದಯಮಾಡಿ ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್‌ನ್ನು ವರ್ಷದ ಮೊದಲೇ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ನಮ್ಮ ವಿಶ್ವವಿದ್ಯಾನಿಲಯದ ಬಗ್ಗೆ ಇನ್ನು ನಾಲ್ಕು ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ನಾಲ್ಕು ಏನು ಯೂನಿವರ್ಸಿಟಿಗಳು ಏನು ಇವೆ ಅವುಗಳಲ್ಲಿ ಮುಖ್ಯವಾಗಿ ಮಾಡಬೇಕಾದ ಕೆಲಸ ಸಂಶೋಧನೆ. ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿರುವ ಹಾಗೆ ಅಲ್ಲಿಂದ ಡಿಗ್ರಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ನೋಡಿದರೆ 3,71.849 ಏನು ಇದ್ದಾರೆ ಇವರು ನಾಲ್ಕು ವಿಶ್ವವಿದ್ಯಾನಿಲಯದಿಂದ ಬಂದಂತ ಜನ ಇವರು. ಕೊಡತಕ್ಕಂಥ ಶಿಕ್ಷಣ ಯಾವ ರೀತಿ ಇದೆ. ಈ ನಿರುದ್ಯೋಗಿಗಳನ್ನು ಸೃಷ್ಟಿ ಮಾಡತಕ್ಕಂಥ ಕಾರ್ಖಾನೆಗಳಾಗಿವೆ. ಒಂದು ಭಾಗದಲ್ಲ ಹೇಳುವುದಾದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಬಿಟ್ಟು ಉಳಿದ ವಿಶ್ವ ವಿದ್ಯಾನಿಲಯಗಳನ್ನು ವಿದ್ಯಾ ಇಲಾಖೆಗೆ ತೆಗೆದುಕೊಂಡರೆ ಒಳ್ಳೆಯದು. ಆಗ ಬೇಕಾದಂತಹ ಸಂಶೋಧನೆ ಕೆಲಸ ನಿಜವಾಗಿಯೂ ಆಗುತ್ತಿಲ್ಲ. ಅಲ್ಲಿ ಆಗುತ್ತಿರುವುದೇ ಬೇರೆ ? ಯಾವ ಯೂನಿವರ್ಸಿಟಿಯಲ್ಲೇ ತೆಗೆದುಕೊಳ್ಳಿ, ಅಲ್ಲಿಯ ರಾಜಕೀಯ ಹೇಳತೀರದು. ಯಾರ ಮೇಲೆ ಏನು ಅಪಾದನೆ ಮಾಡಬೇಕು, ಅಥವಾ ಗೂಬೆ ಕೂಡಿಸಬೇಕೆನ್ನುವ ಸಂಶೋಧನೆ ನಡೆಯುತ್ತಿದೆ. ಯಾವ ಯೂನಿವರ್ಸಿಟಿಯಲ್ಲೇ ತೆಗೆದು ಕೊಳ್ಳಿ. ರಾಜಕೀಯದ ದೊಡ್ಡ ಒಂದು ಜಾಲ ಇಲ್ಲಿ ಇದೆ. ದೊಡ್ಡದೊಡ್ಡ ರಾಜಕಾರಿಣಿಗಳು ಇದ್ದಾರೆಂದರೆ ತಪ್ಪಾಗಲಾರದು. ಆದರೆ ಅಲ್ಲಿ ಯಾರೂ ಒಳ್ಳೆಯ ಜನ ಇಲ್ಲವೆಂದು ಹೇಳುತ್ತಿಲ್ಲ ಅಲ್ಲಿಯೂ ಇದ್ದಾರೆ. ಅಲ್ಲಿಯ ವಾತಾವರಣವನ್ನೇ ಕೆಡಿಸ ಬೇಕೆಂದು ಪ್ರಯತ್ನ ಪಡುವವರು ಇದ್ದಾರೆ. ಈ ಪ್ರಯತ್ನ ಮೂರು ಯೂನಿವರ್ಸಿಟಿಯಲ್ಲೂ ನಡೆಯುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇದನ್ನು ಸ್ವಚ್ಛಪಡಿಸುವುದಕ್ಕೆ ತಾವು ಧೈರ್ಯಮಾಡಿ ಕ್ರಮತೆಗೆದು ಕೊಳ್ಳಬೇಕು. ನನಗೆ ಬಂದಿರುವ ವರ್ತಮಾನದ ಪ್ರಕಾರ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆ ನನಗೆ ಅಪಾರ ಗೌರವ, ಅವರು ಸ್ವಚ್ಛ ಆಡಳಿತಗಾರರು, ಪ್ರಾಮಾಣಿಕರು ಸೇವಾ ಮನೋಭಾವವುಳ್ಳವರು ಅದರಲ್ಲ ಯಾರಿಗೂ ಬಿನ್ನಾಭಿಪ್ರಾಯವಿಲ್ಲ. ಅವರಿಗೆ ಗೊತ್ತಿಲ್ಲದಹಾಗೆ ಅವರನ್ನು ತಪ್ಪುದಾರಿಗೆ ಎಳೆದು ಅವರಿಂದ ತಪ್ಪುಗಳನ್ನು ಮಾಡಿಸತಕ್ಕಂಥ ಪ್ರವೃತ್ತಿ ನಡೆಯುತ್ತಿದೆಯೆಂದು ಕೇಳಿದ್ದೇನೆ. ನಾನು ತಮಗೆ ಕೆಲವು ವಿಷಯಗಳನ್ನು ಕಳುಹಿಸುತ್ತೇನೆ ಇದರ ಬಗ್ಗೆ ವಿಚಾರ ಮಾಡಬೇಕು. ಹಾಗೆ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಬಗ್ಗೆ ಬಹಳಷ್ಟು ದೂರುಗಳು ಇವೆ ಅವುಗಳನ್ನು ನಾನು ಈಗ ಹೇಳುವುದಿಲ್ಲ. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಏನಾಗಿದೆಯೆಂದರೆ ತಮ್ಮ ಅಧಿಕಾರ ಗದ್ದುಗೆಗೋಸ್ಕರ ಮತ್ತು ಹಣಕಾಸಿನ ವ್ಯವಹಾರದಲ್ಲಿ ಅನೇಕ ರೀತಿಯ ವಂಚನೆಗಳು ಆಗಿವೆ ಅದು ನನ್ನ ಗಮನಕ್ಕೆ ಬಂದಿವೆ. ಮೂರು ವಿಶ್ವವಿದ್ಯಾ ನಿಲಯಗಳಲ್ಲಿಯೂ ಕೆಲಸಮಾಡತಕ್ಕಂಥ ಅಧ್ಯಾಪಕರುಗಳ ಉದ್ದೇಶ ಯಾವರೀತಿ ಇರಬೇಕು ಎಂಬುದಕ್ಕೆ ಡಾ॥ ಮನೋಹರ ಲೋಹಿಯಾರವರು ಹೇಳಿದ್ದಾರೆ ''ತರುಣ ದೇಹ, ತರುಣ ಮನಸ್ಸುಗಳೂ ಕೂಡ ದೈಹಿಕ ಹಾಗೂ ಮಾನಸಿಕ ಸಾಹಸಾದ್ಭುತಗಳ ಕೌತೂಹಲದಿಂದ ಉದ್ದೀಪಿತವಾಗಿರುತ್ತದೆ'' ''ಯಾರು ತಮ್ಮ ನಿರ್ದಿಷ್ಟ ವಿಷಯ ಕ್ಷೇತ್ರದಲ್ಲಿ ಏನೇನು ತಿಳಿಯುವುದಿದೆ ಎಂಬುದನ್ನು ಮೊದಲು ತಿಳಿದುಕೊಂಡಿರುತ್ತಾರೋ ಮತ್ತು ಯಾರು ಆ ವಿಷಯದಲ್ಲಿ ಮುಖ್ಯ ಪ್ರಶ್ನೆಗಳನ್ನು ತಮ್ಮ ಜ್ಞಾನಕೌಶಲಗಳಿಂದ ದೀಪ್ತಗೊಳಿಸಿ ಕಾಣಿಸಬಲ್ಲರೋ ಅಂಥ ಅಧ್ಯಾಪಕರು ಇಲ್ಲಿ ಮೊದಲು ಅಗತ್ಯ'' 'ಕತ್ತಲೆಯಲ್ಲಿ ಧುಮುಕಿ ಅಲ್ಲಿರುವ ಚೆಲುವಿನ ಶಕ್ತಿಯ ಹಾಗೂ ಜ್ಞಾನದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಬಲ್ಲ ಶಾಸ್ತ್ರವತ್ತಾದ ಮನಸ್ಸಿನ ಕುತೂಹಲವೇ ಸಂಶೋಧನೆ''. ಇಂಡಿಯಾದ ವಿಶ್ವವಿದ್ಯಾನಿಲಯಗಳಲ್ಲಿ ಈ ತನಕವೂ ಮಾನವ ಶಾಸ್ತ್ರಗಳಲ್ಲಿನ ಸಂಶೋಧನೆಯೆಂದರೆ.

ಆಧುನಿಕ-ವಿವರಾತ್ಮಕ ಮಾತ್ರವಾಗಿದೆ. ಅದು ಕೂಡ ಸಂಕುಚಿತ ಖಂಡಗಳಿಗೆ ಮತ್ತು ತಾತ್ಕಾಲಿಕ ಅವಧಿಗಳಿಗೆ ಸೀಮಿತಗೊಂಡದ್ದು. ನಮ್ಮ ವಿಶ್ವವಿದ್ಯಾನಿಲಯಗಳ ಗುರಿ ಸಂಶೋಧನೆಯೇ ಆಗಿರಬೇಕು. ಅದು ಅದಕ್ಕೆ ಸೀಮಿತವಾಗದೆ ಯಾರು ಪ್ರೊಫೆಸರ್, ಲೆಕ್ಚರರ್‌ಗಳನ್ನು ನೇಮಕ ಮಾಡಬೇಕು ಯಾವ ವಿದ್ಯಾರ್ಥಿಯನ್ನು ಪಾಸು ಮಾಡಿಸಬೇಕು ಯಾವ ಜಾತಿಯವನನ್ನು ದೂರ ಇಡಬೇಕು, ಯಾವ ಜಾತಿಯವನನ್ನು ಹತ್ತಿರ ತರಬೇಕು ಇದು ಈಗ ನಡೆಯುತ್ತಿರುವ ವಿಷಯ. ನಿಜವಾಗಿಯೂ ವಿಶ್ವವಿದ್ಯಾನಿಲಯದ ವ್ಯವಹಾರ ಸರಿಯಾಗಿ ನಡೆಯಬೇಕಾದರೆ ಸರಿಯಾದಂತಹ ಪರಿಶೋಧನೆ ಮಾಡಬೇಕು. ನನ್ನ ಸಲಹೆಯಾದರೂ ಇಷ್ಟೆ. ಈ ಮೂರು-ನಾಲ್ಕು ವಿಶ್ವವಿದ್ಯಾನಿಲಯದ ಆಡಳಿತವನ್ನು ನಿರ್ವಹಿಸುವುದಕ್ಕೆ ಸ್ವಚ್ಛವಾದ ಮತ್ತು ಪ್ರಾಮಾಣಿಕವಾದ ಅಧಿಕಾರಿಯನ್ನು ನೇಮಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಡೆಯದಾಗಿ ನಮ್ಮ ಎಲ್ಲಾ ವಿದ್ಯಾಭ್ಯಾಸ ಪ್ರಗತಿಯನ್ನು ನೋಡಿ ಆಯಿತು? ಆದರೆ ಈ ನಿರುದ್ಯೋಗಿಗಳನ್ನು ಸೃಷ್ಟಿ ಮಾಡತಕ್ಕಂಥ ಏನು ಕಾಲೇಜುಗಳು ಇವೆ ಅವುಗಳನ್ನು ಏನು ಈ ನಿರುದ್ಯೋಗಿಗಳು ಇದ್ದಾರೆ ಅವರಿಗೆ ಉದ್ಯೋಗ ದೊರಕುವವರೆಗೆ ಅಂದರೆ ಕನಿಷ್ಟ 2 ವರ್ಷಗಳ ಕಾಲ ಬಂದ್ ಮಾಡಿ ಅಂದರೆ ಮುಚ್ಚಬೇಕು. ಏತಕ್ಕೆಂದರೆ ಉದ್ಯೋಗ ದೊರಕಿಸಿಕೊಡತಕ್ಕಂಥ ಸಲುವಾಗಿ 2 ವರ್ಷಗಳ ಕಾಲ ಮುಚ್ಚಬೇಕು. ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಹೇಳಬೇಕೆಂದರೆ ಬರೀ ಪುಸ್ತಕ ಜ್ಞಾನದಿಂದ ಏನು ಪ್ರಯೋಜನವಾಗುವುದಿಲ್ಲ ಆದುದರಿಂದಲೇ ನಮ್ಮ ಡಿ.ವಿ.ಜಿ.ಯವರು ಒಂದು ನುಡಿಯನ್ನು ಹೇಳಿದ್ದಾರೆ. ''ಅನುಭವದ ಹಾಲೊಳು ವಿಚಾರ ಮಂಥನವಾಗೆ, ಜನಿಯಿತುಂ ಜ್ಞಾನ ನವನೀತವದೆ ಸುಖದಲ್ಲಿ, ಗಿಣಿಯೋದು ಮಸ್ತರ ಜ್ಞಾನ; ನಿನ್ನನುಭವವೆ, ನಿನಗೆ ಧರುಮದ ದೀಪ—ಮಂಕುತಿಮ್ಮ''. ಎನ್ನುವ ರೀತಿ ಆರ್ಥಿಕ ಸ್ವಾವಲಂಬನೆ ವಿದ್ಯಾಭ್ಯಾಸ ಪದ್ಧತಿ ಬಂದರೆ ಅದರಿಂದ ಏನಾದರೂ ಪ್ರಯೋಜನ ಆ ಕಾಲ ಬರುತ್ತಾ ಇದೆ. ಈಗ ಇರತಕ್ಕ ಎಲ್ಲಾ ಕಾಲೇಜುಗಳನ್ನು ಸರ್ಕಾರಕ್ಕೆ ತೆಗೆದು ಕೊಳ್ಳಲಿ ಎನ್ನುವ ಅಪೇಕ್ಷೆ ನನಗೆ ಇದೆ. ಮಾನ್ಯ ವಿದ್ಯಾಮಂತ್ರಿಗಳು ನಮ್ಮ ರಾಜ್ಯದ ಯಾವುದಾದರೂ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿ ಆಗುವುದಕ್ಕೆ ಅವರ ಧೀರತ್ವ, ಜ್ಞಾನ, ದಯೆ ಮತ್ತು ವಿವೇಚನಾಶಕ್ತಿ ಇವುಗಳನ್ನು ನೋಡಿ ಅವರ ಬಗ್ಗೆ ನನಗೆ ಅಪಾರ ಗೌರವ ಇರುವುದರಿಂದ ಅವರು ಈ ಪದವಿಗೆ ಬಹಳವಾಗಿ ಹೊಂದುತಾರೆ. ಆದ್ದರಿಂದ ಜೊತೆಗೆ ಅವರು ವಿದ್ಯಾಮಂತ್ರಿಗಳಾದ ಮೇಲೆ ವಿದ್ಯಾ ಇಲಾಖೆಯಲ್ಲಿ ಯಾವ ಪ್ರಗತಿಯಾಗಿರುವುದಿಲ್ಲ ಹಿಂದೆ ಏನು ಇತ್ತೋ ಅದೇ ರೂಪ ಅದೇ ಬಣ್ಣ ಅದೇ ತದ್ರೂಪು ಇರುವುದರಿಂದ ಅವರು ಈ ವಿದ್ಯಾ ಮಂತ್ರಿಗಳಾಗಿರುವುದಕ್ಕಿಂಥ ಉಪಕುಲಪತಿಗಳಾದರೆ ಚೆನ್ನ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ಒಂದು ಬಿಗಿಯಾದ ಕ್ರಮ ತೆಗೆದು ಕೊಳ್ಳಬೇಕೆಂದು ಧೈರ್ಯ ಮಾಡಬೇಕೆಂದು ಹೇಳುವಾಗ "ಅರಸು ವಿಚಾರ, ಸಿರಿಯ ಶೃಂಗಾರ ಸ್ಥಿರವಲ್ಲ, ಕೆಟ್ಟಿತ್ತು ಕಲ್ಯಾಣ, ಹಾಳಾಯಿತು ಮಾನವಾ ನೋಡಾ" ಎಂದು ಹೇಳಿದಹಾಗೆ ಆಗುತ್ತದೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಸಭಾಧ್ಯಕ್ಷರೇ, ವಿದ್ಯಾ ಮಂತ್ರಿಗಳು ಮಂಡಿಸಿದಂಥ ಈ ಅನುದಾನಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ವಿದ್ಯಾ ಇಲಾಖೆಯಲ್ಲಿ ಕಂಡು ಬಂದಂಥ ನಾನಾ ನ್ಯೂನತೆಗಳಲ್ಲಿ ಮತ್ತು ಕುಂದಕಗಳಲ್ಲಿ ಕೆಲವನ್ನು ವಿದ್ಯಾ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರಲಿಚ್ಛಿಸುತ್ತೇನೆ. ನಾನು ಮಾತನಾಡುವುದಕ್ಕೆ ಮೊದಲು ನನ್ನ ಮಿತ್ರರಾದಂಥ ವಿರೋಧಪಕ್ಷದ ಸದಸ್ಯರಾದ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಮಾತನಾಡಿದಂಥ ಅನೇಕ ವಿಚಾರಗಳಿಗೆ ಬಹುಶಃ ನಾನು ಪುಷ್ಟಿಯನ್ನು ಕೊಡುತ್ತೇನೆ ಎಂಬುದಾಗಿ ಹೇಳುವುದು ಸಮಂಜಸವೆಂದು ಕಾಣುತ್ತದೆ. ಇವತ್ತು ಒಂದು ರಾಷ್ಟ್ರದ ಪ್ರಗತಿ ನಾನಾ ಮುಖಗಳಲ್ಲಿ ನಾವು ಕಾಣಬೇಕಾದರೆ ಬಹುಶಃ ಆ ಪ್ರದೇಶದ ವಾತಾವರಣದ ಪ್ರಗತಿಯ ಜೊತೆಗೆ ಕೇವಲ ಶಿಕ್ಷಣ ಕ್ಷೇತ್ರದಲ್ಲಿ ಆಗತಕ್ಕ ಪ್ರಗತಿಯನ್ನು ಅವಲಂಬಿಸಿಕೊಂಡಿದೆಯೆಂದು ನಾನು ಹೇಳುತ್ತೇನೆ. ಪ್ರಧಾನ ಮಂತ್ರಿಗಳ 20 ಅಂಶಗಳ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಇವತ್ತು ವಿದ್ಯಾ ಕ್ಷೇತ್ರದಲ್ಲಿ ಮಹತ್ವಪೂರಿತವಾದಂಥ ಬದಲಾವಣೆಗಳು ಆಗಬೇಕು ಎನ್ನುವುದರಲ್ಲಿ ಯಾವ ಒಂದು ಭಿನ್ನಾಭಿಪ್ರಾಯವೂ ಇರಲಾರದು. ಇವತ್ತು 5ನೇ ಪಂಚವಾರ್ಷಿಕ ಯೋಜನೆ ವಿಚಾರದಲ್ಲಿ ನಾವು

ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರದ ಬಹು ಹೆಚ್ಚಿನ ಮಹತ್ವವನ್ನು ಕೊಟ್ಟಿದೆ. ಅದು ನೂರಕ್ಕೆ ನೂರರಷ್ಟು ಸರಿಯಾಗಿದೆ. 6 ರಿಂದ 10 ವರ್ಷ ವಯಸ್ಸಿನವರೆಗೆ ಇರುವ ಮಕ್ಕಳಿಗೆ ಸ್ಕೂಲ್‌ಗಳಲ್ಲಿ ಪ್ರವೇಶಾವಕಾಶವನ್ನು ಒದಗಿಸಿ ಉಚಿತ ವಿದ್ಯಾಭ್ಯಾಸ ಕೊಡಬೇಕೆಂದೂ ಮತ್ತು ದುರ್ಬಲ ವರ್ಗಗಳಿಗೆ ಸಾಕಾದಷ್ಟು ಅನುಕೂಲಗಳನ್ನು ಒದಗಿಸಬೇಕು ಮತ್ತು ವಿದ್ಯಾ ಗುಣಮಟ್ಟವನ್ನು ಬೆಳೆಸಿಕೊಳ್ಳಬೇಕೆನ್ನುವ ಗುರಿ ಈ 5ನೇ ಪಂಚವಾರ್ಷಿಕ ಯೋಜನೆ ಮೂಲಕ ಸಾಧನೆ ಮಾಡಿದ್ದಾರೆ. ಇದು ಬಹಳ ಶ್ಲಾಘನೀಯವಾದ ವಿಚಾರ. ಆದರೆ ಇವತ್ತು ಒಂದು ಭವ್ಯವಾದಂಥ ಕಟ್ಟಡವನ್ನು ಕಟ್ಟಬೇಕಾದರೆ ಅದರ ಅಡಿಪಾಯ, ಹಾಲ್ಲಿಗೂ ಫೌಂಡೇಷನ್ ಬಹಳ ಭದ್ರವಾಗಿ ಇರಬೇಕು. ಒಂದುವೇಳೆ ಅಡಿಪಾಯದಲ್ಲಿ ತಳಹದಿಯಲ್ಲಿಯೇ ನ್ಯೂನತೆ ಉಂಟಾದರೆ ಅಂತಹ ಭವ್ಯವಾದಂಥ ಕಟ್ಟಡದೇ ಕುಸಿದು ಬೀಳುತ್ತದೆ. ಅದೇ ರೀತಿಯಲ್ಲಿ ವಿದ್ಯಾ ಕ್ಷೇತ್ರದಲ್ಲಿ ಮತ್ತು ಶಿಕ್ಷಣ ರಂಗದಲ್ಲಿ ಗುಣಮಟ್ಟ ಬರಬೇಕಾಗಿದೆ. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯವಾಗಿ ಬಹಳ ಮಹತ್ವವನ್ನು ಕೊಡಬೇಕಾಗಿದೆ. ಪ್ರಾಥಮಿಕ ಹಂದಲ್ಲಿ ಕೊಡುವ ವಿದ್ಯಾಭ್ಯಾಸ ನಮ್ಮ ಮುಂದಿನ ವಿದ್ಯಾಭ್ಯಾಸದ ಅಭಿವೃದ್ಧಿಗೆ ನಾಂದಿ ಎಂಬುದಾಗಿ ನಾನಾದರೂ ಭಾವಿಸಿಕೊಂಡಿದ್ದೇನೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ನಾವು ಯಶಸ್ಸನ್ನು ಕಾಣಬೇಕಾದರೆ ಕಡ್ಡಾಯ ಶಿಕ್ಷಣ ಸಂಪೂರ್ಣವಾಗಿ ಜಾರಿಗೊಳಿಸಬೇಕಾಗಿದೆ. ಇವತ್ತು ಮಲೆನಾಡು ಪ್ರದೇಶಗಳಲ್ಲ ಅದರಲ್ಲಿಯೂ ಹಿಂದುಳಿದಿರುವ ಪ್ರದೇಶಗಳಲ್ಲಿ ಪ್ರೀ ಪ್ರೈಮರಿ ಸ್ಕೂಲ್ಸ್ ಅಥವಾ ನರ್ಸರಿ ಸ್ಕೂಲ್ಸ್ ಪ್ರಾರಂಭಮಾಡುವ ಅವಶ್ಯಕತೆ ಇದೆ. ಕಳೆದ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ 300 ಪ್ರೀ ಪ್ರೈಮರಿ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಅದು ಬಹಳ ಶ್ಲಾಘನೀಯವಾದ ವಿಚಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಪ್ರೀ ಪ್ರೈಮರಿ ಶಾಲೆಗಳನ್ನು ಕಳೆದ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಈ ಕಡೆಗೆ ಮಂತ್ರಿಗಳ ಗಮನವನ್ನೂ ಕೂಡ ಹರಿಸಲಾಯಿತು. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯು ವಿದ್ಯಾ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದಿದ್ದರೂ ಸಹ ಇನ್ನು ಮಲೆನಾಡು ಪ್ರದೇಶಗಳಲ್ಲಿ ಅದರಲ್ಲಿಯೂ ಹೆಚ್ಚಿಗೆ ಹರಿಜನ ಗಿರಿಜನ ಇರುವ ಪ್ರದೇಶಗಳಲ್ಲಿ ಶಿಕ್ಷಣ ಯಶಸ್ವಿಯಾಗಲಿಲ್ಲ. ನೂರಕ್ಕೆ ನೂರರಷ್ಟು ಅವರ ಹಾಜರಾತಿ ದೊರಕಿಸಬೇಕಾದರೆ ಫ್ರೀ ಪ್ರೈಮರಿ ಶಾಲೆಗಳನ್ನು ಕೂಡಲೇ ಹೆಚ್ಚಿಗೆ ತೆರೆಯುವುದು ಒಳ್ಳೆಯದು. ಆದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ 1976-77ರಲ್ಲಿ 30 ಫ್ರೀ ಪ್ರೈಮರಿ ಸ್ಕೂಲ್‌ಗಳನ್ನು ತಾವು ಮಂಜೂರು ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಪ್ರಾಥಮಿಕ ಫ್ರೀ ಪ್ರೈಮರಿ ಶಾಲೆಗಳನ್ನು ಪ್ರಾರಂಭಿಸಿ ಆ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವ ಅಭ್ಯಾಸ ಮಾಡಿದರೆ ಪ್ರಾಥಮಿಕ ಶಾಲೆಗೆ ಹೆಚ್ಚಿನ ಅಭಿವೃದ್ಧಿ ಮಾಡಿಕೊಟ್ಟಂತಾಗುತ್ತದೆ. ಇದರಲ್ಲಿ ಮಹತ್ವಪೂರ್ಣವಾದ ಹಾಗೂ ಅರ್ಥಪೂರ್ಣವಾದ ವಿದ್ಯಾಭ್ಯಾಸವನ್ನು ಜೊತೆಗೆ ತರಬೇಕಾಗಿದೆ. ಕೆಲವು ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಪ್ರಾಥಮಿಕ ಶಾಲೆಗಳಿಗೆ ಸಾಕಷ್ಟು ಸ್ಥಳಾವಕಾಶವಿಲ್ಲ. ಶಾಲಾ ಕೋಣೆಗಳು ಸರಿಯಾದಂಥ ರೀತಿಯಲ್ಲಿಲ್ಲ. ಇನ್ನು ನಮ್ಮ ಜಿಲ್ಲೆಯ ಉದಾಹರಣೆಯನ್ನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ 250 ಶಾಲಾ ಕೋಣೆಗಳನ್ನು ನಾವು ರಚಿಸಬೇಕಾಗಿದೆ. ಕಳೆದ ಸಾಲಿನಲ್ಲಿ ಈ ದೇಶದಲ್ಲಿ ಶಾಲೆಗಳ ಅಭಿವೃದ್ಧಿ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಸಹ ಯಶಸ್ವಿಯಾಗಿಲ್ಲ. ಅದು ನಮ್ಮ ಮುಂದೆ ಈಗ ಇರುವ ವರದಿಯಲ್ಲಿ ಕಾಣುತ್ತದೆ. ಬಡ್ಜೆಟ್ಟಿನಲ್ಲಿ ಸುಮಾರು 20 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಸಹ ಶಾಲಾ ಕೋಣೆಗಳನ್ನು ಅನೇಕ ಕಡೆಗಳಲ್ಲಿ ರಚಿಸಲಿಕ್ಕಾಗಲಿಲ್ಲ. ಆದರೆ ಈ ವರ್ಷ ಒದಗಿಸಿರುವ ಹಣ ಒಂದು ಶಾಲಾ ಕೋಣೆಗೆ ಕೇವಲ ಎರಡೂವರೆ ಸಾವಿರ ರೂಪಾಯಿಗಳು. ಅದರಿಂದ ಯಾವ ಒಂದು ಶಾಲಾ ಕೋಣೆಯನ್ನು ರಚಿಸುವುದಕ್ಕೆ ಆಗುವುದಿಲ್ಲ, ಅದಕ್ಕಾಗಿ ಇನ್ನುಳಿದ ಹಣವನ್ನು ಊರಿನವರಿಂದ ಹಾಗೂ ಅವರ ಸಹಾಯದಿಂದಲೇ ಒದಗಿಸಬೇಕು. ಇವತ್ತು ನಮ್ಮ ಪ್ರದೇಶದಲ್ಲಿ ಒಂದು ಶಾಲಾ ಕೋಣೆಗೆ ಕನಿಷ್ಟಪಕ್ಷ 6 ಸಾವಿರ ರೂಪಾಯಿಗಳು ಬೇಕಾಗಿರುತ್ತದೆ. ಸರ್ಕಾರದವರು ಕಾನೂನು ಪ್ರಕಾರ ಕೊಡಬೇಕಾದ ಮೊಬಲಗನ್ನು ಕೊಟ್ಟಮೇಲೆ ಇನ್ನುಳಿದ ಮೂರುವರೆ ಸಾವಿರ ರೂಪಾಯಿಗಳನ್ನು ಅಲ್ಲಿನ ಜನರೇ ಒದಗಿಸುವುದು ಬಹಳ ಕಷ್ಟವಾಗುತ್ತದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಸರ್ಕಾರದವರು ತಮ್ಮ ಭಾಗವನ್ನು ನಾಲ್ಕು ಸಾವಿರ ರೂಪಾಯಿಗಳವರೆಗೂ ಕಡೆಯಪಕ್ಷ ಏರಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ ಆದರೆ

ಅದನ್ನು ಇದುವರೆಗೂ ಪಂಚಾಯತಿ ಅಥವಾ ತಾಲ್ಲೂಕ್ ಬೋರ್ಡಿನಿಂದ ಕೊಡುವ ಹಾಗೆ ಮಾಡಿಲ್ಲ. ಅದನ್ನು ಆಯಾ ಊರಿನ ಜನರೇ ಕೊಡಬೇಕೆಂದು ಹೇಳಿದ್ದಾರೆ. ಈ ಒಂದು ದೃಷ್ಟಿಯಿಂದ ಗ್ರಾಮಗಳಲ್ಲಿ ಅದರಲ್ಲಿಯೂ ಅನೇಕ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳು ಬಹಳವಾಗಿ ನಾದುರಸ್ತಿಯಲ್ಲಿದೆ. ಅದನ್ನು ಈಗ ಕೂಡಲೇ ಮಾಡಬೇಕಾಗಿದೆ. ಅದರ ಬಗ್ಗೆ ಈಗಾಗಲೇ ಒಂದು ಸರ್ಕಾರದ ಆಜ್ಞೆಯೂ ಹೊರಟಿದೆ. ಆದ್ದರಿಂದ ದುರಸ್ತಿ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕಾಗಿದೆ. ಅದಕ್ಕೆ ಬೇಕಾದ ಹಣವನ್ನು ಸಂಬಂಧಪಟ್ಟ ತಾಲ್ಲೂಕು ಬೋರ್ಡ್ ಮಂಡಲಿಯು ಎಸ್ಟಿಮೇಟ್‌ಗಳನ್ನು ತಯಾರು ಮಾಡಿಸಿದ ಮೇಲೆ ದುರಸ್ತಿ ಕ್ರಮಗಳನ್ನು ತೆಗೆದು ಕೊಳ್ಳುವುದಕ್ಕೆ ಅವಕಾಶ ಮೊದಲಿನಿಂದಲೂ ಇತ್ತು. ಆದರೆ ಕಳೆದ ಸಾಲಿನಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಯಾವುದೇ ಶಾಲೆಗಳನ್ನು ಕಟ್ಟಿಸಿದರೂ ಅಥವಾ ಯಾವುದೇ ಶಾಲೆಯ ದುರಸ್ತಿ ಕಾರ್ಯವನ್ನು ತೆಗೆದು ಕೊಂಡರೂ ಅದರ ಮೌಲ್ಯದ ಶೇಕಡ ಒಂದುವರೆಯಷ್ಟು ಏನಿದೆಯೋ ಅದಕ್ಕಿಂತ ಮೀರಕೂಡದೆಂದು ಸರ್ಕಾರ ಒಂದು ಆಜ್ಞೆಯನ್ನು ಕೊಟ್ಟಿತ್ತು. ಇದರಿಂದಾಗಿ ಡೆಪ್ಯುಟಿ ಕಮಿಷನರ್ ಮೂಲಕ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಹಣವನ್ನು ಒದಗಿಸಿಕೊಡುವುದರ ಪರಿಣಾಮವಾಗಿ ಏನಾಗುತ್ತಿದೆಯೆಂದರೆ ಯಾವ ಶಾಲೆಯನ್ನೂ ಕೂಡ ಇವತ್ತು ದುರಸ್ತಿ ಮಾಡುವ ಮಟ್ಟಕ್ಕೆ ಇನ್ನೂ ಹೋಗಿಲ್ಲ. ನಮ್ಮ ಜಿಲ್ಲೆಯ ವಿಷಯವಾಗಿ ಹೇಳುವುದಾದರೆ ಅಲ್ಲಿರತಕ್ಕ ಹಳೆಯ ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಗಳ ಮೌಲ್ಯವನ್ನು ಕಂಡುಹಿಡಿಯುವುದಕ್ಕೆ ಆಗುತ್ತಾ ಇಲ್ಲ. ಅದಕ್ಕೆ ಬೇಕಾದಂಥ ದಾಖಲೆ ಪತ್ರಗಳು ಇಲ್ಲ. ಆದರಿಂದ ಅದರ ಮೌಲ್ಯ ದೊರಕುವುದು ಹೇಗೆ? ಶೇಕಡ ಒಂದೂವರೆಯಷ್ಟು ಹಣವನ್ನು ಕೊಡುವುದರಿಂದ ಅನೇಕ ಸಂದರ್ಭಗಳಲ್ಲಿ ಶಾಲೆಗಳಿಗೆ ವೈಟ್‌ವಾಷಿಂಗ್‌ಗೂ ಸಹ ಸಾಕಾಗದೆ ಇರುವಷ್ಟು ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಇಂತಹ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡು ಆ ಶಾಲೆಗಳನ್ನು ದುರಸ್ತಿಮಾಡುವುದಕ್ಕೆ ಸೂಕ್ತ ಅವಕಾಶವನ್ನು ಮಾಡಿಕೊಟ್ಟು ತನ್ಮೂಲಕ ಆ ಶಾಲೆಗಳ ದುರಸ್ತಿಗೆ ತಕ್ಕ ಆಸ್ಪದವನ್ನು ಮಾಡಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದನ್ನು ಈಗ ಮಾಡದಿದ್ದರೆ ಪುನಃ ಮತ್ತೊಮ್ಮೆ ಹೊಸ ಶಾಲೆಗಳನ್ನು ಕಟ್ಟುವುದಕ್ಕೆ ಒಂದಕ್ಕೆರಡರಷ್ಟು ಖರ್ಚು ಆದೀತು ಎಂಬ ವಿಷಯವನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇದನ್ನು ಮಾಡಿದ ನಂತರ ಮುಂದೆ ಇನ್ನು ಶಾಲೆಗಳಲ್ಲಿ ಸರಿಯಾದ ಉಪಾಧ್ಯಾಯರುಗಳನ್ನು ನೇಮಕ ಮಾಡುವ ವಿಚಾರದ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಈ ವಿಚಾರವಾಗಿ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಇರುವಂಥ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಸಂಖ್ಯೆಗಳನ್ನು ತಾವು ಪರಿಗಣಿಸಿ ನೋಡುವುದಾದರೆ ಅಲ್ಲಿ ಒಂದು ಚಿತ್ರ ಹೇಗಿದೆಯೆಂದರೆ, 1974-75 ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರಗತಿ ಶೇಕಡ 1.40 ಇದ್ದರೆ 1975-76 ರಲ್ಲಿ ಶೇಕಡ 1.42⅛ಯಷ್ಟು ಆಗಿದೆ. ಇದು ನಮ್ಮ ವಿದ್ಯಾ ಗುಣಮಟ್ಟವನ್ನು ಏರಿಸುವುದಕ್ಕೆ ಸಹಾಯವಾಗುತ್ತದೆಂದು ನಾನು ಭಾವಿಸುವುದಿಲ್ಲ. ಇವತ್ತು ಅದನ್ನು ಏರಿಸಬೇಕಾದರೆ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಹೇಳಿದಂತೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಶೇಕಡ 1.20 ಆಗುವ ಹಾಗೆ ಇಲ್ಲಿ ಆಗುವುದಕ್ಕೆ ಅವಕಾಶವಿದೆ. ಇವತ್ತು ನಮ್ಮ ಹಣಕಾಸಿನ ಪರಿಸ್ಥಿತಿ ಸಾಧ್ಯವಾಗದೇ ಹೋದರೆ ಶೇಕಡ 1.40ರಷ್ಟು ದಾಮಾಷಾ ಪ್ರಕಾರ ಏನಿದೆ ಅದನ್ನಾದರೂ ಜಾರಿಗೊಳಿಸುವುದಕ್ಕೆ ಪ್ರಯತ್ನಮಾಡಬೇಕು. ಅಲ್ಲದೇ ಹೋದರೆ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಅವನತಿಯಾಗುತ್ತದೆ. ಆದ್ದರಿಂದ ನಾವು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡದಿದ್ದರೆ ಖಂಡಿತವಾಗಿ ನಾವು ನಮ್ಮ ಸಾಧನೆಯಲ್ಲಿ ಯಶಸ್ವಿಯಾಗುವುದಿಲ್ಲ. ಇನ್ನೊಂದು ವಿಚಿತ್ರವಾದ ಅಂಶವನ್ನು ಈ ಒಂದು ವರದಿಯಲ್ಲಿ ಕೊಟ್ಟಿದ್ದಾರೆ. ದಾಮಾಷಾ ಪ್ರಕಾರ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾಪ್ರಗತಿ ಸಾಕಷ್ಟು ಆಗಿಲ್ಲ. 1975 76ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ, 2,50,284 ಇದ್ದರೆ ಮಾಧ್ಯಮಿಕ ಶಾಲೆಗಳಲ್ಲಿ 1,80,105 ವಿದ್ಯಾರ್ಥಿಗಳು ಇದ್ದಾರೆ.

3-00 P.M.

ಪ್ರಾಥಮಿಕ ಶಾಲೆಗಳಲ್ಲಿ ಕೇವಲ 714 ಉಪಾಧ್ಯಾಯರುಗಳಿದ್ದಾರೆ. ಮಾಧ್ಯಮಿಕ ಶಾಲೆಗಳಲ್ಲಿ 7,720 ಉಪಾಧ್ಯಾಯರುಗಳಿದ್ದಾರೆ. ನಿವೃತ್ತಿ ಅಥವಾ ದಾಮಾಶಾ ತೆಗೆದುಕೊಂಡರೆ

1;42ವರೆ ಆಗುತ್ತದೆ. ಹೀಗಾಗಿ ಒಂದು ಸಮಸ್ಯೆಯುಂಟಾಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ತಿಳಿಸಿ. ತಾವು ಉಪಾಧ್ಯಾಯರುಗಳನ್ನು ಮಂಜೂರು ಮಾಡುವಾಗ ಯಾವುದಾದರೂ ಕಾನೂನು ಬದ್ಧವಾಗಿ ಕೆಲಸ ಮಾಡುತ್ತಿದ್ದೀರಾ ಅಥವಾ ಯಾವುದಾದರೂ ರಾಜಕೀಯ ಒತ್ತಡಕ್ಕೆ ಮಣಿದು ಉಪಾಧ್ಯಾಯರನ್ನು ಕೊಡುತ್ತಿದ್ದೀರೋ ಎಂಬುದು ಅರ್ಥವಾಗಿಲ್ಲ. ಅದು ಇಲ್ಲದೇ ಹೋದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಬೇರೆ ಪ್ರದೇಶಗಳಲ್ಲಿ ಉಪಾಧ್ಯಾಯರುಗಳನ್ನು ದೊರಕಿಸಿದಂತೆ ದೊರಕಿಸಿಕೊಡಬೇಕಾಗಿದೆ. 1976-77ನೇ ಇಸ್ವಿಯ ಲೆಕ್ಕಾಚಾರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 525 ಉಪಾಧ್ಯಾಯರುಗಳನ್ನು ಒದಗಿಸಿಕೊಡಬೇಕಾಗಿದೆ. ಆದುದರಿಂದ ತಾವು ಇದರ ಬಗ್ಗೆ ಸೂಕ್ತ ಗಮನ ಹರಿಸಿ ಪರಿಹಾರವನ್ನು ಒದಗಿಸಿಕೊಡಬೇಕಾಗಿದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಷ್ಟು ಮಾತ್ರವಲ್ಲ ಮಿನಿಮಂ ನೀಡ್ಸ್ ಪ್ರೋಗ್ರಾಂ ಪ್ರಕಾರ ಕೂಡ ನಾವು ಅಳವಡಿಸಿಕೊಂಡಿರುವುದರಿಂದ ಇನ್ನು ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ಕೊಡಬೇಕಾಗಿರತಕ್ಕಂಥ ದಿಶೆಯಲ್ಲಿ ನಾವು ಹೆಚ್ಚು ಶ್ರಮವನ್ನು ವಹಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಉಪಾಧ್ಯಾಯರ ನೇಮಕಾತಿಯಲ್ಲೂ ಕೂಡ ಒಂದು ಹೊಂಥಾಣಿಕೆ ಇದ್ದಂತೆ ಕಂಡು ಬರುತ್ತಿಲ್ಲ. ಅರ್ಧ ಮಿಲಿಯನ್ ಜನರಿಗೆ ಉದ್ಯೋಗವಕಾಶಗಳನ್ನು ಒದಗಿಸಿಕೊಡುವ ಯೋಜನೆಯಂತೆ ಅನೇಕ ಜನರನ್ನು ! ನಮ್ಮ ಕರ್ನಾಟಕ ರಾಜ್ಯದಲ್ಲಿ ನೇಮಕ ಮಾಡಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆ ಆ ರೀತಿ ನೇಮಕ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಆ ರೀತಿ ನೇಮಕ ಮಾಡಿಲ್ಲ.

ಶ್ರೀ ಎ. ಜಿ. ಕೊಡಗಿ.—ನೇಮಿಸಿಕೊಳ್ಳಲಿಲ್ಲ ಆದರೆ ಅವರುಗಳನ್ನು ತರಬೇತಿಗೋಸ್ಕರ ಆಯ್ಕೆ ಮಾಡಿದ್ದಿರಿ. ಆ ರೀತಿ ಆಯ್ಕೆ ಮಾಡಿಕೊಂಡಂಥ ಜನರಿಗೆ ಟ್ರೈನಿಂಗ್ ಕೊಟ್ಟು ಪ್ರಾಥಮಿಕ ಶಾಲೆಗಳಲ್ಲಿ 150 ರೂಪಾಯಿಗಳ ಸ್ಟೈಫೆಂಡರಿ ಬೇಸಿಸ್‌ನ ಮೇಲೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇಮಕ ಮಾಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳವರ ಗಮನಕ್ಕೆ ತರಲಿಚ್ಛೆಪಡುತ್ತೇನೆ. ಕೇವಲ 150 ರೂಪಾಯಿಗಳಿಗೆ ಈ ಶಿಕ್ಷಕರು ಕೆಲಸ ಮಾಡಿದ ನಂತರ ಇವತ್ತು ಅವರನ್ನು ಕೆಲಸದಿಂದ ವಜಾ ಗೊಳಿಸತಕ್ಕಂಥದ್ದು ಸರಿಯೇ ? ಇವತ್ತು ಡಿ.ಎಲ್.ಆರ್.ಸಿ ಯಲ್ಲಿ ಅನುಭವ ಪಡೆದಿರತಕ್ಕಂಥವರನ್ನು, ತರಬೇತಿ ಪಡೆದಿರತಕ್ಕಂಥ ಶಿಕ್ಷಕರನ್ನು ಕೆಲಸದಿಂದ ವಜಾಗೊಳಿಸತಕ್ಕಂಥ ಸನ್ನಿವೇಶ ಇವತ್ತು ಉಂಟಾಗಿದೆ. ಇದನ್ನು ತಮ್ಮ ಗಮನಕ್ಕೆ ಹಿಂದೆಯೇ ತಂದಿದ್ದೇನೆ. ಇವತ್ತು 1-2 ವರ್ಷಗಳ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿದಂಥವರನ್ನು ನಿವೃತ್ತಿಗೊಳಿಸಿದಾಗ ಅವರ ಪಾಡು ಏನಾಗುತ್ತದೆ ಎಂಬುದನ್ನು ಸಹ ತಾವು ಪರಿಶೀಲಿಸಬೇಕಾಗಿದೆ ಇಂಥಾದ್ದಕ್ಕೆ ಅವಕಾಶ ಕೊಡ ಕೂಡದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಡಿ.ಎಲ್. ಆರ್.ಸಿ.ಯನ್ನು ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ. ಇಂಥವರಿಗೇ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು ಎನ್ನುವಂಥ ಆದೇಶವನ್ನು ಕೊಟ್ಟರೆ ಸ್ವಲ್ಪ ಮಟ್ಟಿಗೆ ಪರಿಸ್ಥಿತಿ ಸುಧಾರಿಸುತ್ತದೆ. ಇಲ್ಲದೇ ಹೋದರೆ ಅಂಥ ಉಪಾಧ್ಯಾಯರನ್ನು ಕೆಲಸದಿಂದ ತೆಗೆದು ಹಾಕಬೇಕಾದಂಥ ಸನ್ನಿವೇಶ ಉಂಟಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ ಹಾಗೆಯೇ ಡಿ.ಎಲ್.ಆರ್.ಸಿ.ಯಲ್ಲಿ ಇನ್ನೊಂದು ಏನಾಗಿದೆಯೆಂದರೆ, ಜಿಲ್ಲಾಧಿಕಾರಿಗಳ ಮುಖಾಂತರ ಜನವರಿ, ಫೆಬ್ರುವರಿಯಲ್ಲಿ ಬೇಕಾಗಿರತಕ್ಕಂಥ ಉಪಾಧ್ಯಾಯರ ಸಂಖ್ಯೆ ಯೆಷ್ಟು ಎಂಬುದನ್ನು ಬರೆದು ನಿಮ್ಮ ಡಿ.ಡಿ.ಪಿ.ಐ. ಆಫೀಸಿಗೆ ಕಳುಹಿಸುತ್ತಾರೆ. ಅದು ಸಾಧಾರಣವಾಗಿ ಮಾರ್ಚಿ, ಏಪ್ರಿಲ್‌ನಂತರ ಮಂಜೂರು ಆದ ನಂತರ ಆರ್ಡರ್ ಹೋಗುವುದು ಯಾವಾಗ ಎಂದರೆ ಅಕ್ಟೋಬರ್, ನವೆಂಬರ್ ಆದ ನಂತರ ತಲುಪುತ್ತದೆ. ಕೊನೆಗೆ ನೇಮಕ ಮಾಡುವಷ್ಟು ಹೊತ್ತಿಗೆ ಒಂದು ವರ್ಷ ಕಳೆದು ಹೋಗಿರುತ್ತದೆ. ಯಾವ ವರ್ಷಕ್ಕೆ ಉಪಾಧ್ಯಾಯರು ಬೇಕೆಂದರೆ ಕೇಳಿಕೊಂಡಿರುತ್ತಾರೆ ಆ ವರ್ಷ ನೇಮಕವಾಗದೇನೆ, ಅದರ ಪ್ರಯೋಜನ ಸಿಕ್ಕದ ರೀತಿಯಲ್ಲಿ ವ್ಯವಹಾರಗಳು ನಡೆಯುತ್ತಿದೆ, ಆದುದರಿಂದ ದಯವಿಟ್ಟು ಆ ರೀತಿ ಆಗದ ಹಾಗೆ ಒಂದು ಶಾಶ್ವತವಾದ ಯೋಜನೆಯನ್ನು ಹಾಕಿಕೊಂಡು ಪ್ರತಿ ವರ್ಷ ತಾವು ದೊರಕಿಸಿಕೊಡತಕ್ಕಂಥ ಉಪಾಧ್ಯಾಯರುಗಳನ್ನು ಆಯಾಯಾ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಕಾಲಕ್ಕೆ ಅನುಗುಣವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ತಮ್ಮ ಹತ್ತಿರ ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಇಷ್ಟು ಹೊತ್ತು ಪ್ರಾಥಮಿಕ ಶಾಲೆಗಳ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನು ಮುಂದೆ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಸ್ ಬಗ್ಗೆ ಎರಡು ಮಾತುಗಳನ್ನು ಆಡುವುದು ಸೂಕ್ತ ವೆಂದು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ 3 ವಿಧವಾದ ಹೈಸ್ಕೂಲ್‌ಗಳಿವೆ. ಮೊದಲನೆ ಯದು ಸರ್ಕಾರಿ ಹೈಸ್ಕೂಲ್, ಎರಡನೆಯದು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರತಕ್ಕಂಥ ಹೈಸ್ಕೂಲ್, ಮೂರನೆಯದು ಖಾಸಗಿ ಹೈಸ್ಕೂಲ್‌ಗಳು. ಇದರಲ್ಲಿ ಏನಾಗಿದೆ ಎಂದರೆ ಸ್ಥಳೀಯ ಹೈಸ್ಕೂಲ್‌ಗಳನ್ನು 1971ರ ಆಜ್ಞೆಯ ಮೂಲಕ, 197:ರ ಆಜ್ಞೆಯ ಮೂಲಕ ಹಾಗೂ 1975ರ ಮತ್ತೊಂದು ಆಜ್ಞೆಯ ಮೂಲಕ ಸರ್ಕಾರದವರು ವಹಿಸಿಕೊಂಡಿದ್ದಾರೆ. ಆದರೆ ದುರಾದೃಷ್ಟ ವಶಾತ್ ಏನಾಗಿದೆಂದರೆ 1971ರ ಆಜ್ಞೆ ಪ್ರಕಾರ ಏನು ವಹಿಸಿಕೊಂಡಿದ್ದಾರೆ, ಹಾಗೂ 1973ರ ಆಜ್ಞೆಯ ಪ್ರಕಾರವಾಗಿ ಏನು ಹೈಸ್ಕೂಲ್‌ಗಳನ್ನು ವಹಿಸಿಕೊಂಡಿದ್ದಾರೆ, ಅದರ ವಿಚಾರ ಸಂಪೂರ್ಣ ವಾಗಿ ಮುಗಿದು ಹೋಗಿದೆ. ಆದರೆ ಮಾನ್ಯ ಮಂತ್ರಿಗಳವರು ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದು ನನಗೆ ತಿಳಿದುಬಂದಿದೆ. ಅದು ಏನೆಂದರೆ ಈಗ ಸರ್ಕಾರದವರು ಏನು ಹೈಸ್ಕೂಲ್‌ಗಳನ್ನು ವಹಿಸಿಕೊಂಡಿದ್ದಾರೆ ಅದರಲ್ಲಿ ಕೆಲಸ ಮಾಡುತ್ತಿರತಕ್ಕಂಥ ಉಪಾಧ್ಯಾಯರುಗಳು ಏನಿದ್ದಾರೆ ಅವರು ಸರ್ಕಾರಿ ಉಪಾಧ್ಯಾಯರುಗಳು ಅಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ನನ್ನ ಗಮನಕ್ಕೆ ಬಂದಿದೆ ಹಾಗಾದರೆ ಅವರೆಲ್ಲಾ ಯಾರು ? ಯಾರ ಆಡಳಿತಕ್ಕೆ ಒಳಪಟ್ಟಂತ ಜನ ? ಆ ಶಾಲೆಗಳನ್ನೆಲ್ಲಾ ತಾವು ವಹಿಸಿಕೊಂಡು 4 ವರ್ಷವಾದರೂ ಕೂಡ ಅವರು ಸರ್ಕಾರಿ ನೌಕರರು ಅಲ್ಲವೆಂದು ಹೇಳುವುದಾದರೆ ಅವರು ಯಾರ ನೌಕರರು ? ಎನ್ನುವ ಪ್ರಶ್ನೆಗೆ ತಾವು ಸಮಂಜಸವಾದ ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನು ಎರಡನೆಯ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಒಂದು ವೇಳೆ ಅವರು ಸರ್ಕಾರಿ ನೌಕರರು ಅಲ್ಲ ಎಂದು ತಾವು ಪರಿಗಣಿಸುವುದಾದರೆ ಅವರುಗಳನ್ನು ತಾವು ಹೇಗೆ ಟ್ರಾನ್ಸ್‌ಫರ್ ಮಾಡುತ್ತೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಅವರು ಸರ್ಕಾರಿ ನೌಕರರು ಅಲ್ಲವೆನ್ನುವುದಾದರೆ ಅವರುಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಅವರನ್ನು ಹೇಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನೂ ಕೂಡ ತಾವು ತಿಳಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇವೆ. ಇನ್ನೊಂದು ವಿಚಾರವನ್ನು ನಾವು ಪರಿಶೀಲಿಸುವುದಾದರೆ 1-4-1971ರ ಆಜ್ಞೆಯನ್ನು 30-4-71ರಲ್ಲಿ ಹೊರಡಿಸಿದ್ದೀರಿ. 1-4-73 ಆಜ್ಞೆಯನ್ನು 29-5-73 ರಲ್ಲಿ ಹೊರಡಿಸಿದ್ದೀರಿ, ಮೂರನೆಯ 1-4-75ರ ಆಜ್ಞೆಯನ್ನು 6-1-76ರಲ್ಲಿ ಹೊರಡಿಸಿದ್ದೀರಿ. ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ಸಹ ನಾವು ನೋಡಬೇಕಾಗಿದೆ. ಅದಕ್ಕೆ ಉದಾಹರಣೆ ಗಳೊಡನೆ ಸಹಿತವಾಗಿ ಹೇಳುತ್ತೇನೆ; ಕುಂದಾಪುರದಲ್ಲಿ ಒಂದು ಜೂನಿಯರ್ ಕಾಲೇಜ್ ಇದೆ. ಆ ಜೂನಿಯರ್ ಕಾಲೇಜ್‌ನಲ್ಲಿ ಕೆಲವು ಅಧ್ಯಾಪಕರುಗಳನ್ನು ನಿಯಮಬದ್ಧವಾಗಿ, ವಿಧಿಬದ್ಧವಾಗಿ ನೇಮಿಸಿಕೊಂಡಿದ್ದಾರೆ. ಅವರು ಡಿ.ಡಿ.ಪಿ.ಐ. ಆದೇಶದಂತೆ ನೇಮಿಸಿಕೊಂಡಿದ್ದಾರೆ. ಆದರೆ ತಾವು 6-1-1976ರಲ್ಲಿ ಆಜ್ಞೆಯನ್ನು ಹೊರಡಿಸಿ ಅದು 1-4-1975ರಿಂದ ಜಾರಿಗೆ ಬರುತ್ತದೆ ಎಂದರೆ ಅದರ ಪರಿಣಾಮ ಯಾವರೀತಿಯಾಗುತ್ತದೆ ಎಂದು ತಾವು ಆಲೋಚನೆ ಮಾಡಬೇಕು. ಯಾರು ವಿಧಿಬದ್ಧವಾಗಿ, ನಿಯಮಬದ್ಧವಾಗಿ ನೇಮಕಗೊಂಡಂಥ ಅಧ್ಯಾಪಕರುಗಳು, ಲೆಕ್ಚರರ್ಸ್ ಇದ್ದಾರೆ ಅವರು ಇವತ್ತು ಮಾರ್ಚ್ 31ಕ್ಕೆ ಕೆಲಸದಿಂದ ವಜಾ ಆಗಬೇಕು ಎಂದು ಆಜ್ಞೆ ಇದೆ. ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂದು ನಾವು ಹೇಳಬೇಕಾದ್ದು ಇಲ್ಲ. ಟೆಂಪರ್‍ವರಿಯಾಗಿ ಅಪಾಯಿಂಟ್ ಆಗಿರತಕ್ಕಂಥ ಉಪಾಧ್ಯಾಯರುಗಳ ಬಗ್ಗೆ ತಾವು ಒಂದು ಆಜ್ಞೆ ಹೊರಡಿಸಿದ ತಾರೀಖಿನಿಂದ ಕೆಲಸದಿಂದ ವಜಾ ಮಾಡಿದ್ದೇವೆಂದು ಹೇಳುವುದಾದರೆ ಅವರಿಗೆ ಅದರಿಂದ ಎಷ್ಟು ಹಾನಿಯಾಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕು. ಇದರ ಬಗ್ಗೆ ಆಲೋಚನೆ ಮಾಡಿ ಈ ರೀತಿ ಅನ್ಯಾಯವಾಗುತ್ತಿರುವುದನ್ನು ತಡೆಗಟ್ಟಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದು ಸೂಕ್ತ. ನಮ್ಮ ಕುಂದಾಪುರ ತಾಲ್ಲೂಕಿನ ಬೈಂದೂರಿನ ಒಂದು ಜೂನಿಯರ್ ಕಾಲೇಜ್‌ನಲ್ಲಿ 1-4-1973ರ ಆಜ್ಞೆಯ ಪ್ರಕಾರ ಸರ್ಕಾರದವರೇ ವಹಿಸಿಕೊಂಡರು. ಆದರೆ ಅದಕ್ಕಿಂತ ಮೊದಲು ಅಂದರೆ 1972ನೇ ಇಸ್ವಿಯಲ್ಲಿ ಅಲ್ಲಿಗೆ ಒಬ್ಬರು ಪ್ರಿನ್ಸಿಪಾಲರನ್ನು ಕಾನೂನು ಬದ್ಧವಾಗಿ, ನಿಯಮ ಬದ್ಧವಾಗಿ ವಿಧಿಬದ್ಧವಾಗಿ, ಪಿ.ಯು.ಸಿ. ಬೋರ್ಡ್‌ನ ಅನುಮತಿಯ ಮೇರೆಗೆ, ಜಾಯಿಂಟ್ ಡೈರೆಕ್ಟರ್‌ರವರ ಒಪ್ಪಿಗೆಯ ಮೇರೆಗೆ ಅವರನ್ನು ನೇಮಕ ಮಾಡಿದ್ದಾರೆ ಅವರ ಸ್ಕೇಲ್ ಕೂಡ ಫಿಕ್ಸ್ ಆಗಿದೆ. 400-9:0 ಗ್ರೇಡ್‌ನ ಸ್ಕೇಲನ್ನು ಫಿಕ್ಸ್ ಮಾಡಿದ್ದಾರೆ. ಇವತ್ತು ಆ ಶಾಲೆಯು ಸರ್ಕಾರದ ವಶಕ್ಕೆ ಬಂದನಂತರ ಒಂದು

ಆಶ್ಚರ್ಯದ ಸಂಗತಿ ಏನಾಗಿದೆ ಎಂದರೆ 1973ರಲ್ಲಿ ಹಸ್ತಾಂತರ ಗೊಂಡಂಥ ಈ ಕಾಲೇಜ್‌ನಲ್ಲಿರತಕ್ಕಂಥ ಪ್ರಿನ್ಸಿಪಾಲರು ಯಾರಿದ್ದಾರೆ ಅವರು ಕೇವಲ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ 1976ನೇ ಇಸ್ವಿಯಲ್ಲಿ ಮತ್ತೆ ಇನ್ನೊಬ್ಬರನ್ನು ಅಲ್ಲಿಗೆ ನೇಮಕ ಮಾಡುವ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಅದನ್ನು ತಮ್ಮ ಗಮನಕ್ಕೂ ಕೂಡ ತಂದಿದ್ದೇನೆ. ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. 1973ರಲ್ಲಿ ಸರ್ಕಾರಕ್ಕೆ ಹಸ್ತಾಂತರಗೊಂಡ ನಂತರ ಅಲ್ಲಿ ಕೆಲಸ ಮಾಡುತ್ತಿದ್ದಂಥ ಪ್ರಿನ್ಸಿಪಾಲರು ಕೇವಲ ಹಂಗಾಮಿ ಎಂದು ಹೇಳತಕ್ಕಂಥದ್ದನ್ನು ತಾವು ಪರಿಶೀಲನೆ ಮಾಡಬೇಕು, ಇದರಿಂದ ಮುಂದೆ ಆಗತಕ್ಕಂಥ ತೊಂದರೆಯನ್ನು ತಾವು ತಪ್ಪಿಸಬೇಕಾಗಿದೆ. ಟೇಕನ್ ಓವರ್ ಸ್ಕೂಲ್ಸ್‌ಗಳು ಏನಿವೆ ಅವುಗಳ ಬಗ್ಗೆ ಗಮನ ಹರಿಸಿ, ಲೋಪದೋಷಗಳು ಇದ್ದರೆ ಅವುಗಳ ಬಗ್ಗೆ ಪರಿಹಾರ ಕೊಡಬೇಕಾಗುತ್ತದೆ. ಅಲ್ಲಿಯ ನೌಕರ ವರ್ಗದವರಿಗೆ ಅನಿಶ್ಚಿತತೆಯನ್ನು ಉಂಟು ಮಾಡಕೂಡದೆಂದು ಹೇಳುವುದಕ್ಕೆ ಬಯಸುತ್ತೇನೆ.

ಹೈಸ್ಕೂಲಿನಲ್ಲಿ ಕೆಲಸ ಮಾಡತಕ್ಕ ಕ್ರಾಫ್ಟ್ ಟೀಚರುಗಳಿಗೆ ಪೇಸ್ಕೇಲ್ ಫಿಕ್ಸ್ ಮಾಡುವಾಗ ಡಿಪ್ಲೊಮಾ, ಸರ್ಟಿಫಿಕೇಟ್ ಈ ರೀತಿ ಬೇರೆ ಬೇರೆ ತರಬೇತಿಯನ್ನು ಹೊಂದಿದವರಿಗೆ ಬೇರೆ ಬೇರೆ ಅಜ್ಞಗಳು ಇವೆ. ಕ್ರಾಫ್ಟ್ ಟೀಚರಿಗೆ ಒಂದೇ ವಿದ್ಯಾರ್ಹತೆ ಇರುವವರಿಗೆ ಬೇರೆ ಬೇರೆ ಸ್ಕೇಲನ್ನು ಅಡಾಪ್ಟ್ ಮಾಡುತ್ತಿದ್ದಾರೆ. ಇದು ತಾರತಮ್ಯವನ್ನು ತೋರಿಸಿದಂತಾಗುತ್ತದೆ. ಏತಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗಲಿಲ್ಲ. ಈ ವಿಚಾರವನ್ನು ಡಿ.ಡಿ.ಪಿ.ಐ. ಅವರ ಗಮನಕ್ಕೂ ತಂದಿದ್ದೇನೆ. ಇದು ಬಹಳ ಕಾಲದಿಂದ ಉಳಿದಿರುವ ವಿಚಾರ. ಆದ್ದರಿಂದ ಶೀಘ್ರವಾಗಿ ಇದನ್ನು ಪರಿಹಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕುಂದಾಪುರದಲ್ಲಿ ಒಬ್ಬರು ಹೈಸ್ಕೂಲ್ ಕ್ರಾಫ್ಟ್ ಟೀಚರ್ ಇದ್ದಾರೆ. ಅವರಿಗೆ ಎಂ.ಬಿ.ಬಿ.ಇಡಿ. ಆಗಿದೆ. ಕ್ರಾಫ್ಟ್ ಟೀಚರಿಗೆ ಎಸ್.ಎಸ್.ಎಲ್.ಸಿ. ಪಾಸಾಗಿರುತ್ತದೆ. ಕ್ರಾಫ್ಟ್ ಟ್ರೈನಿಂಗ್ ಮಾಡಿಕೊಂಡಿರುತ್ತಾರೆ ಅವರಿಗೆ 12—240 ರೂಪಾಯಿಗಳ ಪೇಸ್ಕೇಲ್ ಇದೆ. ಅವರು ಬಹಳ ದಿನಗಳಿಂದಲೂ ಅದೇ ಪೇ ಸ್ಕೇಲನ್ನು ಹೊಂದಿದ್ದಾರೆ. ಅಲ್ಲಿ ಬೇರೆ ಗ್ರಾಜುಯೇಟ್ ಉಪಾಧ್ಯಾಯರ ಪೋಸ್ಟ್ ವೇಕೆಂಟ್ ಇದೆ. ಆದ್ದರಿಂದ ಅಲ್ಲಿಗೆ ಬೇರೆ ಉಪಾಧ್ಯಾಯರನ್ನು ಅಪಾಯಿಂಟ್ ಮಾಡುವ ಅವಕಾಶ ಇರುವಾಗ ಒಳ್ಳೆಯ ಅಧ್ಯಾಪಕರನ್ನು ದೊರಕಿಸಿಕೊಡುವ ಉದ್ದೇಶದಿಂದ ಗ್ರಾಜುಯೇಟ್ ಆಗಿರುವ ಕ್ರಾಫ್ಟ್ ಟೀಚರಿಗೆ ಆ ಪೋಸ್ಟನ್ನು ಕೊಡಬೇಕು. ಮತ್ತು ಕ್ರಾಫ್ಟ್ ಟೀಚರ್ಸ್ ಪೇಸ್ಕೇಲ್ ಬಹಳ ದಿವಸಗಳಿಂದ ಕಡಿಮೆ ಇರುವುದರಿಂದ ಅವರ ಪೇಸ್ಕೇಲ್ ರಿವೈಜ್ ಮಾಡುವುದಕ್ಕೆ ಸಹಕಾರ ಮಾಡಬೇಕು ಎಂದು ನಾನು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇದು ತಾತ್ವಿಕವಾದ ವಿಚಾರ. ಇದು ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟ ವಿಚಾರ. ಪ್ರತಿ ಇಲಾಖೆಯಲ್ಲಿಯೂ ಕೂಡ ವಿಳಂಬ ಮತ್ತು ಅನಾವಶ್ಯಕವಾದ ಕಿರುಕುಳ ಆಗುತ್ತಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದು ವಿಧಾನಸೌಧದಲ್ಲಿಯೂ ಆಗುತ್ತಿದೆ, ಹೊರಗಡೆ ಡೈರೆಕ್ಟರೇಟ್ ಆಫೀಸಿನಲ್ಲಿಯೂ ಆಗುತ್ತಿದೆ. ಇದನ್ನು ಪರಿಹಾರ ಮಾಡಬೇಕು. ಯಾವುದೇ ಒಂದು ಫೈಲು ವಿಧಾನಸೌಧಕ್ಕೆ ಬಂತು ಎಂದರೆ ಅದು ಕೈಮೀರಿ ಹೋಯಿತು. ಅದು ವಿಳಂಬವಾಗುತ್ತದೆ. ವರ್ಷಾನುಗಟ್ಟಲೇ ವಿಧಾನಸೌಧದಲ್ಲಿ ಕೊಳೆಯುತ್ತದೆ. ಇದು ಹೆಚ್ಚಿನ ಎಲ್ಲರ ಒಮ್ಮತದ ಅಭಿಪ್ರಾಯವಾಗಿದೆ. ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಲೇಬೇಕು. ತೀವ್ರವಾಗಿ ಎಲ್ಲಾ ಕೆಲಸಕಾರ್ಯಗಳು ಆಗುವಂತೆ ಮಾಡಬೇಕು ಈ ರೀತಿ ವಿಳಂಬವಾಗುವುದಕ್ಕೆ ಮುಖ್ಯ ಕಾರಣ ಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಐ.ಎ.ಎಸ್. ಆಫೀಸರುಗಳನ್ನು ಬೇರೆ ಕಡೆಗಳಿಂದ ತಂದು ಹಾಕುತ್ತಾರೆ. ಅವರು ಆ ಇಲಾಖೆಯಲ್ಲಿ ಒಂದೆರಡು ವರ್ಷ ಕೆಲಸ ಮಾಡಿದ ಮೇಲೆ ಬೇರೆ ಇಲಾಖೆಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಅದರ ಪರಿಣಾಮವಾಗಿ ಆ ಇಲಾಖೆಯ ಸಂಪೂರ್ಣ ಚಿತ್ರ ಸಂಪೂರ್ಣ ಜ್ಞಾನ ಹೊಸದಾಗಿ ಬಂದವರಿಗೆ ಇರುವುದಿಲ್ಲ. ಅವರು ಆ ಇಲಾಖೆಯ ಸಂಬಂಧಪಟ್ಟ ಕ್ಲಾರ್ಕ್‌ಅನ್ನು ಅವಲಂಬಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಈ ಒಂದು ವಿಳಂಬಕ್ಕೆ ಇದು ಕಾರಣ ಎಂದು ನಮ್ಮ ಖಚಿತವಾದ ಅಭಿಪ್ರಾಯ ಆದ್ದರಿಂದ ಅದಕ್ಕೆ ನಾನು ಒಂದು ಪರಿಹಾರವನ್ನು ಸೂಚನೆ ಮಾಡುತ್ತೇನೆ. ಅದು ಏನೆಂದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನೇ ಆ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ ಅದಕ್ಕೆ ಬೇಕಾಗುವ ತಿದ್ದುಪಡಿಯನ್ನು ಮಾಡಿ

ಕೊಂಡರೆ ಎಲ್ಲಕ್ಕೂ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ನಾನು ಅವರನ್ನು ಟೀಕೆ ಮಾಡುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿಲ್ಲ. ಅವರಿಗೆ ಎಲ್ಲಾ ಯೋಗ್ಯತೆಗಳೂ ಇವೆ. ಹೊಸದಾಗಿ ನೇಮಕ ಮಾಡಿದ ಕಾರ್ಯದರ್ಶಿಯವರು ಸಂಬಂಧಪಟ್ಟ ಇಲಾಖೆಯ ಅನುಭವವನ್ನು ಪಡೆಯುವ ವೇಳೆಗೆ ಅವರನ್ನು ಬೇರೊಂದು ಇಲಾಖೆಗೆ ವರ್ಗಾ ಮಾಡುತ್ತಾರೆ. ಇದರಿಂದಾಗಿ ಸಮಸ್ಯೆಯು ಉದ್ಭವಾಗುತ್ತವೆ. ಅನೇಕ ಸಮಸ್ಯೆಗಳನ್ನು ಹತ್ತಾರು ವರ್ಷಗಳಿಂದ ಬೆಳೆಸಿಕೊಂಡು ಬರುತ್ತಿದ್ದಾರೆ. ಒಂದೆರಡು ವರ್ಷ ಹಂಗಾಮಿಯಾಗಿ ಕಾರ್ಯದರ್ಶಿಯವರನ್ನು ನೇಮಕ ಮಾಡಿ ಆಮೇಲೆ ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಿದರೆ ಅದರಿಂದ ತೊಂದರೆಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.– ಸೆಕ್ರೆಟರಿಯವರು ಇದ್ದಾರೆ, ಡೆಪ್ಯುಟಿ ಸೆಕ್ರೆಟರಿ ಅವರು ಇರುತ್ತಾರೆ. ಅವರೆಲ್ಲರೂ ನೋಡಿಕೊಳ್ಳುತ್ತಾರೆ.

ಶ್ರೀ ಎ. ಜಿ. ಕೊಡಗಿ.—ನಾನು ಈಗ ಹೇಳುತ್ತಿರುವುದು ಒಂದು ಇಲಾಖೆಯ ಸಂಬಂಧದಲ್ಲಿ ಅಲ್ಲ, ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಹಾಗೆ ನಾನು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ನಾನು ಯಾರ ಮೇಲೂ ವೈಯ್ಯುಕ್ತಿಕವಾದ ಅಪಾದನೆ ಮಾಡುತ್ತಿಲ್ಲ. ಯಾವ ಕಾರ್ಯದರ್ಶಿಗಳಿಗೆ ಸಂಬಂಧಪಟ ಹಾಗೆ ಹೇಳುತ್ತಿಲ್ಲ. ನಾನು ನನ್ನ ಮನಸ್ಸಿಗೆ ಬಂದಂತಹ ವಿಚಾರವನ್ನು, ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಸಂಬಂಧಪಟ್ಟ ಕಾರ್ಯದರ್ಶಿಗಳವರಿಗೆ ಸಂಪೂರ್ಣವಾದ ಜ್ಞಾನ ಆಯಾ ವಿಚಾರದಲ್ಲಿ ಇರಬೇಕಾದ್ದು ಅವಶ್ಯಕತೆ ಇದೆ, ಎಲ್ಲವನ್ನೂ ಪರಿಪೂರ್ಣವಾಗಿ ಹೊಂದುವುದು ಸಾಧ್ಯವಿಲ್ಲ. ಐ.ಎ.ಎಸ್. ಅಧಿಕಾರಿ ಆಗುವುದಕ್ಕೆ ಒಂದು ಜ್ಞಾನ ಸೀಮಿತವಾಗಿದೆ. ಒಂದು ಲಿಮಿಟೇಷನಲ್ಲಿರುತ್ತದೆ. ಎಲ್ಲಾ ವಿಷಯಗಳಲ್ಲೂ ಎಂದರೆ ಫುಡ್, ಎಜುಕೇಷನ್, ಪಿ.ಡಬ್ಲ್ಯುಡಿ, ರೆವಿನ್ಯೂ ಎಲ್ಲಾ ವಿಚಾರಗಳಲ್ಲೂ ಪರಿಪೂರ್ಣವಾದ ಜ್ಞಾನ ಇರುವುದಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ನಾನು ಹೇಳುವುದರಲ್ಲಿ ಏನಾದರೂ ತಪ್ಪು ಇದ್ದರೆ ನಾನು ಅದನ್ನು ತಿದ್ದಿಕೊಳ್ಳುವುದಕ್ಕೆ ತಯಾರಿದ್ದೇನೆ. ಈ ವಿದ್ಯಾ ಇಲಾಖೆ ಒಂದು ದೊಡ್ಡ ಸಮುದ್ರದೋಪಾದಿಯಲ್ಲಿ ಇದೆ. ಅಲ್ಲಿ ಬಹಳ ಕೆಲಸಗಳು ವಿಳಂಬವಾಗುತ್ತಿವೆ. ಆದ್ದರಿಂದ ಈ ವಿಳಂಬಕ್ಕೆ ಕಾರಣವನ್ನು ಹುಡುಕಿ ಅದಕ್ಕೆ ಪರಿಹಾರ ಮಾರ್ಗವನ್ನು ಹುಡುಕಬೇಕು. ಇಂತಿಷ್ಟು ಕಾಲದಲ್ಲಿ ಒಂದು ಕೇಸು ನಿರ್ದಿಷ್ಟ ಅವಧಿಯಲ್ಲಿ ತೀರ್ಮಾನವಾಗಬೇಕು ಎಂದು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಇಲ್ಲದೆ ಹೋದರೆ ಎಲ್ಲಾ ಯೋಜನೆಗಳೂ ಫಲಕಾರಿಯಾಗುವುದಿಲ್ಲ. ಇಷ್ಟು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತಂದು ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ವಿದ್ಯಾ ಸಚಿವರು ಈ ಸಭೆಯಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ವರ್ಷ ಸುಮಾರು ೧೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಬೇಡಿಕೆಯನ್ನು ಮಂಡಿಸಿದ್ದಾರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದು ೪ ವರ್ಷಗಳಾಯಿತು. ಪ್ರತಿವರ್ಷವೂ ಕೂಡ ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಹಣವನ್ನು ಒದಗಿಸುತ್ತಾ ಬಂದಿದ್ದಾರೆ. ಕಳೆದ ವರ್ಷ ಈ ಇಲಾಖೆಗೆ ೯೧ ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಈ ವರ್ಷ ೧೧೨ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಇಲಾಖೆಗೆ ಪ್ರತಿ ವರ್ಷವೂ ಕೂಡ ಹಣವನ್ನು ಒದಗಿಸುವುದನ್ನು ಏರಿಸುತ್ತಾ ಬಂದಿದ್ದಾರೆ. ಶಾಲಾ ಕಾಲೇಜುಗಳ ಕಟ್ಟಡ ಮತ್ತು ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿ ಬೆಳೆಯುತ್ತಿದೆ. ಆದರೆ ನಿರುದ್ಯೋಗಿಗಳ ಸಂಖ್ಯೆಯೂ ಕೂಡ ಜಾಸ್ತಿಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದರ ಪರಿಣಾಮ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕಾಗಿ ಬಂದಿದೆ, ವಿದ್ಯಾಭ್ಯಾಸದ ಮಟ್ಟ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಕೆಳಮಟ್ಟಕ್ಕೆ ಹೋಗಿವೆ. ಅದನ್ನು ಊಹಿಸುವುದಕ್ಕೆ ಕಷ್ಟವಾಗಿದೆ. ನಾನು ನಿರೀಕ್ಷಣೆ ಮಾಡಿದ್ದೆ ಈಗಿನ ವಿದ್ಯಾ ಸಚಿವರು ಅನೇಕ ಒಳ್ಳೆಯ ಗುಣಗಳನ್ನು ಇಟ್ಟುಕೊಂಡಿದ್ದಾರೆ ಮತ್ತು ಶುದ್ಧಹಸ್ತವುಳ್ಳವರಾಗಿದ್ದಾರೆ ಅವರಿಗೆ ಬೇರೆ ಯಾವ ಹವ್ಯಾಸ ಇದ್ದಹಾಗೆ ಕಾಣುವುದಿಲ್ಲ, ಬೇರೆ ಯಾವ ಹವ್ಯಾಸವೂ ಇಲ್ಲ. ಆದ್ದರಿಂದ ನಾನು ನೀರಿಕ್ಷಣೆ ಮಾಡಿದ್ದೆ ಅವರಿಗೆ ಬೇರೆ ಯಾವ ಹವ್ಯಾಸವೂ ಇಲ್ಲದೆ ಇರುವುದರಿಂದ ಕೊನೆಗಾದರೂ ವಿದ್ಯಾರ್ಥಿಗಳ ಬಗ್ಗೆ ಹೆಚ್ಚು ಚಿಂತನೆ ಮಾಡಿ ಅಗಾಧವಾದ ನಿರುದ್ಯೋಗ ಸಮಸ್ಯೆ ಏನು ತಾಂಡವ ಮಾಡುತ್ತಿದೆ ಅದಕ್ಕೆ ಪರಿಹಾರವನ್ನು ಕಂಡು ಹಿಡಿಯುತ್ತಾರೆ ಎಂದು ನಾನು ನಿರೀಕ್ಷಣೆ ಮಾಡಿದ್ದೆ.

ಈಗಾಗಲೇ ನಾಲ್ಕು ವರ್ಷಗಳು ಕಳೆದು ಹೋಯಿತು. ಇನ್ನು ಇರುವ ಕಾಲದಲ್ಲಿ ಈಗ ಇವರು ಏನು ಪ್ರಯತ್ನ ಮಾಡಿದರೂ ಈ ಬಗ್ಗೆ ಏನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದು ೨೮ ವರ್ಷಗಳಾಯಿತು. ಅಂದಿನಿಂದ ಇಂದಿನವರೆಗೂ ಅನೇಕ ಜನ ವಿದ್ಯಾವಂತರು ನೌಕರರು, ರಾಜಕಾರಿಣಿಗಳು, ತಜ್ಞರು ಎಲ್ಲರೂ ಬಹಳವಾಗಿ ಹೇಳುತ್ತಿದ್ದಾರೆ, ಈಗ ಮಕ್ಕಳಿಗೆ ಕೊಡುತ್ತಿರುವ ವಿದ್ಯಾಭ್ಯಾಸದಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ಸುಮ್ಮನೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೆ ಆಗುವುದಿಲ್ಲ. ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಇದಕ್ಕೆ ಒಂದು ರೂಪಾಂತರ ಕೊಡಬೇಕು. ಅನೇಕ ಜನ ಅನೇಕ ಸಂದರ್ಭಗಳಲ್ಲಿ ಹೇಳಿದರು ಈಗಿರತಕ್ಕ ವಿದ್ಯಾಸಚಿವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬದಲಾವಣೆ ಮಾಡುತ್ತಾರೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಪ್ರಯತ್ನ ಮಾಡುತ್ತಾರೆ ಎಂದು. ಆದರೆ ಈಗ ನಡೆದಿರತಕ್ಕ ಪರಿಸ್ಥಿತಿಯನ್ನು ನೋಡಿದರೆ ಹಿಂದಿನ ಜಾಟಿಯಲ್ಲಿಯೇ ಹೋಗುತ್ತಿದೆ. ಹಣವನ್ನೇನೋ ಪ್ರತಿವರ್ಷ ಜಾಸ್ತಿ ಖರ್ಚು ಮಾಡುತ್ತಿದ್ದಾರೆ, ಸ್ಕೂಲು ಕಾಲೇಜುಗಳು ಜಾಸ್ತಿಯಾಗುತ್ತಾ ಇವೆ. ಆದರೆ ಮೂಲಭೂತ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾವಣೆ ಮಾಡಿ ಒಳ್ಳೆಯ ಫಲಿತಾಂಶ ಬರುತ್ತದೆ ಎಂದು ನಾನು ನಿರೀಕ್ಷಣೆ ಮಾಡಿದ್ದೆ, ಅದನ್ನು ಮಾಡಲಿಲ್ಲ, ಇದು ಬಹಳ ದುಃಖದ ಸಂಗತಿ ಎಂದು ನಾನು ಹೇಳುತ್ತೇನೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ತಕ್ಷಣ ತನ್ನ ಜೀವನವನ್ನು ನಡೆಸುವುದಕ್ಕೆ ಕೆಲಸಕ್ಕಾಗಿ ಅಲೆಯುವುದು ಒಂದಲ್ಲ ಒಂದು ರೀತಿಯಲ್ಲಿ ಯಾರಾದರೂ ಒಬ್ಬರನ್ನು ಹಿಡಿದು ಅವರಿಗೆ ಕೈಮುಗಿದು ಸರ್ಕಾರಿ ಕೆಲಸವನ್ನು ಕೊಡಿಸಿ ಎಂದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಯುವಂತಹ ಪರಿಸ್ಥಿತಿ ಬಂದಿದೆ. ಸ್ವಾಭಿಮಾನದಿಂದ ಕಲಿತಂತಹ ವಿದ್ಯೆಯನ್ನು ಉಪಯೋಗಿಸಿಕೊಂಡು ಆತ್ಮಾಭಿಮಾನದಿಂದ ಸ್ವತಂತ್ರವಾಗಿ ಜೀವನನಡೆಸತಕ್ಕಂಥಾ ವೃತ್ತಿ ಶಿಕ್ಷಣವನ್ನು ಕೊಡತಕ್ಕಂಥಾ ವಿದ್ಯಾಭ್ಯಾಸ ನಮ್ಮದೇಶದಲ್ಲಿದೆಯೇ ? ಇದು ಕರ್ನಾಟಕದಲ್ಲಿಯೇ ಅಲ್ಲ, ಇಡೀ ಭಾರತದಲ್ಲಿ ಯಾವದೇಶದಲ್ಲಿಯೂ ಇಂಥಾ ಒಂದು ವಿದ್ಯಾಭ್ಯಾಸವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡದೆ ಇರುವುದು ದುರ್ದೈವದ ಸಂಗತಿ ಎಂದು ಹೇಳಿದರೆ ತಪ್ಪಾಗಲಾರದು. ವಿದ್ಯಾರ್ಥಿಗಳು ಪರೀಕ್ಷೆ ಮುಗಿದ ತಕ್ಷಣ ಆತ್ಮಾಭಿಮಾನದಿಂದ, ಸ್ವಾಭಿಮಾನದಿಂದ ಸ್ವತಂತ್ರವಾಗಿ ಜೀವನ ಮಾಡತಕ್ಕ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ವಿದ್ಯಾರ್ಥಿಗಳು ಒಳ್ಳೆಯ ಗುಣಮೌಲ್ಯಗಳನ್ನು ಹೊಂದಿ ಪಾಪಪುಣ್ಯಗಳ ಭೀತಿಯಿಂದ ಅನೇಕ ಉತ್ತಮವಾದ ಗುಣಗಳನ್ನು ಹೊಂದಿ ಸಮಾಜಕ್ಕೆ ತನ್ನ ತಂದೆತಾಯಿಗಳಿಗೆ ಭಾರವಾಗಿ ಉಳಿದು ಸ್ವಾವಲಂಬಿಯಾಗಿ ಜೀವನವನ್ನು ನಡೆಸತಕ್ಕಂಥಾ ಒಂದು ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈಗ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದಾರೆ ಇದು ಸದ್ವಿನಿಯೋಗವಾಗಬೇಕು. ಇವೊತ್ತು ಏನಾಗಿದೆ ಎಂದರೆ ಒಬ್ಬ ವಿದ್ಯಾರ್ಥಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿದ ತಕ್ಷಣ ಅವನಲ್ಲಿ ಏನು ಗುಣ ಕಂಡುಬರುತ್ತಿದೆ ಎಂದರೆ ಅವನಲ್ಲಿ ಜಿಗುಪ್ಸೆ ಉಂಟಾಗಿ ಅವನು ಅಶಾಂತಿಗೆ ಒಳಗಾಗಿ ಎಲ್ಲಾ ವಿಧವಾದ ಕೆಟ್ಟ ಗುಣಗಳ ಆಗರವಾಗಿ ಅವನು ಸಮಾಜಕ್ಕೆ ಒಂದು ನ್ಯೂಸೆನ್ಸ್ ಆಗುತ್ತಿದ್ದಾನೆ. ಇದರಿಂದ ದೇಶದಲ್ಲಿ ಬಹು ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಇದೇ ವಿದ್ಯಾಭ್ಯಾಸ ಪರಿಸ್ಥಿತಿ ಮುಂದುವರಿದು ವರ್ಷೇ ವರ್ಷೇ ಲಕ್ಷಾಂತರ ನಿರುದ್ಯೋಗಿಗಳಾದರೆ ದೊಡ್ಡ ಪೆಡಂಭೂತವಾಗಿ ಸರ್ಕಾರವನ್ನು, ಸಮಾಜವನ್ನು ನುಂಗಿಹಾಕುತ್ತಾರೆ ಎಂದು ಹೇಳಿದರೆ ತಪ್ಪಾಗಲಾರದು. ಈಗಿನ ಸರ್ಕಾರ ಈ ಭಯಂಕರ ಸಮಸ್ಯೆಯನ್ನು ಬಿಡಿಸುವುದಕ್ಕೆ ಆಲೋಚನೆ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದಾದರೂ ಇದರ ಬಗ್ಗೆ ಯೋಚನೆಮಾಡಿ, ವಿದ್ಯಾಭ್ಯಾಸ ಮುಗಿಸಿದ ತಕ್ಷಣ ಅವನು ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಜೀವನ ಮಾಡುವುದಕ್ಕೆ ಆಗುವಂಥ ವಿದ್ಯಾಭ್ಯಾಸ ಕ್ರಮವನ್ನು ಮಾರ್ಪಡಿಸಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಿರತಕ್ಕ ವಿದ್ಯಾಭ್ಯಾಸ ಪದ್ಧತಿಗೆ ೧೧೨ ಕೋಟಿ ಅಲ್ಲ ೫೦೦ ಕೋಟಿ ರೂಪಾಯಿ ಎಷ್ಟು ಉತ್ಪತ್ತಿ ಇದೆಯೋ ಅಷ್ಟು ದುಡ್ಡನ್ನು ಖರ್ಚುಮಾಡಿದರೂ ಯಾವ ವಿಧವಾದ ಸಾರ್ಥಕವಾಗುವುದಿಲ್ಲ. ಇದೇ ರೀತಿ ಇದ್ದರೆ ದೇಶ ಅಧೋಗತಿಗೆ ಇಳಿದು, ಕೆಟ್ಟದ್ದನ್ನು ಎದುರಿಸಬೇಕಾದ ಭೀಕರ ಪರಿಸ್ಥಿತಿ ಬರಬಹುದು ಎಂದು ಹೇಳಿದರೆ ತಪ್ಪಾಗಲಾರದು.

ಗ್ರಾಮಾಂತರ ಪ್ರದೇಶದ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಅದು ಒಂದು ದುಃಸ್ಥಿತಿ. ಮಾನ್ಯ ಮಲ್ಲಿಕಾರ್ಜುನಸ್ವಾಮಿಗಳ ಕಾಲದಲ್ಲಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿ ಮಕ್ಕಳು, ಶಿಸ್ತು ಕಲಿತುಕೊಂಡು, ನಾಲ್ಕು ಅಕ್ಷರ ಕಲಿತುಕೊಳ್ಳುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಅದು ಇವತ್ತು ತಪ್ಪಾಯಿತು, ತಮ್ಮ ಕಾಲದಲ್ಲಿ ಅನೇಕ ಉಪಾಧ್ಯಾಯರುಗಳನ್ನು ನೇಮಕಮಾಡಿದಿರಿ.

ಇದರಿಂದ ಯಾವ ವಿಧವಾದ ಸಮಸ್ಯೆಯೂ ಪರಿಹಾರವಾಗಿಲ್ಲ. ನೂರಕ್ಕೆ ೨೦–೨೫ ಪರ್ಸೆಂಟ್ ಒಳ್ಳೆಯ ಉಪಾಧ್ಯಾಯರು ಇರಬಹುದು ಉಳಿದವರು ಶಾಲೆಗಳಿಗೆ ಸರಿಯಾಗಿ ಹೋಗುವುದಿಲ್ಲ. ಹೋದರೂ ಪಾಠ ಹೇಳುವುದಿಲ್ಲ, ಎಲಿಮೆಂಟರಿ ಪ್ರಿನ್ಸ್‌ಪಲ್ ಬಗ್ಗೆ ಸರಿಯಾಗಿ ಹೇಳುವುದಿಲ್ಲ. ಪ್ರೈಮರಿ ಸ್ಕೂಲ್ ನಲ್ಲಿ ಓದತಕ್ಕ ಮಕ್ಕಳು ಮಗ್ಗಿಯನ್ನೂ ಸಹ ಹೇಳುವಂಥ ಸ್ಥಿತಿಯಲ್ಲಿಲ್ಲ. ಹಾಗೂ ಹೀಗೂ ಕೊನೆಗೆ ಎಸ್.ಎಸ್.ಎಲ್.ಸಿ.ಗೆ ಹೋಗುತ್ತಾರೆ. ಹೀಗಾಗಿ ಎಸ್.ಎಸ್.ಎಲ್.ಸಿ. ರಿಸಲ್ಟ್ ತೆಗೆದುಕೊಂಡರೆ ೫ ಪರ್ಸೆಂಟ್ ೨ ಪರ್ಸೆಂಟ್, ಅದೂ ಇಲ್ಲ ಎಂದರೆ ಜೀರೋ ಆಗುತ್ತದೆ ಬಹುಶಃ ಯಾವ ಇಲಾಖೆ ಯಲ್ಲೂ ಇಷ್ಟು ಅನ್ಯಾಯವಾಗಿಲ್ಲ. ಪ್ರೈಮರಿ ಎಜುಕೇಷನ್‌ಗೆ ೪೦–೫೦ ಕೋಟಿ ಖರ್ಚು ಮಾಡು ತ್ತೀರಲ್ಲ, ಇದು ವ್ಯರ್ಥ. ಇಷ್ಟು ಕೋಟಿ ಹಣ ಖರ್ಚು ಮಾಡುತ್ತಿರಲ್ಲ. ಇದರ ಉಪಯೋಗ ಜನಗಳಿಗೆ ಸಿಕ್ಕಬೇಕು. ಟೌನ್ ಪರಿಸ್ಥಿತಿ ಸ್ವಲ್ಪ ಉತ್ತಮ ಏಕೆಂದರೆ, ಅಧಿಕಾರಿಗಳು ಇರುತ್ತಾರೆ. ಆಗಾಗ್ಗೆ ಹೋಗಿ ನೋಡುತ್ತಾರೆ ಟೌನ್‌ನಲ್ಲಿ ಎಜುಕೇಷನ್ ಸ್ಟ್ಯಾಂಡರ್ಡ್ ಸ್ವಲ್ಪ ಉತ್ತಮವಾಗಿದೆ. ಟೌನ್‌ನಲ್ಲಿ ಯಾವ ಸ್ಟ್ಯಾಂಡರ್ಡ್ ಇದೆಯೋ ಕೊನೇ ಪಕ್ಷ ಅದರಲ್ಲಿ ಅರ್ಧದಷ್ಟಾದರೂ ಗ್ರಾಮಾಂತರ ಪ್ರದೇಶದಲ್ಲಿ ಇರಬೇಕು. ದೇಶದ ರೈತ, ಬಡ ಜನರು ಇಲಾಖೆಗೆ ಕೊಟ್ಟಂಥ, ದುಡ್ಡು ಸಾರ್ಥಕವಾಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಜೆಟ್ ಮೇಲೆ ಭಾಷಣ ಮಾಡುವಾಗ, ಪ್ರೈಮರಿ ಎಜುಕೇಷನ್ ಸಿಸ್ಟಂ ಎಲ್ಲಾ ವಿಧದಲ್ಲೂ, ಎಲ್ಲಾ ಭಾಗದಲ್ಲೂ ಮಾಡಬೇಕು ಎಂದು ಹೇಳಿದೆ. ನೂರಕ್ಕೆ ೮೦ ಭಾಗ ರೈತರು ಇದ್ದಾರೆ, ವ್ಯವಸಾಯದ ಕಾರ್ಮಿಕರು ಇದ್ದಾರೆ. ಇವರು ಬೆಳಿಗ್ಗೆ ೬–೭ ಗಂಟೆಗೆ ತಿಂಡಿ ಮಾಡಿಕೊಟ್ಟು ಕೆಲಸಕ್ಕೆ ಹೋಗುತ್ತಾರೆ. ಪುನಹ ಸಂಜೆ ೬–೭ ಗಂಟೆಗೆ ವಾಪಸ್ ಬರುತ್ತಾರೆ. ಈ ಮಧ್ಯೆ ಅವರ ಮಕ್ಕಳು ಕೈಗೆ ಬಟ್ಟೆ ಹಾಕಿಕೊಂಡು, ಮಣ್ಣಿನ ಜೊತೆಯಲ್ಲಿ ಆಟವಾಡಿ ಕೊಂಡು, ಕೇಳಬಾರದ ಅವಾಚ್ಯ ಶಬ್ದಗಳನ್ನು ಕಲಿತುಕೊಂಡು ಹೀನಾವಸ್ಥೆಯಲ್ಲಿರುವುದನ್ನು ನೋಡಿದರೆ, ನಿಜವಾಗಿಯೂ ದುಃಖವಾಗುತ್ತದೆ. ೩–೪ ವರ್ಷದ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಇಲ್ಲ. ಪ್ರಿಪ್ರೈಮರಿ ಎಜುಕೇಷನ್‌ನ್ನು ಎಲ್ಲಾ ಹಳ್ಳಿಗಳಲ್ಲೂ ಮಾಡಬೇಕು. ಕೊನೇ ಪಕ್ಷ ಎಲ್ಲಿ ಪ್ರೈಮರಿ ಎಜುಕೇಷನ್ ಇರುತ್ತದೋ ಅಲ್ಲಾದರೂ ಮಾಡುವುದರಿಂದ, ಮಕ್ಕಳು ಮಣ್ಣಿನಲ್ಲಿ ಆಟವಾಡುವ ಬದಲಿಗೆ ಶಾಲೆಗಳಲ್ಲಿ ಸಣ್ಣಪುಟ್ಟ ಪಾಠಗಳನ್ನು ಕಲಿತುಕೊಂಡು, ಶುಚಿತ್ವದ ಬಗ್ಗೆ ಡಿಸಿಪ್ಲಿನ್ ಬಗ್ಗೆ ಕಲಿತುಕೊಳ್ಳು ವುದಕ್ಕೆ ಅವಕಾಶವಾಗುತ್ತದೆ. ಹೆಚ್ಚು ಕಡಿಮೆಯಾದರೆ ನೋಡಿಕೊಳ್ಳುವುದಕ್ಕೆ ಉಪಾಧ್ಯಾಯರು ಇರುತ್ತಾರೆ. ಮಧ್ಯಾಹ್ನದ ಹೊತ್ತು ಕೇರ್ ಸಂಸ್ಥೆಯಿಂದ ತಿಂಡಿ ಕೊಡುತ್ತಾರೆ ಮಕ್ಕಳು ನೆಮ್ಮದಿಯಾ ಗಿರುತ್ತವೆ. ಈ ರೀತಿ ಮಾಡುವುದರಿಂದ, ಒಳ್ಳೆಯ ವಾತಾವರಣದ ದೆಸೆಯಿಂದ ಹಳ್ಳಿ ಮಕ್ಕಳೂ ಕೂಡ ಟೌನ್ ಮಕ್ಕಳ ಹಾಗೆ ಒಳ್ಳೆಯ ಮಾತನ್ನು ಡಿಸಿಪ್ಲಿನ್‌ನ್ನು ಕಲಿತುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಚಿಂತೆಯಿಲ್ಲ, ಕೊನೇಪಕ್ಷ ಗ್ರಾಮಾಂತರ ಪ್ರದೇಶ ಗಳಲ್ಲಿ ಬಾಲವಾಡಿಗಳನ್ನು ಸ್ಥಾಪನೆ ಮಾಡುವುದಕ್ಕೆ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪ್ರೈಮರಿ ವಿದ್ಯಾಭ್ಯಾಸ ಇಷ್ಟೊಂದು ಕೆಳಮಟ್ಟಕ್ಕೆ ಹೋಗಿರುವುದಕ್ಕೆ ಕಾರಣವೇನೆಂದರೆ, ಉಪಾಧ್ಯಾಯರುಗಳು ಸರಿಯಾಗಿ ಪಾಠಶಾಲೆಗಳಿಗೆ ಹೋಗುವುದಿಲ್ಲ. ಇದಕ್ಕೆ ಮೇಲ್ಪಟ್ಟ ಚೆಕಿಂಗ್ ಮಾಡುವ ಇನ್‌ಸ್ಪೆಕ್ಟರುಗಳ ಅದಕ್ಷತೆಯೇ ಕಾರಣ ಹಿಂದೆ ಒಂದು ತಾಲ್ಲೂಕಿಗೆ ಒಬ್ಬರು ಚೆಕ್ಕಿಂಗ್ ಇನ್‌ಸ್ಪೆಕ್ಟರ್ ಇರುತ್ತಿದ್ದರು. ಆ ಇನ್‌ಸ್ಪೆಕ್ಟರು ಯಾವಾಗ ಬರುತ್ತಾರೋ, ಏನು ಹೇಳುತ್ತಾರೋ, ಏನು ತೊಂದರೆ ಕೊಡುತ್ತಾರೋ ಎಂದು ಉಪಾಧ್ಯಾಯರು ಭಯಬೀತರಾಗಿ ಹೆದರುತ್ತಿದ್ದರು. ಈಗ ಬೇಕಾದಷ್ಟು ಜನ ಇನ್‌ಸ್ಪೆಕ್ಟರುಗಳು ಇದ್ದಾರೆ ಈ ಇನ್‌ಸ್ಪೆಕ್ಟರುಗಳು ಮತ್ತು ಮೇಷ್ಟರು ಇಬ್ಬರೂ ಸೇರಿ ಬೀಡಿ ಸೇದುವುದನ್ನು ನಾನು ನೋಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಇದನ್ನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ಉಪಧ್ಯಾಯರಲ್ಲಿ ಆ ಒಂದು ಭಯಬೀತಿ ಏನೂ ಇಲ್ಲ, ಇನ್‌ಸ್ಪೆಕ್ಟರ್ ಇಂತಹ ತಾರೀಖು ಬರುತ್ತಾರೆ ಅಂದರೆ ಬೆಣ್ಣೆ, ತೆಂಗಿನ ಕಾಯಿ ಎಲ್ಲಾ ರೆಡಿಯಾಗಿರುತ್ತದೆ ಅವರಿಗೆ ಏನು ಬೇಕೋ ಅದೆಲ್ಲಾ ಇರುತ್ತದೆ ಇನ್‌ಸ್ಪೆಕ್ಟರ್‌ಗಳಲ್ಲಿ ೫–೬ ಪರ್ಸೆಂಟ್ ಒಳ್ಳೆಯವರು ಇರಬಹುದು. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳುವುದಿಲ್ಲ. ಇಂತಹ ಅವ್ಯವಹಾರವನ್ನು ಇಟ್ಟು ಕೊಂಡಿರುತ್ತಾರೆ, ಇನ್‌ಸ್ಪೆಕ್ಟರ್ ಬಂದರೆ ಬರುತ್ತಾರೆ ಎಲ್ಲಾ ಸರಿ ಮಾಡುತ್ತಾರೆ ಎನ್ನುವ ಭಾವನೆ ಮೇಷ್ಟರುಗಳಲ್ಲಿ ಇರುತ್ತದೆ. ನಾನು ಸಲಹೆ ಮಾಡುವುದು ಏನೆಂದರೆ, ಇನ್‌ಸ್ಪೆಕ್ಟರ್, ಡೆಪ್ಯುಟಿ ಇನ್‌ಸ್ಪೆ ಕ್ಟರ್ ಎಂದು ಒಂದು ಸಮೂಹವನ್ನೆ ಏನು ಮಾಡಿದ್ದೀರಿ, ಅವರು ಕೊನೇ ಪಕ್ಷ ಇಷ್ಟು ದಿವಸಕ್ಕೆ ಎಂದು ಅನಿರೀಕ್ಷಿತವಾಗಿ ಶಾಲೆಗಳನ್ನು ಚೆಕ್ ಮಾಡಬೇಕು. ಅನಿರೀಕ್ಷಿತವಾಗಿ ಹೋಗಬೇಕು. ೮ ಗಂಟೆಗೆ ಸ್ಕೂಲು

ಇರುತ್ತದೆ ಎಂದರೆ 7¾ಗೆ ಹೋದರೆ ಮೇಷ್ಟರುಗಳು ಸಿಕ್ಕುತ್ತಾರೆ, ೧೧ ಗಂಟೆಗೆ ಹೋದರೆ ಎಲ್ಲಿ ಸಿಗುತ್ತಾರೆ. ಲೆಕ್ಕ ಪತ್ರಗಳನ್ನು ಚೆಕ್ ಮಾಡುತ್ತಾರೆ, ಮಾಡಿಕೊಳ್ಳಲಿ. ಲೆಕ್ಕ ಪತ್ರಗಳನ್ನು ಚೆಕ್ ಮಾಡುವುದರ ಜೊತೆಗೆ ಮಕ್ಕಳ ಸ್ಟಾಂಡರ್ಡ್ ಎಷ್ಟರಮಟ್ಟಿಗೆ ಇದೆ ಎನ್ನುವುದಕ್ಕೆ ಮಕ್ಕಳನ್ನು ಪ್ರಶ್ನೆ ಕೇಳಿ ಅವರು ಏನು ಮಾಡುತ್ತಾರೆ, ನೋಟ್ಸ್ ಪ್ರಿಪೇರ್ ಮಾಡುತ್ತಾರೆಯೋ, ಯಾವ ಯಾವ ದಿವಸ ಯಾವ ಯಾವ ಪಾಠವನ್ನು ಮಾಡಿದ್ದಾರೆ ಎನ್ನುವುದನ್ನು ನೋಡಿ, ಯೋಗ್ಯರಾದರೆ ಪ್ರೋತ್ಸಾಹ ಕೊಡಿ. ಇಲ್ಲದೇ ಹೋದರೆ ಅಂತಹ ಮೇಷ್ಟರುಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ದಯುವಿಟ್ಟು ಆದೇಶವನ್ನು ಕೊಡಬೇಕು. ಇನ್‌ಸ್ಪೆಕ್ಟರುಗಳು ಇನ್‌ಸ್ಪೆಕ್ಷನ್ ಪ್ರೋಗ್ರಾಂ ಕೊಟ್ಟು, ಬೆಣ್ಣೆ, ತೆಂಗಿನಕಾಯಿಗಳಿಗೆ ಹೇಳಿಕಳಿಸಿ ಹೋಗುತ್ತಾರಲ್ಲ ಅದಕ್ಕೆ ಅವಕಾಶ ಕೊಡಬೇಡಿ. ಅನಿರೀಕ್ಷಿತವಾಗಿ ಇನ್‌ಸ್ಪೆಕ್ಷನ್‌ಗೆ ಹೋಗುವ ಹಾಗೆ ವ್ಯವಸ್ಥೆ ಮಾಡಬೇಕು.

ಇನ್ನು ಕೇರ್ ಫುಡ್ ವಿಚಾರ ತೆಗೆದುಕೊಂಡರೆ ಕೇರ್ ಫುಡ್‌ನ್ನು ಯಾವುದೋ ೯೦೦೦ ಮೈಲಿಯಿಂದ ಬಡ ಮಕ್ಕಳಿಗಾಗಿ ಕಳಿಸುತ್ತಾರೆ. ಯಾವುದೋ ದೇಶದ ರೈತರು, ಹೊಟ್ಟೆ ಉರಿದುಕೊಂಡು ಕೊಟ್ಟಂಥ ಫುಡ್‌ನ್ನು, ಸರ್ಕಾರಿ ನೌಕರರು, ನೂರಾರು ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳ ತಕ್ಕವರು ಮಕ್ಕಳಿಗೆ ದ್ರೋಹ ಮಾಡಿ ಬ್ಲಾಕ್‌ಮಾರ್ಕೆಟ್ ಮಾಡಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದರ ಬಗ್ಗೆ ಅರ್ಜಿ ಕೊಟ್ಟರೆ, ಅವನು, ಇವನು ಎಂದು ಬಿಡಿಸುತ್ತಾರೆ. ಇದಕ್ಕಿಂತಲೂ ಘೋರವಾದ ಅಪರಾಧ ಬೇರೆ ಇಲ್ಲ, ನಾವು ತಿಳಿದುಕೊಂಡಿರುವ ನರಕ ಏನು ಇದೆ, ಇದರಲ್ಲಿ ಅವರಿಗೆ ಜಾಗವಿಲ್ಲ, ಇವರಿಗಾಗಿ ಒಂದು ಸ್ಪೆಷಲ್ ನರಕವನ್ನು ಸೃಷ್ಟಿಮಾಡಬೇಕು ಎಂದು ಹೇಳಿದರೆ ತಪ್ಪಾಗಲಾರದು. ಬಡವರ ಮಕ್ಕಳಿಗೆ, ಅಸಹಾಯಕರ ಮಕ್ಕಳಿಗಾಗಿ ೯೦೦೦ ಮೈಲಿಯಿಂದ ಬರತಕ್ಕ ಫುಡ್‌ನ್ನು ಮಾರಿಕೊಳ್ಳತಕ್ಕ ಉಪಾಧ್ಯಾಯರುಗಳು ನಿಮ್ಮ ಇಲಾಖೆಯಲ್ಲಿ ಇದ್ದಾರೆ. ಇವರಿಗೆ ಸಪೋರ್ಟ್ ಮಾಡುವಂಥ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಒಂದು ಇನ್‌ಸ್ಟನ್ಸ್‌ನಲ್ಲಿ ಕೆಲವು ಜನ ಸೇರಿ ಸಾವಿರಾರು ರೂಪಾಯಿಗಳನ್ನು ಹೊಡೆದುಕೊಂಡು ಹಂಚಿಕೊಂಡರು. ಒಬ್ಬ ಸ್ಕೂಲ್ ಇನ್‌ಸ್ಪೆಕ್ಟರ್ ಇಲ್ಲೋ ಮನೆ ಕೊಂಡುಕೊಂಡ. ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಇನ್‌ಸ್ಪೆಕ್ಟರ್ ಮನೆಗೆ ಹೋಗಿ, ನಿನಗೆ ಎಷ್ಟು ಮಕ್ಕಳು ಎಂದರೆ ೫-೬ ಮಕ್ಕಳು ಎಂದ, ಇಷ್ಟು ಬಡ ಮಕ್ಕಳ ಹೊಟ್ಟೆ ಉರಿಸಿದ್ದೀಯಾ, ಇದರ ಫಲವಾಗಿ ನೀವು ಪಾಪಕ್ಕೆ ಒಳಗಾಗಿ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಹೇಳಿದೆ. ಆಗ ನೀವು ಇರಲಿಲ್ಲ. ಅವರಲ್ಲಿ ಕೊನೆಪಕ್ಷ ಪಾಪ-ಪುಣ್ಯಗಳ ಬಗ್ಗೆ ಭೀತಿಯಾದರೂ ಬರಲಿ ಎಂದು ಬೈದ್ದೆ ಅವನು ತುಮಕೂರಿನಲ್ಲೋ ಎಲ್ಲೋ ಮನೆ ಕಟ್ಟಿಕೊಂಡಿರಬಹುದು. ಇಂತಹವರಿಗೆ ಅವಕಾಶಕೊಟ್ಟು ಮಾಡುವುದಾದರೆ, ನೀವು ಮಂತ್ರಿಗಳಾಗಿ ಏನೂ ಪ್ರಯೋಜನವಿಲ್ಲ ಇದು ಅಕ್ಷಮ್ಯ ಅಪರಾಧ. ಇದನ್ನು ಸರಿಪಡಿಸುವುದಕ್ಕೆ ನೀವು ಇದ್ದು ಸರಿಪಡಿಸಿ. ಇಂತಹ ಅಧಿಕಾರಿಗಳು ಯಾರು ಇದ್ದಾರೆ ಅವರನ್ನು ಮನೆಗೆ ಕಳಿಸಿ. ೯೦೦೦ ಮೈಲಿಯಿಂದ ಯಾವ ಕೇರ್‌ಫುಡ್ ಬಡ ಮಕ್ಕಳಿಗಾಗಿ ಬರುತ್ತದೆ ಅದನ್ನು ಬೇರೆಯಾವುದಾದರೂ ದೇಶಕ್ಕೆ ಕಳಿಸಿ.

3-30 P.M.

ಇದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಪ್ರೈಮರಿ ಎಜುಕೇಷನ್ ಅನ್ನು ಇಂಪ್ರೂವ್ ಮಾಡುವುದರ ಬಗ್ಗೆ ಕೆಲವು ಸಲಹೆಗಳನ್ನು ಮಾನ್ಯಸಚಿವರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಖಾಸಗಿ ಶಾಲೆಗಳವರು ಯಾವುದಾದರೂ ಒಂದು ರೆಸಲ್ಯೂಷನ್ ಕಳುಹಿಸಿದರೆ ಅದನ್ನು ಸೂಕ್ತ ಕ್ರಮತೆಗೆದುಕೊಂಡು ತಕ್ಷಣ ನೋಡುವುದಿಲ್ಲ. ಇದರ ಬಗ್ಗೆಯಾವುದಾದರೂ ಒಂದು ಕಂಪ್ಲೇಂಟ ಬಂದರೆ, ಇಲಾಖೆಯವರು ತಕ್ಷಣ ನೋಡುವುದಿಲ್ಲ. ಕಂಪ್ಲೇಂಟ್ ಬಂದವರಿಗೆ, ನಿಮ್ಮ ಮೇಲೆ ಒಂದು ಮೂಕ ಅರ್ಜಿ ಬಂದಿದೆ ಎಂದು ಅವರಿಗೆ ಹೇಳಿ ಕಳುಹಿಸಿಬಿಡುತ್ತಾರೆ. ಅನಂತರ ನಡೆದಂಥ ಪಾಪವನ್ನು ಇಬ್ಬರೂ ಹಂಚಿಕೊಳ್ಳುತ್ತಾರೆ. ಕೆಳಮಟ್ಟದ ಅಧಿಕಾರಿಗಳಿಗೆ ಇಂಥಾದ್ದಕ್ಕೆ ಅವಕಾಶ ಕೊಡಬೇಡಿ. ನೀತಿ ನಿಯಮಗಳನ್ನು ಮಕ್ಕಳಿಗೆ ಬೋಧನೆ ಮಾಡಿ, ಮಕ್ಕಳನ್ನು ಭಾರಿ ಸತ್ಪ್ರಜೆಗಳನ್ನಾಗಿ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ಉಪಾಧ್ಯಾಯರುಗಳು ಇಂಥ ಅವ್ಯವಹಾರಗಳಲ್ಲಿ ತೊಡಗಿದ್ದರೆ, ಇವರ ಮುಖಾಂತರ ಪಾಠವನ್ನು ಹೇಳಿಸಿಕೊಂಡು ಮಕ್ಕಳು ಯಾವ ಪ್ರಪಾತಕ್ಕೆ ಇಳಿಯುತ್ತಾರೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಆದ್ದರಿಂದ ನಾನು ಇಲ್ಲಿ ಒಂದು ಸಲಹೆಯನ್ನು ಕೊಡಲು ಇಷ್ಟಪಡುತ್ತೇನೆ. ಪ್ರೈಮರಿ ಎಜುಕೇಷನ್‌ಗೆ ಸಾಧ್ಯವಾದಮಟ್ಟಿಗೂ ಹೆಣ್ಣು ಮಕ್ಕಳನ್ನು ನೇಮ

ಸುವುದು ಉತ್ತಮ. ಏಕೆಂದರೆ ಅವರ ವ್ಯವಹಾರಗಳು ಇವರಿಗಿಂತ ಬಹಳ ಕಡಿಮೆ ಇರುತ್ತವೆ. ಇವರು ಎಲ್ಲಾ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ನೋಡಿಕೊಂಡು ಸರಿಯಾದ ದಾರಿಯನ್ನು ಎಲ್ಲ ಮಕ್ಕಳಿಗೂ ತೋರಿಸುತ್ತಾರೆ. ಇದು ಅವರಲ್ಲಿ ಬಂದಿರತಕ್ಕ ದೈವದತ್ತವಾದ ಗುಣ. ಸಾಮಾನ್ಯವಾಗಿ ಇದು ಎಲ್ಲಾ ಹೆಣ್ಣು ಮಕ್ಕಳಲ್ಲಿಯೂ ಇರುತ್ತದೆ. ಇವರನ್ನು ಕೊನೆಯಪಕ್ಷ ಹೆಚ್ಚಿನ ಸಂಖ್ಯೆಯಲ್ಲಿ ಪ್ರೈಮರಿ ಶಾಲೆಗಳಿಗೆ ಹಾಕಿದರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಹೆಂಗಸರೇ ಇರತಕ್ಕ ಕೆಲವು ಪ್ರಾಥಮಿಕ ಶಾಲೆಗಳನ್ನು ಮಾನ್ಯ ಸಚಿವರು ನೋಡಿದರೆ ಗೊತ್ತಾಗುತ್ತದೆ. ಅವರು ಕೆಲಸ ಮಾಡತಕ್ಕ ಶಾಲೆಗಳಲ್ಲಿ ಪಾಠಪ್ರವಚನೆಗಳು ಚನ್ನಾಗಿ ನಡೆಯುತ್ತವೆ. ಅವರು ಯಾವತರಹದ ಡಿಸ್ಕ್ರಿಮಿನೇಷನ್ ಕೂಡ ಮಾಡುವುದಕ್ಕಾಗುವುದಿಲ್ಲ. ಗಂಡಸರೆನ್ನೆಲ್ಲಾ ಗುಮಾಸ್ತೆ ಕೆಲಸಕ್ಕೆ ಅಥವಾ ಇನ್ನ್ಯಾವ ಇಲಾಖೆಗೋ ಕಳುಹಿಸಿದರೆ ಉತ್ತಮ. ಬೇರೆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಶಕ್ತಿ ಗಂಡಸರಿಗೆ ಇದೆ. ಟೈಪಿಸ್ಟ್ ಕೆಲಸಕ್ಕೆ, ಹಾಗೂ ಗುಮಾಸ್ತರ ಕೆಲಸಕ್ಕೆ ಗಂಡಸರನ್ನು ಹಾಕಿ ಪ್ರೈಮರಿ ಎಜುಕೇಷನ್‌ಗೆ ಮಾತ್ರ ಹೆಣ್ಣು ಮಕ್ಕಳನ್ನು ನೇಮಿಸುವುದು ಬಹಳ ಒಳ್ಳೆಯದೇ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಳ್ಳಿಗಳ ಕಡೆ ಮನೆಗಳನ್ನು ಕಟ್ಟಿಸಿದರೆ, ಹೆಣ್ಣು ಮಕ್ಕಳೂ ಅಲ್ಲಿಗೂ ಹೋಗುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದಿನ ಕಾಲದಲ್ಲಿ ಒಬ್ಬ ಮಾಸ್ತರು ಹಳ್ಳಿಗೆ ಬಂದರೆ ದೇವರೇ ಬಂದರು ಎಂದು ಕಾಣುತ್ತಿದ್ದರು. ಅಷ್ಟೊಂದು ಗೌರವ ಕೊಡುತ್ತಿದ್ದರು. ಅವರ ಎಲ್ಲಾ ಕಷ್ಟಸುಖಗಳಲ್ಲಿಯೂ ಹಳ್ಳಿಯವರು ಭಾಗಿಯಾಗುತ್ತಿದ್ದರು. ಈಗಲೂ ನಾವು ನಮ್ಮ ಉಪಾಧ್ಯಾಯರನ್ನು ನೆನಸಿಕೊಂಡರೆ ಅಂಥ ಭಾವನೆ ಬರುತ್ತದೆ. ಅಷ್ಟೊಂದು ಪೂಜ್ಯ ಭಾವನೆ ನಮ್ಮಲ್ಲಿತ್ತು.

ಸೆಕೆಂಡರಿ ಎಜುಕೇಷನ್ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ನಗರ ಪ್ರದೇಶಗಳಲ್ಲಿ ಹೈಸ್ಕೂಲುಗಳನ್ನು ಪ್ರಾರಂಭಮಾಡುವುದಕ್ಕೆ ಪ್ರಪೋಸಲ್ಸ್ ಬಂದರೆ, ತಕ್ಷಣ ಅಲ್ಲಿಗೆ ಹೈಸ್ಕೂಲು ಕೊಡುತ್ತಿದ್ದಾರೆ. ಅದೇಹಳ್ಳಿಯವರು ನಾಲ್ಕಾರು ಕಡೆಗಳಿಂದ ಸೇರಿಕೊಂಡು ಒಂದು ಹೈಸ್ಕೂಲು ಮಾಡಬೇಕು ಎಂದು ಪ್ರಪೋಸಲ್‌ನ್ನು ಸರ್ಕಾರಕ್ಕೆ ಕಳುಹಿಸಿದರೆ, ಸರ್ಕಾರದವರ ಅವರಿಗೆ ಐದು ವರ್ಷದವರೆಗೆ ನೀವೇ ಹೈಸ್ಕೂಲನ್ನು ನಡೆಸಿಕೊಂಡುಹೋಗಬೇಕುಎಂದು ಹೇಳುತ್ತಾರೆ. ಇದುಯಾವ ಧರ್ಮ? ಹಳ್ಳಿಯವರಉದ್ಧಾರ, ಹಳ್ಳಿಯಮಕ್ಕಳವಿದ್ಯಾಭ್ಯಾಸ ಹೇಗೆಆಗಬೇಕು? ಇಂಥ ಒಂದುತಮ್ಮ ಆರ್ಡರ್ ಅನ್ನು ತಕ್ಷಣ ಕ್ಯಾನ್ಸಲ್ ಮಾಡಿ ಬೆಂಗಳೂರು ಸುತ್ತ ಮುತ್ತ ಬಂದಿರತಕ್ಕ ಪ್ರಪೋಸಲ್ಸ್‌ಗಳಿಗೆ ಆದ್ಯತೆ ಕೊಡದೆ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸ ದೊರಕುವಂತೆ ಮಾಡಬೇಕು ಮತ್ತು ಈಗ ಇರತಕ್ಕಂಥ ಆರ್ಡರ್ ಅನ್ನು ತೆಗೆಯಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ರೆಸಿಡೆನ್ಶಿಯಲ್ ಹೈಸ್ಕೂಲು ಮಾಡಿದರೆ ಒಳ್ಳೆಯದು. ಅಂಥ ಕಡೆ 8-10 ಎಕರೆ ಜಮೀನು ಇರಬೇಕು, ಅಲ್ಲಿ ರೇಷ್ಮೆ ಕೈಗಾರಿಕೆಗೆ, ಪಶುಸಂಗೋಪನೆ, ಇಂಥ ಒಂದು ಪಾಠಪ್ರವಚನೆಗಳು ನಡೆದರೆ ವಿದ್ಯಾರ್ಥಿಯು ತನ್ನ ವ್ಯಾಸಂಗ ಮುಗಿದ ತಕ್ಷಣ ತನ್ನ ಜೀವನವನ್ನು ತಾನು ಸುಲಭವಾಗಿಮಾಡಿಕೊಳ್ಳಬಹುದು. ಇದು ಅವರ ಸ್ವಾವಲಂಬನೆಗೆ ನಾಂದಿಯಾಗುತ್ತದೆ. ಇಂಥ ಒಂದು ಟೆಂಡೆನ್ಸಿ ವಿದ್ಯಾರ್ಥಿಗಳಲ್ಲಿ ಡೆವಲಪ್ ಆಗುವಂಥ ವಿದ್ಯಾಭ್ಯಾಸವನ್ನು ನಾವು ವಿದ್ಯಾರ್ಥಿಗಳಿಗೆ ಕೊಡಬೇಕು. ಅವರು ವಿದ್ಯಾರ್ಥಿಜೀವನದಲ್ಲಿ ಕಲಿತಿದ್ದುದನ್ನು ಜೀವನದಲ್ಲಿಯೇ ನೆನಸಿಕೊಂಡು ಹೋಗುವಂಥ ಏರ್ಪಾಡನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಕೇರ್ ಫುಡ್ ವಿಷಯವಾಗಿ ಎರಡು ಮಾತನ್ನು ಹೇಳುತ್ತೇನೆ. ಇದನ್ನು ಮಿಡಲ್ ಸ್ಕೂಲು ಮಕ್ಕಳಿಗೂ ಕೊಡುವುದು ಉತ್ತಮ. ಹಳ್ಳಿಯಲ್ಲಿ ರೈತರು ತಮ್ಮ ಮಕ್ಕಳಿಗೆ ಬೆಳಿಗ್ಗೆ ಏನನ್ನಾದರೂ ತಿನ್ನುವುದಕ್ಕೆ ಕೊಟ್ಟು ಸಾಯಂಕಾಲದವರೆಗೆ ಮನೆಗೆ ಬರದೆ ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದ ಮಧ್ಯಾಹ್ನದ ಸಮಯದಲ್ಲಿ ಹಳ್ಳಿಯ ಮಕ್ಕಳಿಗೆ ಕೇರ್ ಫುಡ್ ಕೊಡುವುದು ಬಹಳ ಒಳ್ಳೆಯದು. ಇದನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ವಿತರಣೆ ಮಾಡಬೇಕು. ಅನೇಕ ಮೆಷಿನರಿ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಪೂರ್ತಿ ಸಂಬಳ ಕೊಡುತ್ತಿಲ್ಲ. ಸರ್ಕಾರದ ಶಾಲೆಗಳಲ್ಲಿ ಪೂರ್ತಿ ಸಂಬಳ ಕೊಡುತ್ತಾರೆ. ಆದರೂ ಅಲ್ಲಿ ಎಷ್ಟರಮಟ್ಟಿಗೆ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆ ಎನ್ನುವುದನ್ನು ತಾವು ಗಮನಿಸಬೇಕು. ಅಲ್ಲಿರತಕ್ಕ ಉಪಾಧ್ಯಾಯ

ರುಗಳಲ್ಲಿ ಕಾರ್ಯದಕ್ಷತೆ, ವಿದ್ಯಾರ್ಥಿಗಳ ಮೇಲೆ ಮಮತೆ, ಅನುಕಂಪ ಮಕ್ಕಳಿಗೆ ದೇಶಾಭಿವೃದ್ಧಿಯ ಒಂದು ಒಳ್ಳೆಯ ಗುಣವನ್ನು ಅವರು ಹಾಕುತ್ತಿದ್ದ ಹೊಕ್ಕಾಗುವಂತೆ ಮಾಡುತ್ತಾರೆ. ಸರ್ಕಾರದವರು ಇಂಥ ಉಪಾಧ್ಯಾಯರುಗಳಿಗೆ ತಕ್ಕ ಉತ್ತೇಜನ ಕೊಡಬೇಕು ಮತ್ತು ರೆಸಿಡೆನ್ಸಿಯಲ್ ಹೈಸ್ಕೂಲುಗಳನ್ನು ಮಾತ್ರ ಹಳ್ಳಿಗಳಲ್ಲಿ ಸರಿಯಾದ ಸ್ಥಳಗಳನ್ನು ನೋಡಿ ಮಾಡಬೇಕು ಎಂದು ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಸೂಚಿಸಬಯಸುತ್ತೇನೆ. ನಿಮ್ಮ ಇಲಾಖೆಯವರು ಇನ್‌ಸ್ಪೆಕ್ಷನ್ ಹೋದಾಗ ಪಕ್ಕದಲ್ಲಿರತಕ್ಕ ರೆಸಿಡೆನ್ಸಿಯಲ್ ಸ್ಕೂಲುಗಳ ಮಾದರಿ ನಮ್ಮ ಸ್ಕೂಲುಗಳು ಕೆಲಸ ಮಾಡುವಂತೆ ಏಕೆ ಹೇಳಬಾರದು ? ಈ ರೀತಿಯ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ ಮಕ್ಕಳಿಗೆ ಒಂದು ಸ್ಟಾಂಡರ್ಡ್ ವಿದ್ಯಾಭ್ಯಾಸವನ್ನು ಕಲಿಯತಕ್ಕ ಅವಕಾಶ ಸಿಕ್ಕುತ್ತದೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಾಯರು ಯಾವ ತಪ್ಪು ಮಾಡುತ್ತಾರೋ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕು ಅಂಥವರನ್ನು ತಕ್ಷಣ ರೆಕಗ್ನೈಸ್ ಮಾಡಿ ಒಳ್ಳೆಯವರಿಗೆ ಕಿರುಕುಳ ಕೊಡದೆ ಆದಳಿತ ನಡೆಸಬೇಕು ಎಂದು ನಾನು ಹೇಳುತ್ತೇನೆ. ಕೆಲವು ಸಂದರ್ಭದಲ್ಲಿ ಒಳ್ಳೆಯ ಉಪಾಧ್ಯಾಯರವರಿಗೆ ಫುಟ್‌ಬಾಲ್ ಒದೆಸಿದ ಹಾಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗ ಮಾಡುತ್ತಿರುತ್ತೀರಿ. ನಾನು ಮೊದಲೇ ಹೇಳಿದ ಹಾಗೆ ದೇಹ ಶ್ರಮ, ಅದಕ್ಕೆ ಗಣನೀಯ ಆಳತೆಕೋಲು ಆಗಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ, ವ್ಯವಸಾಯಕ್ಕೆ ಸಂಬಂಧಪಟ್ಟಂತೆ ವಿದ್ಯಾಭ್ಯಾಸದ ಪದ್ಧತಿಯನ್ನು ಅಳವಡಿಸಿ ಎಲ್ಲಾ ವಿಧದಲ್ಲಿಯೂ ವಿದ್ಯಾರ್ಥಿ ತನ್ನ ಜೀವನವನ್ನು ಸರಿಯಾದ ರೀತಿಯಲ್ಲಿ ನಡೆಸುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವಂಥ ವಿದ್ಯಾಭ್ಯಾಸವನ್ನು ಕೊಟ್ಟು ಮಾರ್ಗದರ್ಶನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ತಾವು 1968-69 ರಲ್ಲಿ ತಾಲ್ಲೂಕು ಬೋರ್ಡ್ ಹೈಸ್ಕೂಲ್‌ಗಳನ್ನು ಸರ್ಕಾರಕ್ಕೆ ತೆಗೆದುಕೊಂಡಿರಿ. ಆದರೆ ಇವತ್ತು ಅವುಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಕೆಲವು ಹೈಸ್ಕೂಲ್‌ಗಳಲ್ಲಿ ಕೆಲವು ಪೋಸ್ಟ್‌ಗಳು ಖಾಲಿ ಇದ್ದರೂ ಕೂಡ ತಾವು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಇದರಿಂದಾಗಿ ಆ ಹೈಸ್ಕೂಲ್‌ಗಳಲ್ಲಿ ಸರಿಯಾಗಿ ಪಾಠಪ್ರವಚನಗಳು ಆಗದೇ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಫೇಲ್ ಆಗುವುದಕ್ಕೂ ಇದು ಒಂದು ಕಾರಣವಾಗಿದೆ. ಇದನ್ನು ಕೇಳಿದರೆ ತಾಲ್ಲೂಕು ಬೋರ್ಡ್‌ನವರು ಡಿ.ಪಿ.ಐ. ಅವರ ಮೇಲೆ ಹೇಳುವುದು, ಡಿ.ಪಿ.ಐ. ಅವರನ್ನು ಕೇಳಿದರೆ ಅವರು ಎಜುಕೇಷನ್ ಡಿಪಾರ್ಟ್‌ಮೆಂಟ್ ಮೇಲೆ ಹೇಳುವುದು ಈ ರೀತಿ ನಡೆಯುತ್ತಿದೆ.

ಸ್ವಾಮಿ, ಇನ್ನೊಂದು ವಿಷಯ. ಬೆಂಗಳೂರು ಯೂನಿವರ್ಸಿಟಿ ಬಿಲ್ಡಿಂಗ್ ವಿಷಯದಲ್ಲಿಯೂ ಕೂಡ ಬಹಳ ಅವ್ಯವಹಾರ ನಡೆದಿದೆ ಎಂದು ಅನೇಕ ಕಡೆಗಳಿಂದ ಕೇಳಿದ್ದೇನೆ. ಈ ಯೂನಿವರ್ಸಿಟಿ ಬಿಲ್ಡಿಂಗ್‌ನ್ನು ಕಟ್ಟುವುದಕ್ಕೆ ಪಿ.ಡಬ್ಲ್ಯೂ.ಡಿ. ಯವರು ಟೆಂಡರ್ ಕರೆಯದೆ ಯಾರಿಗೋ ಬೇಕಾದವರಿಗೆ ಕೊಟ್ಟಿದ್ದಾರೆ. ಇದು ಲಕ್ಷಾಂತರ ರೂಪಾಯಿಗಳ ಕೆಲಸ. ಇದರಲ್ಲಿ ತುಂಬಾ ಅವ್ಯವಹಾರವಾಗಿದೆ ಎಂದು ಕೇಳಿದ್ದೇನೆ. ತಾವು ದಯವಿಟ್ಟು ಇದನ್ನು ವೆರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಹೇಳಬೇಕೆಂದರೆ, ಆರ್ಟ್ಸ್ ಅಂಡ್ ಹ್ಯುಮ್ಯಾನಿಟೀಸ್ ಬ್ಲಾಕ್, ಇದನ್ನು ಎ.ಬಿ.ಸಿ. ಬ್ಲಾಕ್ ಎಂದೂ ಕರೆಯುತ್ತಾರೆ. ಈ ಬಿಲ್ಡಿಂಗ್‌ನ್ನು ಕಟ್ಟುವಾಗ ಅಂದರೆ 1968-69 ರಲ್ಲಿ ಟೆಂಡರ್‌ನ್ನೂ ಕರೆಯದೆ, ತಮಗೆ ಬೇಕಾದವರೊಂದಿಗೆ ನೆಗೋಷಿಯೇಟ್ ಮಾಡಿಕೊಂಡು ಎಸ್ಟಿಮೇಟ್‌ಗಿಂತ 40 ಪರ್ಸೆಂಟ್ ಎಕ್ಸೆಸ್‌ಗೆ ಕೊಟ್ಟಿದೆ. ಈ ಬಿಲ್ಡಿಂಗ್ ಕೆಲಸ ಕೂಡ 9 ಲಕ್ಷ 31 ಸಾವಿರ ರೂಪಾಯಿಗಳದ್ದು. ಇದರಲ್ಲಿ ಕೂಡ ಅವ್ಯವಹಾರವಾಗಿದೆ. ಇದನ್ನೂ ಕೂಡ ಎನ್‌ಕ್ವೈರಿ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು 'ಡಿ' ಬ್ಲಾಕ್. ಇದೂ ಕೂಡ 3 ಲಕ್ಷ 65 ಸಾವಿರ ರೂಪಾಯಿಗಳ ವ್ಯವಹಾರ. ಇದನ್ನೂ ಕೂಡ ಎಸ್.ಆರ್. ರೇಟ್‌ಗಿಂತ 40 ಪರ್ಸೆಂಟ್ ಎಕ್ಸೆಸ್‌ಗೆ ತಮಗೆ ಬೇಕಾದವರೊಡನೆ ನೆಗೋಷಿಯೇಟ್ ಮಾಡಿಕೊಂಡು ಕೊಟ್ಟಿದ್ದಾರೆ. ಇದನ್ನೂ ಕೂಡ ಎನ್‌ಕ್ವೈರಿ ಮಾಡಬೇಕು ಎಂದು ಹೇಳುತ್ತೇನೆ. ಇದೇರೀತಿ ಇನ್ನೊಂದು ಹೇಳಬೇಕೆಂದರೆ ಮೆನ್ಸ್ ಸ್ಟೂಡೆಂಟ್ಸ್ ಹಾಸ್ಟೆಲ್,

ಈ ಬಿಲ್ಡಿಂಗ್‌ನ್ನೂ ಕೂಡ 8 ಲಕ್ಷ 35 ಸಾವಿರ ರೂಪಾಯಿಗಳಿಗೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಈ ರೀತಿ ಕಾಂಟ್ರಾಕ್ಟ್ ಕೊಡುವಾಗ ಟೆಂಡರ್‌ನ್ನು ಕರೆದಿಲ್ಲ, ಡಿಪಾಸಿಟ್‌ನ್ನು ಕಟ್ಟಿಸಿಕೊಂಡಿಲ್ಲ, ಅಗ್ರಿಮೆಂಟ್‌ನ್ನು ಮಾಡಿಸಿಕೊಂಡಿಲ್ಲ; ಆ ಕಂಟ್ರಾಕ್ಟರ್ ಸುಮಾರು 1 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿಸಿದ್ದ ಎಂದು ಕಾಣುತ್ತದೆ, ಅಷ್ಟರಲ್ಲಿ ಸೆನೆಟ್‌ನಲ್ಲಿ ಗಲಾಟೆಯಾಗಿ ಅಷ್ಟಕ್ಕೇ ಕೆಲಸವನ್ನು ಬಿಟ್ಟ. ಅನಂತರ ಅವನಿಗೆ ಒಂದು ಫೈನಲ್ ಬಿಲ್ ಮಾಡಿ ಹಣವನ್ನು ವಾಪಸ್ಸು ಕೊಟ್ಟಿದ್ದಾರೆ. ಇದರಿಂದ ಸುಮಾರು 4 ಲಕ್ಷ ರೂಪಾಯಿ ಲಾಸ್ ಆಗಿದೆ. ಈ ರೀತಿ ಕೆಲಸಗಳನ್ನು ಕೊಡುವಾಗ ಟೆಂಡರ್ ಕರೆದು ಅದರಲ್ಲಿ ಲೋಯೆಸ್ಟ್ ರೇಟ್ ಕ್ವೋಟ್ ಮಾಡಿದವರಿಗೆ ಕೊಡಬೇಕು. ಇದ್ಯಾವುದನ್ನು ಅಬ್ಸರ್ವ್ ಮಾಡದೆ 40–50 ಪರ್ಸೆಂಟ್‌ಗಿಂತ ಹೆಚ್ಚಿಗೆ ರೇಟಿಗೆ ಕೊಟ್ಟಿದ್ದಾರೆ. ಅದೂ ಅಲ್ಲದೆ ಈ ಕೆಲಸವೂ ಕೂಡ ಲೋ ಕ್ವಾಲಿಟಿ ವರ್ಕ್ ಎಂದು ಕೇಳಿದ್ದೇನೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಫರ್ನಿಚರ್ ವಿಷಯದಲ್ಲಿ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಫರ್ನಿಚರ್‌ನ್ನು ಕೊಂಡುಕೊಳ್ಳುವಾಗ ಕೆಲವು ನಿಬಂಧನೆಗಳಿವೆ ಎಂದು ಕೇಳಿದ್ದೇನೆ. ಆದರೆ ಇಲ್ಲಿ 6 ಲಕ್ಷ ರೂಪಾಯಿಗಳ ಫರ್ನಿಚರ್‌ನ್ನು ಕೊಂಡುಕೊಳ್ಳುವಾಗ ತಮಗೆ ಬೇಕಾದವರೊಬ್ಬರಿಂದ ಇಬ್ಬರ ಹೆಸರಿನಲ್ಲಿ ಟೆಂಡರ್ ತೆಗೆದುಕೊಂಡು ಬಂದಿದ್ದಾರೆ. ಅದು ಟೀಕ್‌ವುಡ್ ಫರ್ನಿಚರ್ ಸಪ್ಲೈ ಮಾಡಬೇಕಾಗಿತ್ತು. ಆದರೆ ಅದು ಬೇರೆ ಮರದಿಂದ ಮಾಡಿದನ್ನು ಸಪ್ಲೈ ಮಾಡಿದ್ದಾರೆ. ಇದನ್ನು ಯಾರು ಸರ್ಟಿಫೈ ಮಾಡುತ್ತಾರೆ ಅವರಿಗೂ ಸಪ್ಲೈಯರ್‌ಗೂ ಸಂಬಂಧವಿದೆಯಂತೆ ಈಗ ಆ ಫರ್ನಿಚರ್‌ನಲ್ಲಿ ಅರ್ಧಕ್ಕೆ ಅರ್ಧ ಮುರಿದು ಹೋಗಿವೆ. ಎಂದು ಕೇಳಿದ್ದೇನೆ. ಇದರಲ್ಲಿ ಕೂಡ ಅವ್ಯವಹಾರ ನಡೆದಿರುವುದರಿಂದ ಇದನ್ನೂ ಕೂಡ ಎನ್‌ಕ್ವೈರಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೊನೆಯದಾಗಿ ಹೇಳಬೇಕೆಂದರೆ, 1972–73 ರಲ್ಲಿ ಕೆಲವು ಹೈಯರ್ ಸೆಕೆಂಡರಿ ಸ್ಕೂಲುಗಳನ್ನು ಜೂನಿಯರ್ ಕಾಲೇಜುಗಳನ್ನಾಗಿ ಮಾಡಿ ಕೆಲವು ಸಬ್ಜೆಕ್ಟ್‌ಗಳಿಗೆ ಮಂಜೂರಾತಿ ಕೊಟ್ಟಿರಿ. ಆದರೆ ಆ ಸಬ್ಜೆಕ್ಟ್‌ಗೆ ಉಪಾಧ್ಯಾಯರುಗಳನ್ನು ನೇಮಕಮಾಡುವ ಸಂದರ್ಭದಲ್ಲಿ ನಿಮಗೆ ಯಾರು ಮಂಜೂರಾತಿ ಕೊಟ್ಟಿದ್ದು, ಯಾವರೀತಿ ಅವರನ್ನು ನೇಮಕ ಮಾಡುತ್ತೀರಿ ಎಂದು ಹೇಳುತ್ತೀರಿ. ಈಗ ಅಲ್ಲಿ ಅಂದರೆ ಜೂನಿಯರ್ ಕಾಲೇಜುಗಳಲ್ಲಿ ನೇಮಕ ಮಾಡಿಕೊಂಡಿರತಕ್ಕ ಉಪಾಧ್ಯಾಯರುಗಳಿಗೆ ಸುಮಾರು 2–3 ವರ್ಷಗಳಿಂದ ಸರಿಯಾಗಿ ಸಂಬಳವನ್ನು ಕೊಟ್ಟಿಲ್ಲ. ಈ ಹೈಯರ್ ಸೆಕೆಂಡರಿ ಶಾಲೆಗಳನ್ನು ಜೂನಿಯರ್ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಿದಾಗ ಕೆಲವರು ಲೆಕ್ಚರರ್ಸ್ ಪ್ರಿನ್ಸಿಪಾಲ್‌ರಾಗಿ ಆದರು. ಆದರೆ ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದರಿಂದ ನನಗೆ ನಾಚಿಕೆಯಾಗುತ್ತದೆ. ಆದುದರಿಂದ ಪ್ರಿನ್ಸಿಪಾಲ್‌ಗಳನ್ನು ನೇಮಕಮಾಡುವ ಬಗ್ಗೆ ಸರಿಯಾದ ರೀತಿಯಲ್ಲಿ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರವೇ ಈ ಪ್ರಿನ್ಸಿಪಾಲ್‌ಗಳನ್ನು ನೇಮಕ ಮಾಡುತ್ತಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ.—ಈಗ ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶವಿಲ್ಲ. ತಮ್ಮ ಕಛೇರಿಗೆ ಬಂದಾಗ ಆ ಬಗ್ಗೆ ಮಾತನಾಡುತ್ತೇನೆ. ನಮ್ಮಲ್ಲಿ ವಿದ್ಯಾಭ್ಯಾಸ ಕ್ರಮದಲ್ಲಿ ಬಹಳ ನುರಿತ ತಜ್ಞರಿದ್ದಾರೆ. ಸ್ವಾಮಿ, ಈ ಸಮಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಚೀನಾದೇಶದಲ್ಲಿ ಕೂಡ ಹುಡುಗರು ದಿವಸಕ್ಕೆ 3 ಗಂಟೆಗಳ ಕಾಲ ಓದುತ್ತಾರೆ, ಮತ್ತು 3 ಗಂಟೆಗಳ ಕಾಲ ಹೊರಗಡೆ ಕೆಲಸ ಮಾಡುತ್ತಾರೆಂದು ಕೇಳಿದ್ದೇನೆ. ಸ್ವಾಮಿ, ಮಾನ್ಯ ಸ್ನೇಹಿತರಾದ ಶ್ರೀ ಕೋಣಂದೂರು ಲಿಂಗಪ್ಪನವರು ಹೇಳಿದಂತೆ ಎಸ್. ಎಸ್. ಎಲ್. ಸಿ ವರೆಗೆ ಕಡ್ಡಾಯವಾಗಿ ಓದನ್ನು ಕಲಿಸಿ ಅಲ್ಲಿಂದ ಮುಂದಕ್ಕೆ ಕಾಲೇಜುಗಳಲ್ಲಿ ತಮಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಸೀಟುಗಳನ್ನು ಮಾತ್ರ ಕೊಡುವುದಕ್ಕೆ ಏರ್ಪಾಡು ಮಾಡಿ ಎಂದು ಹೇಳಿ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಹೊರಕೇರಿ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿದ್ಯಾ ಸಚಿವರು ಇವತ್ತಿನ ದಿವಸ ಏನೊಂದು ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ ಅದನ್ನು ಸ್ವಾಗತಿಸುತ್ತಾ ಕೆಲವೊಂದು ಮಾತನ್ನು ಹೇಳಬಯಸುತ್ತೇನೆ. ಈ ಪ್ರಾಥಮಿಕ ವಿದ್ಯಾಭ್ಯಾಸ ನಮ್ಮ ರಾಷ್ಟ್ರದ ಏಳಿಗೆಗೆ ಒಂದು ಬುನಾದಿಯಾಗಿದೆ ಎಂದು ಹೇಳುತ್ತೇನೆ. ಈ ಪ್ರಾಥಮಿಕ ಶಾಲಾ ಶಿಕ್ಷಕರು ನಮ್ಮ ರಾಷ್ಟ್ರದ ಶಿಲ್ಪಿಗಳು ಎಂದರೆ ತಪ್ಪಾಗಲಾರದು. ಇಂಥ ಶಿಕ್ಷಕರಿಗೆ ನಾವು ಮಹತ್ವವನ್ನು ಕೊಡಬೇಕಾಗಿದೆ. ಇಷ್ಟೇ ಅಲ್ಲ ನಮ್ಮ ಭಾರತ ದೇಶ ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ಅನೇಕ ರೀತಿಯ ಅಭಿವೃದ್ಧಿ ದಿಶೆಯಲ್ಲಿ ನಡೆದಿದೆ. ನಮ್ಮ ಮಾನ್ಯ ಸದಸ್ಯರು ಹೇಳಿದರು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸರ್ಕಾರದ ಜವಾಬ್ದಾರಿ ತುಂಬಾ ಇದೆ ಎಂದು ಆದರೆ ಸರ್ಕಾರದ ಜವಾಬ್ದಾರಿ ಇರುವಷ್ಟೇ ಮಟ್ಟಿಗೆ ವಿದ್ಯಾರ್ಥಿಗಳ ಪಾಲಕರ ಜವಾಬ್ದಾರಿಯೂ ಇದೆಯೆಂದು ಹೇಳುತ್ತೇನೆ ಈ ಸಂದರ್ಭದಲ್ಲಿ ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ಈಗ್ಗೆ 400 ವರ್ಷಗಳ ಹಿಂದೆ ಸರ್ವಜ್ಞನು ಒಂದು ಮಾತನ್ನು ಹೇಳಿದ್ದಾನೆ, ಅದು ಏನೆಂದರೆ :

" ವಿದ್ಯೆ ಕಲಿಸದ ತಂದೆ, ಬುದ್ಧಿ ಕೊಡದಾ ಗುರುವು,
ಬಿದ್ದಾಗ ಬಂದು ನೋಡದಾ ತಾಯಿ, ಈ ಮೂವರೂ
ಶುದ್ಧ ವೈರಿಗಳು " ಎಂದನಾ ಸರ್ವಜ್ಞ.

ಅಂದರೆ ಇದರಲ್ಲಿ ತಂದೆಯ ಮತ್ತು ಗುರುವಿನ ಇಬ್ಬರ ಜವಾಬ್ದಾರಿಗಳೂ ಬಹಳ ಇವೆ ಎಂದು ಒಳ್ಳೆಯ ಮಾತಿನಿಂದ ಹೇಳಿದ್ದಾನೆ. ಆದುದರಿಂದ ನಾವು ಪ್ರಾಥಮಿಕ ಶಿಕ್ಷಣದಲ್ಲಿ ಆಸಕ್ತಿಯನ್ನು ವಹಿಸಬೇಕು. ಈಗ ಏನಾಗಿದೆ ಎಂದರೆ ಪ್ರಾಥಮಿಕ ಶಾಲೆಗಳಲ್ಲಿ ನೂರು ಹಾಜರಿ ಬಂದರೆ, ಪ್ರೌಢ ಶಾಲೆಗಳಲ್ಲಿ 50 ಹಾಜರಿ ಬರುತ್ತಾರೆ. ಕಾಲೇಜುಗಳಲ್ಲಿ 25 ಹಾಜರಿ ಬರಬಹುದು, ಇನ್ನೂ ಮುಂದಕ್ಕೆ ಹೋಗುತ್ತಾ ಹೋದರೆ ಕೇವಲ ಕೈ ಬೆರಳಲ್ಲಿ ಎಣಿಸುವಷ್ಟು ಹಾಜರಿ ಬರಬಹುದು. ಇವತ್ತು ನಮ್ಮ ರಾಷ್ಟ್ರದ ಅಭ್ಯುದಯವಾಗಬೇಕಾದರೆ ಈ ಶಿಕ್ಷಣ ಸಾಕಷ್ಟು ಪ್ರಮಾಣದಲ್ಲಿ ಆಗಬೇಕೆಂದು ಹೇಳಿದರೆ ತಪ್ಪಾಗಲಾರದು. ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ 18 ವರ್ಷಗಳವರೆಗೆ ಕಡ್ಡಾಯವಾಗಿ ಅವನು ಪಾಸ್ ಆಗಲಿ, ಫೇಲ್ ಆಗಲಿ ವಿದ್ಯಾಭ್ಯಾಸವನ್ನು ಕೊಡುತ್ತಾರೆಂದು ಕೇಳಿದ್ದೇನೆ. ಉದಾಹರಣೆಗೆ ಹೇಳುವುದಾದರೆ ನಾನು 500 ಜನ ಇದ್ದಂಥ ಗ್ರಾಮದಲ್ಲಿ ವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದವನು. ವಿದ್ಯಾಭ್ಯಾಸ ಕಾಲದಲ್ಲಿ ಒಂದಲ್ಲೊಂದು ಸಮಸ್ಯೆ ಬರುತ್ತಾ ಇರುತ್ತವೆ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಹೇಳುತ್ತೇನೆ, ಸುಗ್ಗಿಯ ಕಾಲದಲ್ಲಿ ಅರ್ಧ ದಿವಸ ಶಾಲೆ ಕಲಿಸ ಮಾಡಿದರೆ ಸಾಕು ಇನ್ನು ಉಳಿದರ್ಧ ದಿನ ಶಾಲಾ ಮಕ್ಕಳಿಗೆ ಬಿಡುಗಡೆ ಕೊಟ್ಟರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ರೀತಿಯಾದ ಒಂದು ವ್ಯವಸ್ಥೆಯನ್ನು ವಿದ್ಯಾ ಇಲಾಖೆ ಮಾಡಿದರೆ ಅದು ತಪ್ಪಾಗಲಾರದೆಂದು ಹೇಳುತ್ತಿದ್ದೇನೆ. ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ನ್ಯೂನ್ಯತೆಗಳು ಇರುತ್ತವೆ. ಶಾಲೆಗಳಲ್ಲಿ ಶಿಕ್ಷಕರು ಕಡ್ಡಾಯವಾಗಿ ಮಾರ್ಗದರ್ಶನ ನೀಡುವಂತಾ ಶಿಕ್ಷಣವಿರಬೇಕು. ನಮ್ಮ ಸ್ನೇಹಿತರು ಹೇಳಿದರು ಹೆಣ್ಣು ಮಕ್ಕಳೇ ಶಾಲಾ ಶಿಕ್ಷಕರಿದ್ದರೆ, ಬಹಳ ಒಳ್ಳೆಯದೆಂದು ಅದು ಒಂದು ರೀತಿಯಲ್ಲಿ ಸರಿಯೆಂದು ತಿಳಿದುಕೊಳ್ಳುತ್ತೇನೆ. ಏತಕ್ಕೆಂದರೆ, ಅವರು ಗಂಡಸರಿಗಿಂತಲೂ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆ. ಆದರೆ ಇದರಲ್ಲಿ ಅಡಚಣೆ ಇರುತ್ತದೆ. ಅವರಿಗೆ ಸರಿಯಾದ ವಸತಿ ಸೌಕರ್ಯ ಸಿಕ್ಕದ ಕಾರಣ, ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಲು ಸಾಮಾನ್ಯವಾಗಿ ಇಷ್ಟಪಡುವುದಿಲ್ಲವೆಂದು ಹೇಳಬಯಸುತ್ತೇನೆ.

ವಯಸ್ಕರ ಶಿಕ್ಷಣದ ವಿಚಾರದಲ್ಲಿ ಹೇಳಬೇಕಾದರೆ, ವಯಸ್ಕರಿಗೆ ಶಿಕ್ಷಣವನ್ನು ಕೊಡುವುದು ಬೇಡವೆಂದು ಹೇಳುವವರಲ್ಲಿ ನಾನು ಒಬ್ಬನಿದ್ದೇನೆ ಏತಕ್ಕೆಂದರೆ 18 ವರ್ಷದ ತನಕ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವಾಗ, ವಯಸ್ಕರಿಗೆ ಶಿಕ್ಷಣವನ್ನು ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರಾಥಮಿಕ ಹಂತದಲ್ಲಿಯೇ ಹೆಚ್ಚಿನ ಮಹತ್ವವನ್ನು ಕೊಡತಕ್ಕ ವಿಚಾರ ಇರುವಾಗ ವಯಸ್ಕರಿಗೆ ಶಿಕ್ಷಣವನ್ನು ಕೊಡುವುದರಲ್ಲಿ ಹೆಚ್ಚಿನ ಮಹತ್ವವಿರುವುದಿಲ್ಲ ನಮ್ಮ ವಿದ್ಯಾಭ್ಯಾಸದ ಯೋಗ್ಯತೆಯ ಮಟ್ಟವು ಹೆಚ್ಚಬೇಕಾದರೆ ಶಿಕ್ಷಣಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ತಪಾಸಣೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕು. ಅವರು ಸರ್‌ಪ್ರೈಸ್ ವಿಸಿಟ್ ಮಾಡಬೇಕು ಅವರಿಗೆ ಒಂದು ವಾಹನದ ಸೌಕರ್ಯವನ್ನು ಮಾಡಿಕೊಡಬೇಕು. ಶಿಕ್ಷಕರು ಯಾರು ಎಲ್ಲಿರುತ್ತಾರೆ

ಸರಿಯಾಗಿ ಶಾಲೆಯನ್ನು ನಡೆಸುತ್ತಿರುತ್ತಾರೋ ಇಲ್ಲವೋ ಎನ್ನುವುದನ್ನು ತನಿಖೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸದನದಲ್ಲಿಯೇ ಈ ಒಂದು ಅನುಕೂಲತೆಯನ್ನು ಮಾಡಿಕೊಡುತ್ತಾರೆಂದು ಸಚಿವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಒಂದು ಮುಖ್ಯವಾದ ವಿಷಯವೇನೆಂದರೆ, ಪ್ರವೇಟ್ ಹೈಸ್ಕೂಲ್‌ಗಳ ವಿಚಾರವಾಗಿ ನಮ್ಮ ಸ್ನೇಹಿತರು ಬಹಳವಾಗಿ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 100 ಕ್ಕೆ 80 ಜನ ಒಕ್ಕಲಿಗರೇ ಇರುತ್ತಾರೆ. ಅಂಥವರಿಗೆ ಅಗ್ರಿಕಲ್ಚರಲ್ – ಬೇಸಿಕ್ ಎಜ್ಯುಕೇಷನ್ ಕೊಡಬೇಕು. ಈ ಒಂದು ತಾಂತ್ರಿಕ ಜ್ಞಾನ ಮೂರು ವರ್ಷದಲ್ಲಿ ಕಲಿತಿದ್ದು 100 ವರ್ಷಗಳವರೆಗೂ ಮರೆಯುವುದಿಲ್ಲವೆಂದು ಹೇಳುತ್ತಾರೆ. 'Child is the father of a man'' ಎಂದು ಹೇಳುತ್ತಾರೆ, I am a son of farmer but my son is not a farmer. ಈವತ್ತಿನ ದಿವಸ ಎಷ್ಟೋ ಜನ ಈ ವೃತ್ತಿಯನ್ನು ಕಡೆಗಾಣಿಸುವ ಪರಿಸ್ಥಿತಿಯನ್ನು ಇಂದು ನಾವು ಕಾಣುತ್ತಿದ್ದೇವೆ. ನಾನು ಈ ಸದನದಲ್ಲಿ ಸೂಚಿಸತಕ್ಕಂತದ್ದು ಏನೆಂದರೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ತಾಂತ್ರಿಕ ಜ್ಞಾನವನ್ನು ಭೋದಿಸತಕ್ಕಂಥ ಪಠ್ಯಪುಸ್ತಕಗಳ ಒಂದು ವ್ಯವಸ್ಥೆಯನ್ನು ಮಾಡಬೇಕು. ಈಗಿನ ಶಿಕ್ಷಣದ ಪಠ್ಯಪುಸ್ತಕಗಳನ್ನು ನೋಡಿದರೆ ಎಷ್ಟು ಪುಸ್ತಕಗಳನ್ನು ಓದಿದರೂ ಬರಲಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ವಿದ್ಯಾ ಇಲಾಖೆಯವರು ಒಂದು ಟೆಕ್ನಾಲಜಿ ರೀಸರ್ಚ್ ಸೆಲ್ ಒಂದು ರಚನೆ ಮಾಡಿ ಅದನ್ನು ಸಮರ್ಥ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಅದಕ್ಕೆ ಹೊಂದಿಕೊಳ್ಳತಕ್ಕಂಥ ಪಠ್ಯಪುಸ್ತಕಗಳನ್ನು ಹೊರತರುವ ವಿಚಾರವನ್ನು ಮಾಡಬೇಕೆಂದು ಹೇಳುತ್ತೇನೆ. ಸ್ವಾತಂತ್ರ್ಯನಂತರ ಭಾರತ ದೇಶದಲ್ಲಿ ತೀವ್ರಗತಿಯಿಂದ ವಿದ್ಯಾಭಿವೃದ್ಧಿಯಾಗುತ್ತಿದೆ. ಪ್ರಗತಿ ಕಾಲದಲ್ಲಿ ದಿನೇದಿನೇ ಬದಲಾವಣೆಯನ್ನು ಹೊಂದುತ್ತಿರುವ ಪರಿಸ್ಥಿತಿಯಲ್ಲಿ ಅದಕ್ಕೆ ಅನುಗುಣವಾದ ಹಾಗೂ ಅಗತ್ಯವಿದ್ದ ವಿದ್ಯಾ ಜ್ಞಾನದ ಬೇಡಿಕೆಗಳು ಬೆಳೆದು ಬಂದಿವೆ. ಭಾರತದ ಗ್ರಾಮೀಣ ರೈತರ ಮಕ್ಕಳಿಗೆ ಹೆಚ್ಚಿನ ತರಬೇತಿ ಕೊಟ್ಟು ಮರಳಿ ತಮ್ಮ ಮನೆಗಳಿಗೆ ಹೋಗಿ ಪರಿಣಾಮಕಾರಿಯಾಗಿ ತನ್ನ ಅನುಕೂಲ ಕಸಬು, ಉದ್ಯೋಗ ಕೈಕೊಳ್ಳದಿರುವ, ಕುಟುಂಬ ಅಭಿವೃದ್ಧಿಗೆ ಅಗತ್ಯವಿದ್ದ ವಿಸ್ತರಣೆ ಜ್ಞಾನವನ್ನು ಕೊಡದಿರುವ ಯಾವುದೇ ಶೈಕ್ಷಣಿಕ ಪದ್ಧತಿಯು ನಮ್ಮ ದೇಶದಲ್ಲಿ ಸಮಾಧಾನಕಾರಕ ಹಾಗೂ ಸಂಮಂಜಸವಾಗಲಾರದು ಎಂದು ಒಬ್ಬರು ಹೇಳಿದ್ದಾರೆ. ಆ ಒಂದು ದಿಸೆಯಲ್ಲಿ ಪ್ರಾಥಮಿಕ ಶಾಲ, ಪ್ರೌಢಶಾಲ, ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಆಗಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಶಾಲಾ ಶಿಕ್ಷಣ ಏತಕ್ಕೆ ಇಷ್ಟೊಂದು ಮಹತ್ವವೆಂದರೆ ಭಾರತದೇಶದಲ್ಲಿ ಶಿಕ್ಷಣದ ಹೊಸ ಮನ್ವಂತರ ಪೀಠಿಕೆಯನ್ನು ಹಾಕುವ ಶಿಕ್ಷಣದ ಪದ್ಧತಿಯು ಅವಶ್ಯವಿದೆ. ಪ್ರೌಢ ವಿದ್ಯಾಲಯ ಹೈಸ್ಕೂಲ್ ಕಾಲೇಜ್ ವಿಶ್ವವಿದ್ಯಾನಿಲಯಗಳಿಗಿಂತಲೂ ಪ್ರಾಥಮಿಕ ಮಟ್ಟದಲ್ಲಿ ಕಲಿತ ವಿದ್ಯೆಯು ಬೀಜ ರೂಪದಂತಿದ್ದು ಪ್ರೌಢ ವಿಧ್ಯಾ ಮಟ್ಟದಲ್ಲಿ ವಿದ್ಯಾರ್ಥಿಯು ವಿಶೇಷ ಶಿಕ್ಷಣದ ನೆರವಿಲ್ಲದೆ ತನ್ನಲ್ಲಿ ಅಂಕುರಿಸಿದ ಜ್ಞಾನವನ್ನು ವಿಸ್ತರಿಸಲು ವರ್ಧಿಸಲು ಸಾಧ್ಯ. ಅದಕ್ಕಾಗಿ ಪ್ರಾಥಮಿಕ ಶಾಲೆಯಿಂದಲೇ ಈ ಒಂದು ಕಾರ್ಯ ಮುದುವರಿಯಬೇಕೆಂದು ಹೇಳುತ್ತೇನೆ. ಕ್ವಾಲಿಟಿ ಇಂಪ್ರೂವ್‌ಮೆಂಟ್ ಇನ್ ಎಜ್ಯುಕೇಶನ್ ವಿಚಾರ ತೆಗೆದುಕೊಂಡರೆ ನಗರಗಳಲ್ಲಿ ಬಹಳಷ್ಟು ಅನುಕೂಲತೆ ಇದೆ. ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಮಕ್ಕಳಿಗೆ, ರೂರಲ್ ಏರಿಯಾದ ಮಕ್ಕಳಿಗೆ ಸಾಧ್ಯವಿದ್ದಲ್ಲೆಲ್ಲ ಅಗ್ರಿಕಲ್ಚರ್ ಬಾಯ್ಸ್ ಸ್ಕೂಲ್‌ಗಳನ್ನು ಪ್ರಾರಂಭಿಸಬೇಕೆಂಬ ಒಂದು ವಿಚಾರ ಇಟ್ಟುಕೊಳ್ಳಬೇಕು

ಇನ್ನೊಂದು ವಿಚಾರವೆಂದರೆ ಹಿಂದುಳಿದ ಹಳ್ಳಿಗಳಲ್ಲಿ ಹಿಂದುಳಿದ ತಾಲ್ಲೂಕುಗಳಲ್ಲಿ ಟೆಲಿವಿಷನ್ ಕಾರ್ಯಾಚರಣೆಯು ಅಗತ್ಯ ಬಹಳಷ್ಟು ಇರುತ್ತದೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಅನೇಕ ಟೆಲಿವಿಷನ್‌ಗಳು ಕೆಲಸಮಾಡುತ್ತಿವೆ. ಮಕ್ಕಳ ಕಾರ್ಯಕ್ರಮ, ವಯಸ್ಕರ ಕಾರ್ಯಕ್ರಮಗಳಿಗೆ ಇದರಿಂದ ಅವಕಾಶ ಸಿಕ್ಕುತ್ತದೆ. ಆದ್ದರಿಂದ ಇದನ್ನು ಇನ್ನೂ ಮುಂದುವರಿಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಮೂರು ವಿಶ್ವವಿದ್ಯಾನಿಲಯಗಳು ಇವೆ. ಈ ವಿಶ್ವವಿದ್ಯಾನಿಲಯಗಳಿಗೆ ಕೊಡತಕ್ಕಂಥ ಗ್ರಾಂಟು ಸ್ನಾತಕೋತ್ತರ ವ್ಯಾಸಂಗಕ್ಕೆ ಬರತಕ್ಕಂಥ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇರುವುದಿಲ್ಲ. ಅಲ್ಲದೇ ಮೂರು ವಿಶ್ವವಿದ್ಯಾನಿಲಯಗಳಿಗೂ ಗ್ರಾಂಟನ್ನು ಸಮನಾಗಿ ಹಂಚುತ್ತಿಲ್ಲ. ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಸಾರವಾಗಿ ಗ್ರಾಂಟನ್ನು ಕೊಡದಿದ್ದರೆ ಅದು ಸರಿಯಾಗಿ ನಡೆಯುವುದಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಮಾಣವನ್ನು ಅನುಸರಿಸಿಯೇ ಗ್ರಾಂಟನ್ನು ಕೊಡುತ್ತಿದ್ದೇವೆ.

ಶ್ರೀ ಬಿ. ಎಂ. ಸೊರಕೇರಿ —ಆ ರೀತಿ ಕೊಡುತ್ತಿದ್ದರೆ ಒಳ್ಳೆಯದು. ಮತ್ತೊಂದು ವಿಷಯ ವೆಂದರೆ ಮಹಾರಾಷ್ಟ್ರದಲ್ಲಿ ಅಭಯಂಕರ್ ಅವರ ನೇತೃತ್ವದಲ್ಲಿ ಯುವಕರಿಗಾಗಿ ಒಂದು ಕಾಲೇಜನ್ನು ನಡೆಸುತ್ತಿದ್ದಾರೆ, ಅಲ್ಲಿ ಯುವಕರು ಬಿಡುವಿನ ಕಾಲದಲ್ಲಿ ಸಂಘಟನೆ ಮಾಡತಕ್ಕಂಥ ಅನೇಕ ರಚನಾತ್ಮಕವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ ಹಾಗೆ ಮಾಡುವುದರಿಂದ ಯುವಕರಿಗೆ ಶ್ರಮಧಾನದ ಮಹತ್ವ ಗೊತ್ತಾಗುತ್ತದೆ. ಸಾರ್ವಜನಿಕ ಕೆಲಸ ಮಾಡಲು ಒಂದು ರೀತಿಯಾದ ರಚನಾತ್ಮಕ ಸೇವಾ ಬಾವನೆಯು ಬರುತ್ತದೆ ಅಂಥ ಕಾಲೇಜುಗಳನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿದರೆ ಒಳ್ಳೆಯದೆಂದು ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಚಾರ ಸನ್ಮಾನ್ಯ ವಿದ್ಯಾಸಚಿವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಕಿತ್ತೂರು ರಾಣಿ ಚೆನ್ನಮ ರೆಸಿಡೆನ್ಸಿಯಲ್ ಸ್ಕೂಲ್ ಫಾರ್ ಗರ್ಲ್ಸ್ ಎಂದು ಇರುತ್ತದೆ. ಇದರಬಗ್ಗೆ ಒಂದು ಮಹತ್ವದ ವಿಚಾರ ಹೇಳಬೇಕಾಗಿದೆ ನಮ್ಮ ಭಾರತದಲ್ಲಿ ಪ್ರಪ್ರಥಮವಾಗಿ ಸ್ವಾತಂತ್ರ್ಯದ ಪ್ರಥಮ ಹೆಜ್ಜೆಯನ್ನು ಇಟ್ಟದ್ದು ಎಂದರೆ ಕರ್ನಾಟಕದ ರಾಣಿ ಕಿತ್ತೂರು ಚೆನ್ನಮ್ಮ. ಇವರ ಐತಿಹಾಸಿಕ ವಿಚಾರವನ್ನು ತಿಳಿದುಕೊಳ್ಳಲು ವಿದ್ಯಾ ಇಲಾಖೆಯವರು ಕಿತ್ತೂರಿನಲ್ಲಿ ರಾಣಿ ಚೆನ್ನಮ್ಮನವರ ಸಚಿವ ಸ್ಮಾರಕರೀತಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ, ಅಲ್ಲಿ ಸೈನಿಕ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇದು ಕರ್ನಾಟಕ ರಾಜ್ಯಕ್ಕೆ ಅಷ್ಟೇ ಅಲ್ಲ ಇಡೀ ಭಾರತ ದೇಶದಲ್ಲಿ ಇಂಥದ್ದೇ ಶಾಲೆಗಳನ್ನು ಸ್ಥಾಪನೆ ಮಾಡಿ ಹೆಣ್ಣು ಮಕ್ಕಳಿಗೆ, ಮಧ್ಯಮವರ್ಗದ ಕುಟುಂಬದವರ ಮಕ್ಕಳಿಗೆ ಅವರ ಒಂದು ವಿಚಾರ ಜ್ಞಾನ ಅಭ್ಯಾಸ ಮಾಡಿಸುವುದು ನಿಜವಾಗಿಯೂ ನಮ್ಮ ರಾಷ್ಟ್ರಕ್ಕೆ ಬಹಳ ಮಹತ್ವದ ವಿಚಾರವಾಗಿರುತ್ತದೆ.

4–00 P.M.

ಅದಕ್ಕಾಗಿ ಕೇವಲ 3 ಲಕ್ಷ ರೂಪಾಯಿಗಳನ್ನು ಮಾತ್ರ ಈ ವರ್ಷದ ಬಜೆಟ್‌ನಲ್ಲಿ ಕಾಣಿಸಿದ್ದಾರೆ ಅದಕ್ಕಾಗಿ ಅನೇಕ ಮಾಸ್ಟರ್ ಪ್ಲಾನ್‌ಗಳನ್ನು ಮಾಡಿಕೊಂಡಿದ್ದಾಗಿದೆ. ಈ ಮಾಸ್ಟರ್ ಪ್ಲಾನ್‌ಗಳ ಗೊತ್ತುಗುರಿಗಳನ್ನು ಮುಟ್ಟುವ ಹಾಗೆ ನಮ್ಮ ರಾಜ್ಯ ಸರ್ಕಾರದವರು ತೀವ್ರಗತಿಯಲ್ಲಿ ಕೆಲಸಮಾಡಿ ಅದು ಸಫಲವಾಗುವಂತೆ ಮಾಡಿದರೆ ಅದು ಒಂದು ಮಹತ್ವದ ಕಾರ್ಯ ಎನಿಸುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಮಂದಿ ವೀರ ಮಹಿಳೆಯರು ಇದ್ದರು. ಒನಕೆ ಓಬವ್ವ, ಬೆಳವಡಿ ಮಲ್ಲಮ್ಮ, ಕಿತ್ತೂರು ರಾಣಿ ಚೆನ್ನಮ್ಮ ಮುಂತಾದ ವೀರಮಹಿಳೆಯರ ಹೆಸರುಗಳು ನಮ್ಮ ರಾಷ್ಟ್ರಾದ್ಯಂತ ಹಬ್ಬಬೇಕಾಗಿದೆ. ಮುಖ್ಯವಾಗಿ ಮಕ್ಕಳ ಓದಿನಲ್ಲಿ ಈ ವಿಚಾರ ಬಂದರೆ ಅವರ ಮನೋಭಾವ ಒಳ್ಳೆಯ ರೀತಿಯಲ್ಲಿ ಬೆಳೆಯುತ್ತಾ ಬರುತ್ತದೆ. ಇದರಿಂದ ಹೆಚ್ಚು ಅನುಕೂಲವಾಗುತ್ತದೆ ಸೈನಿಕ ಸ್ಕೂಲುಗಳ ಮಕ್ಕಳಿಗೆ ರಕ್ಷಣಾ ಇಲಾಖೆಯಿಂದ ರಾಜ್ಯ ಸರ್ಕಾರದವರು ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತಿದ್ದಾರೆ. ಅದು ಒಳ್ಳೆಯದು ಭಾರತಾದ್ಯಂತ ಎಲ್ಲಾ ಮಹಿಳೆಯರಿಗೆ ಶಿಕ್ಷಣ ಪಡೆಯುವುದಕ್ಕೆ ಅವಕಾಶವಿರಬೇಕೆಂದು ಹೇಳುತ್ತೇನೆ ಇದು ಕೇವಲ ರಾಜ್ಯಮಟ್ಟದ ವಿಚಾರವಲ್ಲ; ಇದು ಇಡೀ ಭಾರತದ ಮಟ್ಟದ ವಿಚಾರ. ಈ ಒಂದು ಶಿಕ್ಷಣಶಾಲೆ ಕಿತ್ತೂರಿನಲ್ಲಿ ಪ್ರಾರಂಭವಾದದ್ದು ನಮ್ಮ ರಾಜ್ಯಸರ್ಕಾರದವರು ಅದನ್ನು ಮುಂದುವರಿಸಿಕೊಂಡು ಇದು ಕೇವಲ ನಮ್ಮ ಕರ್ನಾಟಕ ರಾಜ್ಯಮಟ್ಟದ್ದು ಅಷ್ಟೇ ಅಲ್ಲ ಇಡೀ ಭಾರತದಲ್ಲಿ ರಾಷ್ಟ್ರಮಟ್ಟದ ಒಂದು ಸಂಸ್ಥೆಯಾಗಬೇಕೆಂದು ಈ ಒಂದು ವಿಚಾರವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನು ಉಳಿದ ವಿಚಾರವೇನೆಂದರೆ ನಮ್ಮ ಪ್ರಾಥಮಿಕ ಮಟ್ಟದಲ್ಲಿ ಮತ್ತು ಕಾಲೇಜುಗಳ ಮಟ್ಟದಲ್ಲಿ ಮಕ್ಕಳಿಗೆ ಹೆಚ್ಚಿನ ವಿದ್ಯಾವಕಾಶ ಇರಬೇಕು. ಶಿಕ್ಷಕರ ಮೇಲೆ ಇನ್ಸ್‌ಪೆಕ್ಷನ್ ಇಟ್ಟು ಸರಿಯಾದ ಹತೋಟಿ ಇರಬೇಕು ಎಂಬುದಾಗಿ ಸರ್ಕಾರದವರು ಏನು ಯೋಚನೆ ಹಾಕಿಕೊಂಡಿದ್ದಾರೆ ಅದು ಸೂಕ್ತವಿದೆ; ಮತ್ತು ಅವರಿಗೆ ವಾಹನದ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಅಧ್ಯಕ್ಷರು ಈ ವಿಷಯವಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್ ಶಾಮಣ್ಣ (ಕೋಟೆ).—ಸನ್ಮಾನ್ಯ ಅಧ್ಯಕ್ಷರೇ, ಈ ನಮ್ಮ ದಿನ ಮುಂದಿಟ್ಟಿರುವ 1 ಕೋಟಿ 10 ಲಕ್ಷ ರೂ. ಬೇಡಿಕೆಯ ಮತ್ತು ಇತರ ಬೇಡಿಕೆಗಳು ಅತಿ ಮುಖ್ಯವಾದ ಬೇಡಿಕೆಗಳು ಎಂದು ಹೇಳಿ ಅದರ ಮೇಲೆ ವಿವರಿಸಬೇಕಾಗಿದ್ದು ಇಲ್ಲ. ಈ ವರ್ಷ ಸರ್ಕಾರ ಈ ವಿದ್ಯಾಖಾತೆಯ ಬಗ್ಗೆ ಖರ್ಚು ಮಾಡತಕ್ಕಂಥಾದ್ದು ಏನಿದೆ 1 ಕೋಟಿ 10 ಲಕ್ಷ ರೂ. ಜೊತೆಗೆ ಕಡೆಯ ಪ್ರಮಾಣದಲ್ಲಿ ಸುಮಾರು 1 ಕೋಟಿ ರೂ. ಆದರೂ ಕೂಡ ಖಾಸಗೀ ಶಾಲೆಗಳು ವಿದ್ಯಾರ್ಥಿಗಳ ತಂದೆತಾಯಿಗಳಿಂದ ನಾನಾ ರೂಪದಲ್ಲಿ ವಸೂಲು ಮಾಡುತ್ತಿದ್ದಾರೆ. ಅಂದರೆ ಒಟ್ಟಿನಲ್ಲಿ ಸಾರ್ವಜನಿಕರ ಹಣ ಸುಮಾರು 2 ಕೋಟಿ ರೂಪಾಯಿಗಳು ಖರ್ಚಾಗುತ್ತಾ, ಇರತಕ್ಕಂಥ ವಿದ್ಯಾ ಇಲಾಖೆಯ ಆಡಳಿತ ಆದಷ್ಟು ಸಮರ್ಪಕವಾಗಿ ಆಗಬೇಕು. ಇದರ ಬಗ್ಗೆ ಅತಿಮುಖ್ಯವಾಗಿ ಹೇಳಬೇಕಾದ ಪಕ್ಷದಲ್ಲಿ ಅನೇಕ ಸಂದರ್ಭಗಳಲ್ಲಿ ಈ ವಿದ್ಯಾಭ್ಯಾಸದ ಬಗ್ಗೆ ಅನೇಕ ಟೀಕೆಗಳು ನಡೆಯುತ್ತಾ ಇದೆ. ನಮ್ಮ ಮುಂದೆ ಇರತಕ್ಕಂಥ ವಿಚಾರಗಳ ಪೈಕಿ ಈ ವಿದ್ಯಾಭ್ಯಾಸದ ಗುಣಮಟ್ಟವನ್ನು ಯಾವ ರೀತಿ ಹೆಚ್ಚಿಸಬೇಕೆಂಬುದು ಒಂದು ; ಎರಡನೆಯದಾಗಿ ಈ ವಿದ್ಯಾಭ್ಯಾಸದಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸತಕ್ಕಂಥಾದ್ದು ಎಂಬುದರ ಬಗ್ಗೆ ಮತ್ತು ಜಾಬ್ ಓರಿಯೆಂಟೆಡ್ ಎಜುಕೇಷನ್ ಅದರ ಬಗ್ಗೆ ಒಂದು ತೀರ್ಮಾನ, ಹಾಗೂ ಮೂರನೆಯದಾಗಿ ಈ ಒಂದು ಕ್ಲಿಷ್ಟ ಪರಿಸ್ಥಿತಿಯಲ್ಲಿ ಖಾಸಗೀ ಶಾಲೆಗಳಲ್ಲಿ ಇರತಕ್ಕಂಥ ಅವ್ಯವಹಾರಗಳನ್ನು ಯಾವ ರೀತಿ ಅದನ್ನು ಸರಿಪಡಿಸಬೇಕು ಎಂಬುದಾಗಿ ಈ ಮೂರು ಮುಖ್ಯವಾದ ಅಂಶಗಳು ನನಗೆ ಈಗಿನ ಒಂದು ವಾತಾವರಣದಲ್ಲಿ ಎದ್ದು ಕಾಣುತ್ತಿದೆ. ಮೊದಲನೆಯದಾಗಿ ವಿದ್ಯಾಭ್ಯಾಸದ ಗುಣಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ. ಇದರ ಹಣ ಹೆಚ್ಚು ಖರ್ಚಾಗುತ್ತಿದ್ದರೂ ಸಹ, ಓದತಕ್ಕಂಥ ವಿದ್ಯಾರ್ಥಿಗಳ ಸಂಖ್ಯೆ ದಿನದಿನೇ ಬೆಳೆಯುತ್ತಿದ್ದರೂ ಸಹ ಈ ಒಂದು ವಿದ್ಯಾಭ್ಯಾಸದ ಮೌಲ್ಯ ಏನಿದೆ ಅದು ಸಾಕಾದಷ್ಟು ಅಧೋಗತಿಗೆ ಹೋಗುತ್ತಿದೆ. ಈ ವಿದ್ಯಾಭ್ಯಾಸವನ್ನು ಕೊಡುತ್ತಾ ಇರತಕ್ಕಂಥ ಶಿಕ್ಷಣ ಶಾಲೆಗಳು ಮತ್ತು ಸರ್ಟಿಫಿಕೇಟ್ ಮತ್ತು ಡಿಗ್ರಿಗಳನ್ನು ಕೊಡುತ್ತಿರತಕ್ಕಂಥ ಶಿಕ್ಷಣ ಸಂಸ್ಥೆಗಳ ಬಗ್ಗೆ ದೂರುಗಳನ್ನು ಹೇಳಬೇಕಾದಂತ ಪರಿಸ್ಥಿತಿ ಈ ಸಂದರ್ಭದಲ್ಲಿ ಇದೆ. ಅಷ್ಟು ಹೆಚ್ಚಿನ ರೀತಿಯಲ್ಲಿ ಹಣ ಖರ್ಚಾಗುತ್ತಾ ಇರುವಾಗ ಸಾಧ್ಯವಿದ್ದಷ್ಟೂ ಉತ್ತಮವಾದ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡಬೇಕಾದಂತ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಇದರಲ್ಲಿ ಸಾರ್ವಜನಿಕರ ಸಹಾಯ ಬೇಕು ಮತ್ತು ಅಧಿಕಾರಿಗಳ ಒಂದು ದಿಟ್ಟತನದ ನಿಲುವು ಅಗತ್ಯವಾಗಿಬೇಕಾಗಿದೆ. ನಮ್ಮಲ್ಲಿ ಅನೇಕರು ಈ ಒಂದು ಕ್ಷೇತ್ರದಲ್ಲಿ ಒಳ್ಳೆಯ ಆಡಳಿತ ಇರಬೇಕೆಂಬ ವಾದವನ್ನು ಹೇಳುತ್ತಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ವಿದ್ಯಾಭ್ಯಾಸದಲ್ಲಿ ಎಲ್ಲಿಯವರೆಗೆ ಶ್ರದ್ಧಾಭಕ್ತಿಯಿಂದ ನಿಷ್ಠೆಯಿಂದ, ಸಂಬಳವೇ ತನ್ನ ಜೀವನದ ಗುರಿಯೆಂದು ಇಟ್ಟುಕೊಳ್ಳದೇ ಸಾಧ್ಯವಾದಷ್ಟು ಕೂಡ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕಂಥಾದ್ದೇ ನನ್ನ ತಪಸ್ಸು ಎನ್ನತಕ್ಕಂಥ ಮನೋಭಾವ ಎಲ್ಲಿಯವರೆಗೆ ಅಧ್ಯಾಪಕರಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಖಂಡಿತವಾಗಿಯೂ ಕೂಡ ಈ ವಿದ್ಯಾಭ್ಯಾಸ ಮಟ್ಟ ಪ್ರಗತಿಯಾಗುವುದಕ್ಕೆ ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿ ಉಪಾಧ್ಯಾಯರ ಮೇಲೆ ಹಾಕಬೇಕಾದಂತೆ ನಾನು ಒಬ್ಬ ಉಪಾಧ್ಯಾಯನಾಗಿದ್ದರಿಂದ ಹಾಗೆ ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ಕ್ಷೇತ್ರದಲ್ಲಿ ನಾನು 40 ವರ್ಷಗಳ ಕಾಲ ಉಪಾಧ್ಯಾಯನಾಗಿ ಕೆಲಸ ಮಾಡಿದ್ದೇನೆ. ಉಪಾಧ್ಯಾಯರು ಯಾವಾಗ ನಿಷ್ಠೆಯಿಂದ ಕರ್ಮಶ್ರದ್ಧೆಯಿಂದ ಹುಡುಗರಿಗೆ ಪಾಠ ಹೇಳುವುದಕ್ಕೆ ಶುರು ಮಾಡುತ್ತಾರೆಯೋ ಆಗ ಖಂಡಿತವಾಗಿಯೂ ಅವರು ವಿದ್ಯಾರ್ಥಿಗಳ ವಿಶ್ವಾಸವನ್ನು ಗಳಿಸುವುದರ ಜೊತೆಗೆ ಅವರ ಜೀವನದಲ್ಲಿ ಒಂದು ದೊಡ್ಡ ಮಹತ್ಕಾರ್ಯವನ್ನು ಸಾಧಿಸಿದ ಹಾಗೆ ಆಗುತ್ತದೆ. ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಮತ್ತೆ ಪ್ರೈವೇಟ್ ಕಾಲೇಜುಗಳು, ಖಾಸಗೀ ವಿದ್ಯಾಶಾಲೆಗಳು ಮತ್ತು ಸರ್ಕಾರಿ ಶಾಲೆಗಳ ಬಗ್ಗೆ ಹೇಳಬೇಕಾದರೆ ಈ ಸರ್ಕಾರಿ ಶಾಲೆಗಳು ಸರಿಯಾದ ರೀತಿಯಲ್ಲಿ ನಡೆದಿದ್ದರೆ ಖಾಸಗೀ ಶಾಲೆಗಳು ಇಷ್ಟು ಪ್ರಭಾವವನ್ನು ಬೆಳೆಸುವುದಕ್ಕೆ ಹೋಗುತ್ತಾ ಇರಲಿಲ್ಲ. ಖಾಸಗೀ ಶಾಲೆಗಳಿಗೆ ಉತ್ತಮರಾದ ವಿದ್ಯಾರ್ಥಿಗಳು ಹೋಗಿ ಪ್ರೈವೇಟು ಇನ್‌ಸ್ಟಿಟ್ಯೂಷನ್‌ನವರು ನಡೆಸತಕ್ಕಂಥಾದ್ದು, ಒಳ್ಳೆಯ ಪರಿಸ್ಥಿತಿಯಲ್ಲಿರತಕ್ಕಂಥವರೆಲ್ಲರೂ ಖಾಸಗೀ ಶಾಲೆಗಳಿಗೆ ಹೋದಮೇಲೆ ಇನ್ನು ಉಳಿದಿರತಕ್ಕಂಥ ಶಾಲೆಗಳನ್ನು ಯಾವ ರೀತಿ ಉತ್ತಮಪಡಿಸಬೇಕು ಎಂಬ ಸಬೂಬನ್ನು ಹೇಳುತ್ತಿರುತ್ತಾರೆ. ಇದರ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಲ್ಲೆ. ಸರ್ಕಾರ ಇದರ ಬಗ್ಗೆ ಗಮನಕೊಟ್ಟರೆ ಇದು ಸುಲಭವಾಗಿ ಸಾಧ್ಯವಾಗುತ್ತದೆ. ಈ ಶಾಲೆಗಳಲ್ಲಿ

100 ಪರ್ಸೆಂಟ್ ರಿಸಲ್ಟ್ ಬರದಿದ್ದರೂ ಆವರೇಜ್ ರಿಸಲ್ಟ್ ಆದರೂ ಬರುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಿದ ಪಕ್ಷದಲ್ಲಿ ಹಿಂದುಳಿದಿರತಕ್ಕ ಶಾಲೆಗಳು ಉತ್ತಮವಾಗುತ್ತವೆ. ಇನ್ನು ಸರ್ಕಾರಿ ಸ್ಕೂಲುಗಳು, ಕಾರ್ಪೊರೇಷನ್, ಸ್ಥಳೀಯ ಸಂಸ್ಥೆಗಳು ನಡೆಸತಕ್ಕಂಥ ಸ್ಕೂಲುಗಳನ್ನು ಸಾಧ್ಯವಾದಷ್ಟು ಅವರಿಗೆ ಇಂಗ್ಲಿಷ್‌ನಲ್ಲಿ 'ವಿಪ್'' ಎಂದು ಏನು ಹೇಳುತ್ತಾರೆ ಅದನ್ನು ಕೊಟ್ಟು ಸರಿಪಡಿಸಿದರೆ ಮಾತ್ರ ಸರಿಯೋಗುತ್ತವೆ ಎಂದು ನನಗನ್ನಿಸುತ್ತದೆ. ಈ ಖಾಸಗೀ ಶಾಲೆಗಳ ಬಗ್ಗೆ ಹೇಳಬೇಕಾದರೆ ಇವುಗಳಲ್ಲಿ ಕೆಲವು ಉತ್ತಮವಾದ ಶಾಲೆಗಳು ಇವೆ. ನಾನು ಹಿಂದೆ ಶಾಲೆಗಳನ್ನು ನಡೆಸಿರುವುದರ ಜೊತೆಗೆ ಈಗ ಒಂದಲ್ಲ ಹತ್ತಾರು ಶಾಲೆಗಳ ಅಧ್ಯಕ್ಷನಾಗಿ, ಕಾರ್ಯದರ್ಶಿಯಾಗಿ ಇದ್ದೇನೆ ಆದರಿಂದ ಇವೆರಡನ್ನೂ ವಿಂಗಡಿಸಬೇಕಾದ ಆವಶ್ಯಕತೆ ಇದೆ. ಮೊದಲನೆಯದಾಗಿ ಈ ವ್ಯಾಪಾರೀ ಮನೋಭಾವ ಇರತಕ್ಕಂಥ ಯಾವ ಶಾಲೆಗಳು ಇದೆಯೋ ಅವುಗಳನ್ನು ಸರ್ಕಾರದವರು ಈ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗಳನ್ನು ಏಕದಮ್ ಹೇಗೆ ತೆಗೆದುಕೊಂಡುಬಿಟ್ಟರೋ ಆ ರೀತಿ ಅವುಗಳಿಗೆ ಷಾರ್ಟ್ ಟ್ರೀಟ್‌ಮೆಂಟ್ ಕೊಟ್ಟು ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ನೋಡಬೇಕಾಗಿದೆ. ಈ ಖಾಸಗೀ ಶಾಲೆಗಳನ್ನು ತೆಗೆದು ಹಾಕಿ ಎಂದು ಹೇಳುವವನು ನಾನಲ್ಲ. ಕೆಲವು ಖಾಸಗೀ ಶಾಲೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಈ ಖಾಸಗೀ ಶಾಲೆಗಳಲ್ಲಿ ಯಾವ ಶಾಲೆ ಹುಡುಗರಿಂದ ಹಣವನ್ನು ವಸೂಲು ಮಾಡಿ, ಹುಡುಗರ ಉನ್ನತಿಗಾಗಿ ಆ ಹಣವನ್ನು ಖರ್ಚು ಮಾಡುತ್ತದೆಯೋ ಅಂತಹ ಶಾಲೆಗಳಿಗೆ ಮಾತ್ರ ಸರ್ಕಾರದ ಪ್ರತಿನಿಧಿಯನ್ನು ಮ್ಯಾನೇಜಿಂಗ್ ಕಮಿಟಿಯಲ್ಲಿ ಹಾಕಿ ಅಂತಹ ಶಾಲೆಗಳನ್ನು ನಡೆಸಿಕೊಂಡು ಹೋಗಬೇಕು ಮತ್ತು ಹುಡುಗರಿಂದ ತಗೆದುಕೊಂಡಂತ ಹಣವನ್ನು ಶಾಲೆಯ ಅಭಿವೃದಿಗೆ ಮತ್ತು ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಉಪಯೋಗಿಸುವಂತೆ ಮಾಡಿದರೆ ಅಂತಹ ಶಾಲೆಗಳಿಗೆ ಸಾಕಷ್ಟು ಹಣ ಸಹಾಯವನ್ನು ಕೊಡಬೇಕು. ಮತ್ತು ಕಮರ್ಷಿಯಲ್ ಸ್ಟಡಿ ಇನ್‌ಸ್ಟಿಟ್ಯೂಟಿಗೆ ಮುಟ್ಟುಗೋಲು ಹಾಕದೇ ಇದ್ದ ಪಕ್ಷದಲ್ಲ ಅವರ ಹಾವಳಿಯನ್ನು ತಡೆಯುವುದಕ್ಕೆ ಆಗುವುದಿಲ್ಲ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಅನೇಕ ಸಾರಿ ಇವರ ಬಗ್ಗೆ ಹೇಳಿದ್ದೇನೆ. ಜಯನಗರದಲ್ಲಿ ಸುದರ್ಶನ ವಿದ್ಯಾ ಮಂಡಲಿ ಇದೆ. ಅದನ್ನು ನಡೆಸುತ್ತಾ ಇರತಕ್ಕಂಥವರು ಜ್ಞಾನಮಂದಿರ ಟ್ರಸ್ಟ್ ಎಂಬುವರು. ಆ ಜ್ಞಾನಮಂದಿರ ಟ್ರಸ್ಟಿನಲ್ಲಿ ಗಂಡ ಹೆಂಡತಿ, ಮಗ ಮತ್ತು ತಮ್ಮ ಟ್ರಸ್ಟೀಸ್. ಆ ನಾಲ್ಕು ಜನ ಟ್ರಸ್ಟೀಸ್ ಸೇರಿ ಶಾಲೆ ನಡೆಸುತ್ತಿದ್ದಾರೆ. ಆ ಶಾಲೆಯಲ್ಲಿ ವರ್ಷಕ್ಕೆ 260 ರೂಪಾಯಿ ಫೀಸ್ ವಸೂಲು ಮಾಡುತ್ತಾರೆ. ತಂದೆತಾಯಿಗಳು ಫೀಸ್ ಕೊಡಲಿಲ್ಲ ಎಂದು ಲಾಯರ್ ನೋಟೀಸ್ ಕೊಟ್ಟು ಫೀಸ್ ವಸೂಲ್ ಮಾಡುತ್ತಿದ್ದಾರೆ. ಈ ಶಾಲೆಯಲ್ಲಿ ಕನ್ನಡ ಮಾಧ್ಯಮ ತರಗತಿಗಳನ್ನು ನಡೆಸುತ್ತಿದ್ದೇವೆ ಎಂದು ಹೇಳಿ 30 ಸಾವಿರ ರೂಪಾಯಿ ಗ್ರಾಂಟನ್ನು ಡ್ರಾ ಮಾಡಿದ್ದಾರೆ. ಅಲ್ಲಿ ಕನ್ನಡ ಮಾಧ್ಯಮ ತರಗತಿಗಳನ್ನು ನಡೆಸುತ್ತಿಲ್ಲ ಎಂಬ ಆರೋಪ ಕೂಡ ಸರ್ಕಾರದ ಮುಂದಿದೆ. ಇದರ ಬಗ್ಗೆ ಸರ್ಕಾರ ಸರಿಪಡಿಸುವುದಕ್ಕೆ ಸಾಕಾದಷ್ಟು ಪ್ರಯತ್ನ ಪಡುತ್ತಿದೆ. ಆದರೂ ಕೂಡ ಸರಿಪಡಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಇಂಥ ಸಂಸ್ಥೆಗಳು ಹೆಚ್ಚಾಗಿ ಬೆಳೆಯುತ್ತಿದ್ದರೆ ತುಂಬಾ ತೊಂದರೆಯಾಗುತ್ತದೆ. ಅಂತಹ ಉದಾಹರಣೆಗಳು ನೂರಾರು ಇವೆ. ಅಂತಹ ಶಾಲೆಗಳು ನಡೆಯುವುದನ್ನು ತಪ್ಪಿಸುವುದರ ಬಗ್ಗೆ ಏನು ಮಾಡಬೇಕೋ ಆ ಬಗ್ಗೆ ಯೋಜನೆ ಮಾಡಬೇಕಾದುದದು ಮುಖ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆದಾಗಿ ನನ್ನ ಮುಖ್ಯವಾದ ಸಲಹೆ ಏನೆಂದರೆ ತಾವು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅತಿ ಹೆಚ್ಚಿನ ಗಮನವನ್ನು ಕೊಡಬೇಕು. ಒಂದು ಕಟ್ಟಡಕ್ಕೆ ತಳಹದಿ ಯಾವರೀತಿ ಮುಖ್ಯವೋ ಅದೇ ರೀತಿ ವಿದ್ಯಾಭ್ಯಾಸದಲ್ಲಿ ಪ್ರೈಮರಿ ವಿದ್ಯಾಭ್ಯಾಸ ಅತಿ ಮುಖ್ಯವಾದುದು: ಸುಮಾರು 47 ಕೋಟಿ ರೂಪಾಯಿಗಳನ್ನು ಪ್ರೈಮರಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೀರಿ. ಮತ್ತು ರಾಜ್ಯದಲ್ಲಿ ಸುಮಾರು 33 ಸಾವಿರ ಸ್ಕೂಲುಗಳಿವೆ. ಸುಮಾರು 33 ಲಕ್ಷ ವಿದ್ಯಾರ್ಥಿಗಳು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾರೆ. ಈ ಶಾಲೆಗಳಲ್ಲಿರುವ ಉಪಾಧ್ಯಾಯರ ಪೈಕಿ ಎಷ್ಟು ಜನ ಉಪಾಧ್ಯಾಯರ ಕೈಯಲ್ಲಿ ಸರಿಯಾಗಿ ತಪ್ಪಿಲ್ಲದೆ 10 ಪದ ಬರೆಸುತ್ತೀರಿ ಎಂಬುದನ್ನು ನೋಡಿ. ಎಲ್ಲಾ ತಪ್ಪುತಪ್ಪಾಗಿ ಬರೆಯುತ್ತಾರೆ. ಸರಿಯಾದ ರೀತಿಯಲ್ಲಿ ಮಕ್ಕಳಿಗೆ ಪಾಠ ಹೇಳುವ ಉಪಾಧ್ಯಾಯರು ಪ್ರೈಮರಿ ಶಾಲೆಯಲ್ಲಿ ಇಲ್ಲದೇ ಹೋದರೆ ಅಂತಹ ಉಪಾಧ್ಯಾಯರಿಂದ ತರಬೇತಾದ ಮಕ್ಕಳು ಎಷ್ಟರಮಟ್ಟಿಗೆ ಉತ್ತಮ ಪ್ರಜೆಗಳಾಗುತ್ತಾರೆ. ಎಂಬ ಬಗ್ಗೆ ತಾವು ಯೋಚನೆ ಮಾಡಬೇಕಾದುದು ಅತೀ ಮುಖ್ಯವಾದುದು,

ಈ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಸಾಕಾದಷ್ಟು ಆಸಕ್ತಿ ವಹಿಸಿ ಉತ್ತಮವಾದ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಕಮಿಟೆಡ್ ಜಡ್ಜಸ್ ಎಂದು ಹೇಳುವುದು ಬೇಡ, ಕಮಿಟೆಡ್ ಟೀಚರ್ಸ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ನಾನು ಇವತ್ತು ಜಾತಿ ಬಗ್ಗೆ ಮಾತನಾಡುವುದಿಲ್ಲ. ಅನೇಕರು ಉತ್ತಮರು ಇದ್ದಾರೆ. ಮಾನ್ಯ ಕೆ. ವಿ. ಪುಟ್ಟಪ್ಪನವರ ವಿದ್ಯೆ ಬಗ್ಗೆಯಾಗಲಿ, ಕೋಣಂದೂರು ಲಿಂಗಪ್ಪನವರ ವಿದ್ಯೆ ಬಗ್ಗೆಯಾಗಲೀ, ತಮ್ಮ ವಿದ್ಯೆ ಬಗ್ಗೆಯಾಗಲೀ, ಏನಾದರೂ ಹೇಳುವುದಕ್ಕೆ ಆಗುತ್ತದೆಯೇ ? ಕೆಲವೊಂದು ಇಲಾಖೆ ಬಿಟ್ಟರೆ ಪ್ರತಿಯೊಂದು ಇಲಾಖೆಯಲ್ಲಿಯೂ ಉತ್ತಮವಾದ ಅಧಿಕಾರಿಗಳನ್ನು ಹಾಕಿದ್ದೀರಿ. ಅದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಸುಮಾರು 30-40 ವರ್ಷಗಳಿಂದ ಸರ್ಕಾರದ ಇಲಾಖೆ ಅಧಿಕಾರಿಗಳ ಹತ್ತಿರ ನಾನು ಸಂಪರ್ಕ ಇಟ್ಟುಕೊಂಡಿದ್ದೇನೆ. ಉತ್ತಮವಾದ ಅಧಿಕಾರಿಗಳು ವಿದ್ಯಾ ಇಲಾಖೆಯಲ್ಲಿಯೂ ಇದ್ದಾರೆ. ಉಪಾಧ್ಯಾಯರನ್ನು ಚುನಾವಣೆ ಮಾಡುವಾಗ ಸಾಧ್ಯವಾದಷ್ಟು ಕೂಡ ಶ್ರದ್ಧಾಭಕ್ತಿಯಿಂದ ಮಕ್ಕಳಿಗೆ ಉತ್ತಮವಾಗಿ ಪಾಠ ಹೇಳಿಕೊಡುವುದೇ ಜೀವನದ ಮುಖ್ಯ ಗುರಿ ಎಂಬ ಧ್ಯೇಯವನ್ನಿಟ್ಟುಕೊಂಡಿರುವವರನ್ನು ಚುನಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆ ಮಾಡಿ ಮುಂದಿನ ಪೀಳಿಗೆಯನ್ನು ಸುಸಂಸ್ಕೃತರನ್ನಾಗಿ ತಯಾರು ಮಾಡಬೇಕು. ಇಲ್ಲವೆ ಇದ್ದಪಕ್ಷದಲ್ಲಿ ಖಂಡಿತವಾಗಿ ತಾವು ಖರ್ಚು ಮಾಡತಕ್ಕ ಹಣ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಪ್ರೈಮರಿ ಶಾಲೆ ಬಗ್ಗೆ ಸಾಕಾದಷ್ಟು ಉತ್ತಮವಾದ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಉತ್ತಮವಾದ ಉಪಾಧ್ಯಾಯರಿದ್ದರೆ ಅಂತಹವರ ಬಗ್ಗೆ ಯಾರೂ ಏನೂ ಮಾತನಾಡುವುದಕ್ಕಾಗುವುದಿಲ್ಲ. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಾಗಲೀ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರಾಗಲೀ, ಕುವೆಂಪು ಅವರಾಗಲೀ ಅಂಥವರ ಬಗ್ಗೆ ಯಾರೂ ಚಕಾರ ಎತ್ತುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಕಮಿಟೆಡ್ ಟೀಚರ್ಸ್ ಎಂದು ಒರೆ ಹಚ್ಚುವುದು ಹೇಗೆ ?

ಶ್ರೀ ಟಿ. ಆರ್. ಶಾಮಣ್ಣ.—ಉಪಾಧ್ಯಾಯರಿಗೆ ಒಂದು ಬರವಣಿಗೆಯ ಟೆಸ್ಟ್ ಮಾಡಿ ಅವರ ಕೈಯಲ್ಲಿ ಕ್ಲಾಸ, ಹ್ಯಾಂಡ್ಲ್ ಮಾಡಿಸಿ ಪಾಠ ಹೇಗೆ ಹೇಳಿಕೊಡುತ್ತಾರೆ ಎಂಬುದನ್ನು ನೋಡಿ ಅವರಿಗೆ ಅರ್ಹತೆ ಇದೆಯೇ ಎಂಬುದನ್ನು ನೋಡಿ ನೇಮಕ ಮಾಡಬೇಕಾದುದು ಅವಶ್ಯಕವಾದುದು. ಇದೆಲ್ಲಾ ಸ್ವಲ್ಪ ಕಷ್ಟದ ಕೆಲಸವಾಗಬಹುದು. ನೀವು ಪ್ರೈಮರಿ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡದಿದ್ದರೆ, ತಳಪಾಯ ಸರಿಯಾಗಿಲ್ಲದಿದ್ದರೆ ಕಟ್ಟಡ ಯಾವ ರೀತಿ ಬಿದ್ದು ಹೋಗುತ್ತದೋ ಹಾಗಾಗುತ್ತದೆ. ಸ್ವಲ್ಪ ನಿಧಾನವಾದರೂ ಕೂಡ ಉತ್ತಮವಾದ ಉಪಾಧ್ಯಾಯರನ್ನು ನೇಮಕ ಮಾಡಿ. ಈಗ ಪ್ರೈಮರಿ ಶಾಲೆಯ ಉಪಾಧ್ಯಾಯರಿಗೆ ಬಹಳ ಕಡಿಮೆ ಸಂಬಳ ಬರುತ್ತಿದೆ. ಅವರಿಗೆ ಬೇಕಾಗಿದರೆ ಇನ್ನೂ ಹೆಚ್ಚಿನ ಸಂಬಳ ಕೊಟ್ಟರೂ ಚಿಂತೆಯಿಲ್ಲ, ಉತ್ತಮವಾದ ಪ್ರೈಮರಿ ಉಪಾಧ್ಯಾಯರನ್ನು ತಯಾರು ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಈ ಬಗ್ಗೆ ಪರಿಣತರ ಜೊತೆ ಕುಳಿತುಕೊಂಡು ಚರ್ಚೆ ಮಾಡಬೇಕು. ಈ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ಎಂದು ವಿನಯಪೂರ್ವವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರೈಮರಿ ಶಾಲೆ ಉಪಾಧ್ಯಾಯರು ಟಿ. ಸಿ. ಎಚ್. ಪರೀಕ್ಷೆ ಪಾಸ್ ಮಾಡಿರುತ್ತಾರೆ, ತರಬೇತಿ ಹೊಂದಿರುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಅಕಾಂಟೆನ್ಸಿ ಮೇಷ್ಟ್ರು. ಪಾಠ ಹೇಳಿಕೊಡುತ್ತೇನೆ. ಅಕಾಂಟೆನ್ಸಿ ಪಾಸಾದವರಿಗೆ ಒಂದು ಲೆಡ್ಜರ್ ಬರೆಯುವುದಕ್ಕೆ ಬರುವುದಿಲ್ಲ, ಪೋಸ್ಟಿಂಗ್ಸ್ ಮಾಡುವುದಕ್ಕೆ ಬರುವುದಿಲ್ಲ. ಬರೀ ಪರೀಕ್ಷೆ ಪಾಸ್ ಮಾಡಿದರೆ ಸಾಕಾಗುವುದಿಲ್ಲ. ಅರ್ಹತೆ ಬೇಕು. ಅರ್ಹತೆ ನೋಡಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಈ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವಿದ್ಯಾಭ್ಯಾಸ ಪದ್ಧತಿಯಲ್ಲಿ ಪದೇಪದೇ ಬದಲಾವಣೆ ಆಗದಿದ್ದರೆ ಉತ್ತಮ. ನಾನು ಹಳೇಕಾಲದ ಮೇಷ್ಟ್ರು. ಆಗ ಮಕ್ಕಳಿಗೆ ಬಾಲಬೋಧೆ, ನೀತಿಬೋಧೆ, ಉಕ್ತಲೇಖನ, ಗುಣಕಾರ, ಭಾಗಾಕಾರ, ಮಗ್ಗ

ಎಲ್ಲಾ ಇತ್ತು. ಈಗ ಅವೆಲ್ಲಾ ಸರ್ವನಾಶವಾಗಿ ಹೋಯಿತು. ದಯುವಿಟ್ಟು ಹಿಂದಿನ ಕಾಲದ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಏನಾದರೂ ಸಾಧ್ಯತೆ ಇದೆಯೆ ಈಗ ಎಂಬುದನ್ನು ನೋಡಿ. ಅನೇಕ ಉಪಾಧ್ಯಾಯರುಗಳು ಲೀವ್ ಚೀಟಿಗಳನ್ನು ಕಳಿಸುತ್ತಾರೆ. ದಯುವಿಟ್ಟು ಕೆಲವನ್ನು ತೆಗೆದುಕೊಂಡು ನೋಡಿ, ಅದರಲ್ಲಿ ನಾಲ್ಕು ಸೆಂಟನ್ಸ್ ಕರೆಕ್ಟಾಗಿ ಇದೆಯೇ ಎಂಬುದನ್ನು ನೋಡಿ. ನಾನು 38 ವರ್ಷದ ಕೆಳಗೆ ವಾಣಿಜ್ಯ ವಿದ್ಯಾಶಾಲೆಯನ್ನು ತೆರೆದಾಗ ವಿದ್ಯಾರ್ಥಿಗಳು ಟೈಪ್ ಮಾಡಿದಮೇಲೆ ಎಷ್ಟು ತಪ್ಪಿದೆ ಎಂಬುದನ್ನು ಹುಡುಕಬೇಕಾಗಿತ್ತು. ಈಗ ಎಷ್ಟು ಸರಿಯಾದ ಪದ ಇದೆ ಎಂಬುದನ್ನು ಹುಡುಕಬೇಕಾಗಿದೆ. ಹೀಗೆ ನಮ್ಮ ವಿದ್ಯಾಭ್ಯಾಸದ ಮಟ್ಟವಾಗಿದೆ ಆದ್ದರಿಂದ ತಾವು ದಯುವಿಟ್ಟು ಈ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಸ್ವಲ್ಪ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಕನ್ನಡ ಮೀಡಿಯಂ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ನಮ್ಮ ಮಕ್ಕಳು ಕನ್ನಡ ಕಲಿಯುವುದಿಲ್ಲ, ಇಂಗ್ಲೀಷ್ ಬರುವುದಿಲ್ಲ. ಹೀಗಾಗಿ ವಿದ್ಯೆ ಸರಿಯಾಗಿ ಬರುವುದಿಲ್ಲ.

ಆಮೇಲೆ, ಪ್ರೀ ಯೂನಿವರ್ಸಿಟಿ ಎಜುಕೇಷನ್ ಬಗ್ಗೆ ಹೇಳುವುದಾದರೆ, ಇದಕ್ಕೆ ೨೦೩ ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದಾರೆ. ಎಲ್ಲ ಜೂನಿಯರ್ ಕಾಲೇಜುಗಳಲ್ಲಿಯೂ ಏಕರೂಪವಾದ ಪಠ್ಯಕ್ರಮ ಇರುವುದು ಉತ್ತಮ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಪಠ್ಯ ಪುಸ್ತಕಗಳನ್ನು ಬರೆಸುವಾಗ ಸಾಧ್ಯವಾದಷ್ಟು ಉತ್ತಮವಾದ ಪುಸಕ್ತಗಳನ್ನು ಬರೆಸಬೇಕು. ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ ಲೆವಲ್‌ನಲ್ಲಿ ಒಳ್ಳೆಯ ಪಠ ಪುಸ್ತಕಗಳನ್ನು ಬರೆಸಿದ್ದೀರಿ. ಆದರೆ ಪ್ರೀ ಯೂನಿವರ್ಸಿಟಿಯ ಲೆವಲ್‌ನಲ್ಲಿ ಉತ್ತಮವಾದ ಪಠ್ಯಪುಸ್ತಕಗಳನ್ನು ಬರೆಸುವ ಬಗ್ಗೆ ಹೆಚ್ಚಿಗೆ ಗಮನ ಕೊಡದೆ ವಿದ್ಯಾಭ್ಯಾಸ ಪ್ರಗತಿಯಾಗುತ್ತಿಲ್ಲ. ಒಂದು ಕಾಲದಲ್ಲಿ ಸರ್ಕಾರ ಸಬ್ಸಿಡೈಸ್ಡ್ ಪೇಪರನ್ನು ತೆಗೆದುಕೊಂಡಿತ್ತು. ಈಗ ಅವನ್ನು ಏನುಮಾಡುತ್ತಾರೆಂದರೆ ೧½ ರೂಪಾಯಿ ಇರುವುದನ್ನು ೨-೧೦ ಎಂದು ರಬ್ಬರ್ ಸೀಲ್ ಹಾಕಿ ಮಾರುತ್ತಾರೆ. ಸಬ್ಸಿಡೈಸ್ಡ್ ಎಕ್ಸರ್‌ಸೈಜ್ ಬುಕ್‌ಗಳನ್ನು ಮಾರುತ್ತಾರೆ, ಇದರಿಂದಾಗಿ ಎಷ್ಟು ಲಕ್ಷ ರೂಪಾಯಿಗಳ ಪುಸಕ್ತ ಮಾರಾಟವಾಗದೆ ಹಾಗೆ ಉಳಿದಿದೆ ಎಂಬುದನ್ನು ವಿಚಾರಮಾಡಿ. ಪೇಪರ್‌ಗಳಲ್ಲಿ ಮತ್ತು ಎಕ್ಸರ್‌ಸೈಜ್ ಪುಸ್ತಕಗಳಲ್ಲಿ ಇಂಕು ಹಿಡಿಯುತ್ತದೆ, ಅದನ್ನು ಯಾರೂ ತೆಗೆದುಕೊಳ್ಳುತ್ತಿಲ್ಲ. ಈ ರೀತಿಯಾಗಿ ಎಷ್ಟು ಉಳಿದಿದೆ ಎಂಬುದನ್ನು ಸೇಲ್ಸ್ ಇಂಟರ್‌ನ್ಯಾಶನಲ್‌ನಲ್ಲಿ ವಿಚಾರಣೆ ಮಾಡಿ. ಅಲ್ಲಿ ಹಣವನ್ನು ಸಹ ದುರುಪಯೋಗ ಮಾಡುತ್ತಾರೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಇಂದು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ವಿದ್ಯಾಭ್ಯಾಸಕ್ಕಾಗಿ ಬೇಕಾದಷ್ಟು ಹಣ ಸಹಾಯ ಮಾಡುತ್ತಿದ್ದಾರೆ, ಮತ್ತು ಆ ಬಗ್ಗೆ ಅಧ್ಯಕ್ಷರು ಹೆಚ್ಚು ಶ್ರದ್ಧೆವಹಿಸತಕ್ಕವರು. ಆದರೆ ಫಲಿತಾಂಶದ ಅಂಕಿಅಂಶಗಳನ್ನು ನೋಡಿದರೆ, ಪ್ರೀಯೂನಿವರ್ಸಿಟಿ ಲೆವಲ್‌ನಲ್ಲಿ ಶೇಕಡ ೯ರಷ್ಟು, ಹೈಯರ್ ಎಜುಕೇಶನ್ ಲೆವಲ್‌ನಲ್ಲಿ ಸುಮಾರು ಶೇಕಡ ೬ರಷ್ಟು ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ಸುಮಾರು ಶೇಕಡ ೧೫ರಿಂದ ೨೦ರಷ್ಟು ತೇರ್ಗಡೆಯಾಗುತ್ತಿದ್ದಾರೆ. ಏತಕ್ಕೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಎಷ್ಟು ಹಣ ಖರ್ಚುಮಾಡಿದರೂ ಕೂಡ ಉತ್ತಮವಾದ ಫಲಿತಾಂಶ ಬರುತ್ತಿಲ್ಲ ಎಂದು ಯೋಚನೆ ಮಾಡಬೇಕೆಂದು ಹೇಳುತ್ತೇನೆ, ಹರಿಜನ ಗಿರಿಜನ, ಬಡವರು ಮತ್ತು ವೀಕರ್ ಸೆಕ್ಷನ್‌ಗಳು ಉದ್ಧಾರವಾಗಬೇಕಾದರೆ ಸರಿಯಾದಂತಹ ವಿದ್ಯಾವಂತರು ಆಗಲೇಬೇಕು. ಮಾನ್ಯ ವಿದ್ಯಾಮಂತ್ರಿಗಳು ಸರ್ಕಾರಕ್ಕೆ ಇಷ್ಟೊಂದು ಹಣ ಖರ್ಚಾದರೂ ಏಕೆ ವಿದ್ಯಾಭ್ಯಾಸ ಸರಿಯಾಗಿ ನಡೆಯುತ್ತಿಲ್ಲ, ಸಾಕಷ್ಟು ಪ್ರಮಾಣದಲ್ಲಿ ಉತ್ತಮವಾದ ವಿದ್ಯಾವಂತರು ಏಕೆ ಮುಂದೆ ಬರುತ್ತಿಲ್ಲ, ಈ ವಿದ್ಯಾಭ್ಯಾಸ ಕ್ರಮದಲ್ಲಿ ಏನು ಲೋಪ ಇದೆ ಎಂಬುದನ್ನು ನೋಡಿ ಸರಿಪಡಿಸಬೇಕೆಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಸಾಕಷ್ಟು ಶ್ರದ್ಧೆವಹಿಸಿ ಯೂನಿವರ್ಸಿಟಿಯ ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಒಳ್ಳೆಯ ಸದವಕಾಶ ದೊರೆತಿದೆ. ಕಾಮನ್ ಯೂನಿವರ್ಸಿಟಿ ಬಂದ ತಕ್ಷಣ ಗುಡ್ ಪ್ರಸಿಡೆಂಟ್ ಆಗುವಂತೆ, ಗುಡ್ ಡಿಸಿಪ್ಲೀನ್, ಗುಡ್‌ರಿಸರ್ಚ್ ವರ್ಕ್ ನಡೆಯುವಂತೆ ಕಾರ್ಯ ಕ್ರಮಗಳನ್ನು ಹಾಕಿಕೊಂಡರೆ ವಿದ್ಯಾಭ್ಯಾಸ ಚೆನ್ನಾಗಿ ನಡೆಯುವುದು ಮತ್ತು ಶಿಸ್ತಿನ ಬಗ್ಗೆ, ರೀಸರ್ಚ್ ಬಗ್ಗೆ ಸಾಕಷ್ಟು ಉತ್ತಮವಾದ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಪ್ರಾರಂಭದಲ್ಲಿ ಚೆನ್ನಾಗಿ ನಡೆಯಲಿ ಎಂದು ತಮಗೆ ಹೇಳುತ್ತೇನೆ, ಒಂದು ವಿಚಾರದಲ್ಲಿ ತಮ್ಮನ್ನು ಅಭಿನಂದನೆ ಮಾಡಬೇಕಾಗಿದೆ ಅದೇನೆಂದರೆ, ಡಾ. ನರಸಿಂಹಯ್ಯನವರು ತಮ್ಮನ್ನು ಕೇಳಲಿಲ್ಲ ಬೇರೆ ಯಾರನ್ನು ಕೇಳಲಿಲ್ಲ, ಹೀಗೆ ಯಾರನ್ನು ಕೇಳದೆ ಅಧಿಕಾರ ಸ್ಥಾನಕ್ಕೆ ಬಂದಿರುವುದು ನನಗೆ ಗೊತ್ತಿದೆ ಈ ಬಗ್ಗೆ ನಾನು ಅವರನ್ನು ಕೇಳಿದ್ದಕ್ಕೆ ಆ ಅಧಿಕಾರವನ್ನು ಕೊಟ್ಟರೆ ಕೊಡಲಿ, ಇಲ್ಲವಿದ್ದರೆ

ಬೇರೆ ಕಡೆ ಮಾಡೋಣ ಎಂದು ಹೇಳಿದರು. ಅವರು ೧೯೩೫ರಲ್ಲಿ ಹೊಸೂರಿನಿಂದ ಗೌರಿಬಿದನೂರಿಗೆ ಗಂಟು ಹೊತ್ತುಕೊಂಡು ಬಂದಂತಹ ಮನುಷ್ಯ. ನಾನು ಅವರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಸಹಾಯ ಮಾಡಿದೆ. ಅವರು ೧೯೩೫ರಿಂದ ನನಗೆ ಚೆನ್ನಾಗಿ ಗೊತ್ತು. ಇಂದು ಅವರಂತಹ ಮಾದರಿ ವಿದ್ಯಾಪರಿಣಿತರು ೧೦೦ಕ್ಕೆ ೧೦೦ ಜನರಾದರು ಆದರೆ ವಿದ್ಯಾಭ್ಯಾಸ ಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಮುಖ್ಯವಾಗಿ ಡಿಪ್ಲೊಮೇಟೆಡ್ ಟೀಚರ್ಸ್ ಬೇಕೆಂಬುದನ್ನು ನಾನು ಹೇಳಬಯಸುತ್ತೇನೆ.

ಇನ್ನು ಕಾಮರ್ಸ್ ಎಜುಕೇಶನ್ ಬಗ್ಗೆ ಹೇಳುವುದಾದರೆ, ಕಾಮರ್ಸ್ ಇನ್‌ಸ್ಟಿಟ್ಯೂಶನ್‌ಗಳಿಗೆ ಕನ್ನಡ ಟೈಪ್‌ರೈಟರ್‌ಗಳನ್ನು ಸರ್ಕಾರ ಯಾವ ಬೆಲೆಗೆ ಕೊಂಡುಕೊಳ್ಳುತ್ತದೋ ಅದೇ ಬೆಲೆಗೆ ಕೊಡಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಕನ್ನಡ ಟೈಪ್‌ರೈಟಿಂಗ್ ಕಲಿತಿರುವವರಿಗೆ ನೌಕರಿ ಸಿಗುವ ಹಾಗೆ ಮಾಡಬೇಕು. ಎಸ್ ಎಸ್.ಎಲ್.ಸಿ ಪಿ.ಯು.ಸಿಗಳಲ್ಲಿ ಇರುವ ಹಾಗೆ ಕಾಮನ್ ಕರೆಕ್ಷನ್ ಆಗುವಂತೆ ಏರ್ಪಾಡು ಮಾಡಬೇಕು ಏಕೆಂದರೆ ಈಗ ಮಾಡುತ್ತಿರುವ ಕರೆಕ್ಷನ್‌ಗಳಲ್ಲಿ ಅನೇಕ ಲೋಪದೋಷಗಳಾಗುತ್ತಿವೆ ಯೂನಿಫಾರ್ಮಿಟಿ ಇರುವುದಿಲ್ಲ. ಆದಕಾರಣ ದಯವಿಟ್ಟು ಕಾಮನ್ ಕರೆಕ್ಷನ್ ಆಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾಗಿ ಕಾಮರ್ಸ್ ಇನ್‌ಸ್ಟಿಟ್ಯೂಶನ್‌ಗಳಿಗೆ ರೆಕಗ್ನಿಶನ್ ಕೊಡುವಾಗ ಸಾಧ್ಯವಾದಷ್ಟುಮಟ್ಟಿಗೆ ಯೋಚನೆಮಾಡಿ ಸರಿಯಾದ ರೀತಿಯಲ್ಲಿ ಕೊಡಿ. ಏಕೆಂದರೆ ಇತ್ತೀಚೆಗೆ ಲೆಕ್ಕವಿಲ್ಲದಷ್ಟು ಇನ್‌ಸ್ಟಿಟ್ಯೂಶನ್‌ಗಳು ಬೆಳೆಯುತ್ತಿವೆ.

ಇನ್ನು ಟೆಕ್ನಿಕಲ್ ಎಜುಕೇಷನ್ ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶ ಇದೆ, ಒಳ್ಳೆಯ ಡೈರೆಕ್ಟರ್ ಇದ್ದಾರೆ. ಟೆಕ್ನಿಕಲ್ ಎಜುಕೇಶನ್ ಪಡೆದಂತಹವರು ಗಾರೆಯಲ್ಲಿ ಇಟ್ಟಿಗೆ ಕಟ್ಟುವ ಕೆಲಸವನ್ನು ಪ್ರಾಕ್ಟಿಕಲ್ ಆಗಿ ಮಾಡಿ ಮಾರ್ಕ್ಸ್ ತೆಗೆದುಕೊಂಡಿರುತ್ತಾರೆಂದು ಹೇಳುತ್ತಾರೆ ಹೀಗೆ ಇಂಜನಿಯರ್ ಆಗಿ ಅವನಿಗೆ ಕರಣೆ ಹಿಡಿಯುವುದಕ್ಕೆ ಬರದ ಹೋದರೆ ಅವನು ಎಂತಹ ಇಂಜನಿಯರ್ ಎಂದು ಯೋಚನೆ ಮಾಡಬೇಕಾಗುತ್ತದೆ, ಆದಕಾರಣ ಟೆಕ್ನಿಕಲ್ ಎಜುಕೇಶನ್‌ನಲ್ಲಿ ಪ್ರಾಕ್ಟಿಕಲ್ಸ್‌ಗೆ ಹೆಚ್ಚಿನ ಗಮನಕೊಡ ಬೇಕೆಂದು ಹೇಳಬಯಸುತ್ತೇನೆ. ಟಾಟಾ ಇನ್‌ಸ್ಟಿಟ್ಯೂಟ್ (ಇ ಇ. ಆಫ್ ಸೈನ್ಸ್) ಬಗ್ಗೆ ತಮಗೆ ನೇರವಾದ ಸಂಬಂಧ ಇಲ್ಲದೆ ಇದ್ದರೂ ಕೂಡ ಕೆಲವು ವಿಚಾರಗಳನ್ನು ಹೇಳಲಿಚ್ಛಿಸುತ್ತೇನೆ. ಅಲ್ಲಿರತಕ್ಕ ಡೈರಕ್ಟರಿಗೆ ಹತ್ತಾರು ಕೆಲಸಗಳಿರುತ್ತವೆ. ದೇವರನ್ನಾದರೂ ನೋಡಬಹುದು ಅವರನ್ನು ನೋಡುವುದಕ್ಕಾಗುವುದಿಲ್ಲ. ಅಲ್ಲಿ ಬೇಕಾದಷ್ಟು ಹಣ ದುರುಪಯೋಗವಾಗುತ್ತದೆ. ಆ ಸಂಸ್ಥೆಯ ಬಗ್ಗೆ ವಿಚಾರಣೆ ಮಾಡ ವುದಕ್ಕೆ ಒಂದು ದೊಡ್ಡ ಪಟ್ಟಿಯನ್ನು ಕಳುಹಿಸಿದ್ದಾರೆ, ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಒಂದು ಕಮಿಟಿ ಯನ್ನು ಏರ್ಪಾಡುಮಾಡಿ ಆ ಕಮಿಟಿಗೆ ಎಲ್ಲ ಆಡಳಿತವನ್ನು ವಹಿಸಿಕೊಟ್ಟಿದ್ದಾರೆ. ಆ ಕಮಿಟಿಯ ಛೇರ್ಮನ್ ರವರು ಆಂಧ್ರದವರು, ರಿಜಿಸ್ಟ್ರಾರ್ ಆಂಧ್ರದವರು ಜನ ಇದನ್ನು ನೋಡಿ ಬಯ್ಯುತ್ತಿದ್ದಾರೆ. ಆದುದರಿಂದ ಆದುದರಿಂದ ಇದರ ಬಗ್ಗೆ ತಾವು ಅಧಿಕಾರ ಮಂಡಲಿಯವರೊಡನಾಗಲಿ ಕೇಂದ್ರ ಸರ್ಕಾರದವರೊಡನಾಗಲಿ ಮಾತನಾಡಿ ಅಲ್ಲಿನ ಲೋಪದೋಷಗಳನ್ನು ತಿದ್ದಿ ಸರಿಪಡಿಸಬೇಕೆಂದು ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ವಿದ್ಯಾಭ್ಯಾಸ ಇಲಾಖೆಯು ತಮ್ಮ ಕಾಲದಲ್ಲಿ, ಒಳ್ಳೆಯ ಅಧಿಕಾರಿಗಳಿರತಕ್ಕ ಕಾಲದಲ್ಲಿ ಉತ್ತಮವಾದ ರೀತಿಯಲ್ಲಿ ನಡೆಯಲಿ ಉತ್ತಮವಾದ ಪ್ರಜೆಗಳಾಗಲು ಉತ್ತಮ ವಿದ್ಯಾಭ್ಯಾಸ ಅಗತ್ಯವಾಗಿ ಆಗಬೇಕು, ಎಲ್ಲಾ ವಿಚಾರಗಳಿಗಿಂತ ಮುಖ್ಯವಾದ ವಿಚಾರವೆಂದರೆ ವಿದ್ಯಾಭ್ಯಾಸ ಇದರ ಬಗ್ಗೆ ಸಾರ್ವಜನಿಕರು ತಂದೆತಾಯಿಗಳು, ವಿದ್ಯಾರ್ಥಿಗಳು ಅಧಿಕಾರಿಗಳು, ಮಂತ್ರಿಗಳು ಎಲ್ಲರೂ ಕೂಡ ಹೆಚ್ಚಿನ ಆಸಕ್ತಿವಹಿಸಬೇಕೆಂದು ಕೇಳಿಕೊಳ್ಳುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ)—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ವಿದ್ಯಾಮಂತ್ರಿ, ಗಳು ಮಂಡಿಸಿದ ಡಿಮ್ಯಾಂಡುಗಳನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ವಿದ್ಯಾ ಇಲಾಖೆಯ ವಿಷಯವಾಗಿ ಮಾತನಾಡುವಾಗ ಪ್ರಥಮದಲ್ಲಿ ನಮ್ಮ ಹಿರಿಕರು ವಿದ್ಯೆಗೆ ಕೊಟ್ಟಂತಹ ಮಹತ್ವವನ್ನು ನೆನಪಿಸಬೇಕಾಗುತ್ತದೆ. ಅವರು ಏನು ಹೇಳಿದ್ದಾರೆಂದರೆ ವಿದ್ಯಾಹೀನಂ ಪಶು ಸಮಾನಂ ಅಂದರೆ ವಿದ್ಯೆ ಇಲ್ಲದವನು ಪಶುವಿಗೆ ಸಮಾನ ಎಂದು. ಹಾಗಾದರೆ ವಿದ್ಯೆ ಕಲಿತವರು ಪಶುವಿಗಿಂತ ಉತ್ತಮ ರೀತಿಯಲ್ಲಿ ನಡೆಯಬೇಕು. ಈ ಸೂತ್ರವನ್ನು ಸೂಕ್ಷ್ಮದೃಷ್ಟಿಯಲ್ಲಿ ವಿಚಾರಮಾಡಿ ನೋಡುವು ದಾದರೆ ಸಾಮಾನ್ಯವಾಗಿ ವಿದ್ಯಾವಂತರು ಎನಿಸಿಕೊಂಡವರು ನಮ್ಮ ಸಮಾಜದಲ್ಲಿ ಹೇಗೆ ನಡೆದುಕೊಳ್ಳುತ್ತಿ ದ್ದಾರೆಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಕೆಲವು ಸಂದರ್ಭದಲ್ಲಿ, ನಾವು ವಿದ್ಯಾವಂತರು ಎಂದು ಹೇಳಿಕೊಂಡು ಹೆಮ್ಮೆಪಡುವುದಕ್ಕೆ ನಾಚಿಕೆಯಾಗುತ್ತದೆ. ಇದು ಏತಕೆ ಹೀಗಾಯಿತೆಂಬುದನ್ನು

ಸರಕಾರ ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಬೇಕು ಕೆಲವು ಸಂದರ್ಭಗಳಲ್ಲಿ ವಿದ್ಯಾವಂತರು ಮಾಡತಕ್ಕ ವ್ಯವಹಾರಗಳನ್ನು ನಾವು ಯೋಚನೆ ಮಾಡಿದರೆ ನಮ್ಮ ಸರ್ಕಾರದವರು ಏತಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ಎಲ್ಲಾ ದಿಕ್ಕುಗಳಲ್ಲಿಯೂ ಕಾಲೇಜುಗಳನ್ನು ಕಟ್ಟಬೇಕಿತ್ತು ಮತ್ತು ಉಚಿತ ಶಿಕ್ಷಣ ವನ್ನು ಏಕೆ ಕೊಡಬೇಕಿತ್ತು, ಏತಕ್ಕಾಗಿ ಈ ರೀತಿ ಹಣವನ್ನು ವೆಚ್ಚ ಮಾಡಬೇಕು ಎನ್ನುವ ಪ್ರಶ್ನೆಯನ್ನು ಕೇಳಬೇಕಾಗುತ್ತದೆ.

MR. VICE-CHAIRMAN (Sri K. R. S. Naidu in the Chair).—

ಈ ಸಂದರ್ಭದಲ್ಲಿ ನಾನು ನನ್ನ ತಾಲ್ಲೂಕಿನ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿರಾಜಪೇಟೆಯಲ್ಲಿ ಒಂದು ಜೂನಿಯರ್ ಕಾಲೇಜು ಇದೆ. ಆದರೆ, ಅಲ್ಲಿ ವಿಜ್ಞಾನ ವಿಭಾಗದಲ್ಲಿ ಪ್ರಾಕ್ಟಿಕಲ್ ಪರೀಕ್ಷೆಗೆ ಯಾವ ವ್ಯವಸ್ಥೆಯೂ ಇಲ್ಲ. ಅಲ್ಲಿನ ವಿದ್ಯಾರ್ಥಿಗಳು ಅಲ್ಲಿಂದ ಹದಿಮೂರು ಮೈಲಿ ದೂರದಲ್ಲಿರುವ ಪೊನ್ನಂಪೇಟೆಗೆ ಹೋಗುವ ಪರಿಸ್ಥಿತಿ ಇದೆ, ಆದುದರಿಂದ, ವೀರಾಜಪೇಟೆ ಯಲ್ಲಿರುವ ಜೂನಿಯರ್ ಕಾಲೇಜಿನಲ್ಲಿ ಈ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

4-30 P M

ಇನ್ನು ಅನೇಕ ಸಂದರ್ಭಗಳಲ್ಲಿ ಉಪಾಧ್ಯಾಯರನ್ನು ವರ್ಗ ಮಾಡುವುದು ಉಂಟು. ಸಾಮಾನ್ಯ ವಾಗಿ ಉಪಾಧ್ಯಾಯರು ಇವರನ್ನು ವರ್ಗ ಮಾಡಿದ ತಾಲ್ಲೂಕಿಗೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ವರ್ಗಮಾಡಿದ ಊರುಗಳಲ್ಲಿ ವಸತಿ ಸೌಕರ್ಯವಿಲ್ಲವೆಂಬುದೇ ಇದಕ್ಕೆ ಒಂದು ಪ್ರಮುಖ ಕಾರಣವಾಗಿದೆ. ಆದುದರಿಂದ, ಉನ್ನತ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳು ಇರುವ ಕಡೆ ಕನಿಷ್ಠ ೪-೫ ವಸತಿ ಗಳನ್ನು ಕಟ್ಟಿಸಿದರೆ, ಉಪಾಧ್ಯಾಯರುಗಳು ವರ್ಗಮಾಡಿದ ಕೂಡಲೇ ಅಲ್ಲಿಗೆ ಹೋಗಿ, ಕೆಲಸಕ್ಕೆ ಹಾಜರಾಗಲು ಇಚ್ಛೆಪಡುತ್ತಾರೆ. ಆದುದರಿಂದ ಉನ್ನತ ಪ್ರಾಥಮಿಕ ಶಾಲೆಗಳುಮತ್ತು ಪ್ರೌಢಶಾಲೆಗಳು ಇರುವ ಕಡೆ ವಸತಿಗಳನ್ನು ನಿರ್ಮಿಸಿ, ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡುವುದು ಅವಶ್ಯ ವಾಗಿದೆ ಎಂದು ಹೇಳಬಯಸುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಇಲ್ಲ ಈ ರೀತಿ ಊಟದ ವ್ಯವಸ್ಥೆ ಇಲ್ಲದೇ ಇರುವುದರಿಂದ ಮಕ್ಕಳ ಹಾಜರಾತಿ ಬಹಳ ಕಡಿಮೆಯಾಗಿದೆ. ಆದುದರಿಂದ ಪ್ರಾಥಮಿಕ ಶಾಲೆ ಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕಲೆ ಮತ್ತು ಸಂಸ್ಕೃತಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕಳೆದ ತಿಂಗಳು ೨೯ ಮತ್ತು ೨೬ನೇ ತಾರೀಖುಗಳಂದು ವೀರಾಜಪೇಟೆಯಲ್ಲಿ ಜಿಲ್ಲಾ ಮಟ್ಟದ ಕಲೆ ಮತ್ತು ಸಂಸ್ಕೃತಿಯ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು ಮಾನ್ಯ ಮಂತ್ರಿಗಳಾದ ಯಾಹ್ಯ ಮತ್ತು ಗುಂಡೂರಾವ್ ಅವರಲ್ಲಿ ಭಾಗವಹಿಸಿದ್ದರು. ಸುಮಾರು ನಲವತ್ತು ವಿವಿಧ ಕಲೆ ಗಳನ್ನು ಅಲ್ಲಿ ಪ್ರದರ್ಶಿಸಲಾಯಿತು. ಇಡೀ ಕೊಡಗಿನಲ್ಲಿರುವ ಎಲ್ಲ ವರ್ಗದವರಿಗೂ ಕೂಡ ಕಲೆ ಬಗ್ಗೆ ಹೆಚ್ಚು ಪ್ರೀತಿ ವಿಶ್ವಾಸವಿದೆ ಈಗ ಪಟ್ಟಣಗಳಲ್ಲಿ ಚಲನಚಿತ್ರ ತೆಗೆದವರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರತಿ ಚಲನಚಿತ್ರಕ್ಕೆ ೫೦ ಸಾವಿರ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ ಆದರೆ, ಗ್ರಾಮಾಂತರ ಪ್ರದೇಶಗಳ ಕಲೆ ಮತ್ತು ಸಂಸ್ಕೃತಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹಣ ಸಹಾಯ ಕೊಡುತ್ತಾ ಇಲ್ಲ. ಆದುದರಿಂದ. ಗ್ರಾಮಗಳ ಕಲೆ ಮತ್ತು ಸಂಸ್ಕೃತಿಯನ್ನು ಉತ್ತಮಪಡಿಸಿ, ಅಭಿವೃದ್ಧಿಗೊಳಿಸಬೇಕಾದರೆ. ಚಲನಚಿತ್ರ ನಿರ್ಮಾಪಕರಿಗೆ ಯಾವ ರೀತಿ ಧನಸಹಾಯ ವನ್ನು ಕೊಡುತ್ತಿದ್ದಾರೆ ಅದೇ ರೀತಿ ಇವರಿಗೂ ಧನ ಸಹಾಯ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹೆಚ್ಚು ನುರಿತ ಬರಹಗಾರರಿದ್ದಾರೆ. ಅಂಥವರ ಕಲೆ ಮತ್ತು ಸಂಸ್ಕೃತಿ ಯನ್ನು ಜೀವಂತಗೊಳಿಸಬೇಕಾದರೆ ಅವರಿಗೆ ಹೆಚ್ಚು ಹೆಚ್ಚು ಧನಸಹಾಯ ನೀಡಬೇಕಾಗುತ್ತದೆ. ಉದಾಹಾರಣೆಗೆ ಹೇಳುವುದಾದರೆ, ನಮ್ಮ ಕೊಡಗಿನಲ್ಲಿ ಅಪ್ಪಚ್ಚ ಎಂಬ ಒಬ್ಬರು ಕವಿ ಇದ್ದರು. ಅವರು ಕೊಡವ ಭಾಷೆಯಲ್ಲಿ ಕವನಗಳನ್ನು ಬಹಳ ಚೆನ್ನಾಗಿ ಬರೆದಿದ್ದಾರೆ. ಅವರ ಕಲೆ ಮತ್ತು ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಬಹಳ ಶ್ರಮಪಡುತ್ತಿದ್ದಾರೆ. ಸೊಳ್ಳೆಗಳು ಹೇಗೆ ಉಂಟಾಗುತ್ತವೆ. ಹೇಗೆ ಓದುತ್ತವೆ ಎನ್ನುವುದನ್ನು ಕೊಡವ ಭಾಷೆಯಲ್ಲಿ ಶಾಂಭವನುಬಾಜಿಯವರು ಕವನ ರೂಪದಲ್ಲಿ ಬರೆದು ಮುದ್ರಿಸಿದಾರೆ.

ಶ್ರೀ ಕೋಣಂದೂರು ಲಿಂಗಪ್ಪ—ಅವರು ಬರೆದಿರುವ ಕವನವನ್ನು ಸ್ವಲ ಓದಿ.

ಶ್ರೀ ಜಿ. ಕೆ. ಸುಬ್ಬಯ್ಯ—ಅದು ಒಂದು ದೊಡ್ಡ ಗ್ರಂಥ. ಅದನ್ನು ಓದುವುದಕ್ಕೆ ಈಗ ಕಾಲಾವಕಾಶವಿಲ್ಲ, ಆದರೂ ಕೂಡ ಒಂದು ಪಂಕ್ತಿಯನ್ನು ಓದುತ್ತೇನೆ. ಅದರಲ್ಲಿ ಅವರು ಸೊಳ್ಳೆಯನ್ನು ಕುರಿತು ''ಸೊಳ್ಳೆಕ್ಕಾ ಸೊಳ್ಳೆಕ್ಕಾ ಎಲ್ಲಿಂದ ಬಂದೆಯು ಸೊಳ್ಳೆಕ್ಕಾ ಎಂದು ಹೇಳಿದ್ದಾರೆ. ಆದುದರಿಂದ, ನಾವು ಇಂಥಾ ಕಲೆಗಳಿಗೆ ಪ್ರೋತ್ಸಾಹ ಕೊಡದಿದ್ದರೆ, ಇನ್ನು ಕೆಲವೇ ದಿನಗಳಲ್ಲಿ ಇವೆಲ್ಲಾ ಮಾಯವಾಗುತ್ತವೆ - ನಾಶವಾಗುವ ಸಂದರ್ಭಬರುತ್ತದೆ, ಈಗಿನ ವಿದ್ಯಾವಂತರು ಏನು ತಿಳಿದುಕೊಂಡಿದ್ದಾರೆ ಎಂದರೆ, ಕಲೆಯನ್ನು ಅಭ್ಯಸಿಸುವುದು ನಮ್ಮ ಸಂಸ್ಕೃತಿಗೆ ವಿರೋಧವೆಂದು ತಿಳಿದುಕೊಂಡಿದ್ದಾರೆ. ಆದರೆ, ಸಂಸ್ಕೃತಿ ಮತ್ತು ಕಲೆಗಳನ್ನು ತಿಳಿಯದೆ ಅಭ್ಯಸಿಸದೆ ದೊಡ್ಡ ವಿದ್ಯಾವಂತನಾಗುವುದು ಅಸಾಧ್ಯ ಎಂದು ಅವರು ತಿಳಿದುಕೊಂಡಿಲ್ಲ. ಸರ್ಕಾರದವರು ಕಲೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ತಮ್ಮೆಗೆಲ್ಲರಿಗೂ ಗೊತ್ತಿರುವಂತೆ, ಕರ್ನಾಟಕದ ಕೊಡಗು, ಬೆಳಗಾವಿ, ಧಾರವಾಡ ಮತ್ತು ಬೀದರೆ ಈ ನಾಲ್ಕು ಜಿಲ್ಲೆಗಳಿಂದ ಸೈನ್ಯದಲ್ಲಿ ಕೆಲಸ ಮಾಡಲಿಕ್ಕೆ ಅನೇಕ ಜನರು ಹೋಗಿದ್ದಾರೆ. ಈಗಲೂ ಹೋಗುತ್ತಿದ್ದಾರೆ ಈಗ ಇವರಿಗೆ ಸೈನಿಕರ ಶಾಲೆಗಳು ಇಲ್ಲ ಅವರಲ್ಲೂ ನಮ್ಮ ಕಡೆಯಿಂದ ಹೋಗುವ ಮಕ್ಕಳಿಗೆ ಬಿಜಾಪುರದ ಸೈನಿಕ ಶಾಲೆಯಲ್ಲಿ ಸೀಟುಗಳ ಸಿಗುತ್ತಾ ಇಲ್ಲ. ಆದುದರಿಂದ, ಈ ನಾಲ್ಕು ಜಿಲ್ಲೆಗಳಲ್ಲೂ ಸೆಂಟ್ರಲ್ ಸ್ಕೂಲ್‌ಗಳೆಂದು ಮಾಡಿ, ಸೈನಿಕರ ಶಾಲೆಗಳಲ್ಲಿ ಯಾವ ರೀತಿಯ ಪಾಠ ಪ್ರವಚನಗಳನ್ನು ಹೇಳಿ ಇದ್ದಾರೆ, ಅದೇ ರೀತಿಯ ಪಾಠ ಪ್ರವಚನಗಳನ್ನು ಇಲ್ಲೂ ಹೇಳಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಕೊಡುತ್ತಾ ಇದರಿಂದ ಹೆಚ್ಚು ಹೆಚ್ಚು ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ. ಆದುದರಿಂದ, ಸರ್ಕಾರದವರು, ಹೆಚ್ಚು ಜನರು ಸೈನ್ಯಕ್ಕೆ ಸೇರಿ ಕೆಲಸ ಮಾಡಲು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಈ ಶಾಲೆಗಳನ್ನು ತೆರೆಯಬೇಕೆಂದು ಹೇಳುತ್ತೇನೆ. ಕುಶಾಲ ನಗರದಲ್ಲಿ ಹಿಂದೆ ಒಂದು ಸೈನಿಕ ಶಾಲೆಯಾಗಬೇಕೆಂದು ನಾವು ಪ್ರಯತ್ನ ಪಟ್ಟೆವು. ಆದರೆ ಅದಿನ್ನೂ ಆಗಿಲ್ಲ. ಈಗಲಾದರೂ ಕುಶಾಲನಗರದಲ್ಲಿ ಒಂದು ಸೆಂಟ್ರಲ್ ಶಾಲೆಯನ್ನು ತೆರೆಯಲು ಸಾಧ್ಯತೆ ಇರುವುದರಿಂದ, ಸರ್ಕಾರದವರು ಬಗ್ಗೆ ಈ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ವಿರಾಜಪೇಟೆಯಲ್ಲಿ ಎನ್.ಸಿ.ಸಿ ಕೇವಲ ಹುಡುಗರಿಗೆ ಮಾತ್ರ ಇದೆ. ಅಲ್ಲಿನ ಹುಡುಗಿಯರಿಗೆ ಈ ಒಂದು ಸೌಲಭ್ಯವಿಲ್ಲ. ಆದುದರಿಂದ, ಸರಕಾರದವರು ಅದನ್ನು ಮಂಜೂರು ಮಾಡಬೇಕೆಂದು ಹೇಳುತ್ತೇನೆ.

ವಿದ್ಯಾ ಇಲಾಖೆಯಲ್ಲಿ ಹೆಚ್ಚು ಹೆಚ್ಚು ಚಟುವಟಿಕೆಗಳನ್ನು ನಾವು ದಿನೇ ದಿನೇ ಕಾಣಬೇಕಾದ ಅವಶ್ಯಕತೆ ಇರುತ್ತದೆ. ಆದರೆ ಅನೇಕ ಸಂದರ್ಭಗಳಲ್ಲಿ ಚಟುವಟಿಕೆಗಳು ಕಡಿಮೆಯಾಗುತ್ತಿರುವುದು ನಮಗೆ ಬಹಳ ಬೇಜಾರು ತರುವ ವಿಷಯವಾಗಿದೆ. ವಿದ್ಯಾ ಇಲಾಖೆಯಲ್ಲಿರತಕ್ಕ ಕೆಲವು ಅಧಿಕಾರಿಗಳಿಗೆ, ಸರ್ಕಾರದ ಅಧಿಕಾರ ಏನು ಇದೆ ಎಂಬುದನ್ನೂ ಕೂಡ ತಿಳಿದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಇದಕ್ಕೆ ನಡೆದ ಒಂದು ಘಟನೆಯನ್ನು ಉದಾಹರಣೆಯಾಗಿ ಹೇಳುತ್ತೇನೆ. ಯಾರೋ ಒಬ್ಬರು ಒಂದು ಕಡೆ ಕಾಲೇಜು ಪ್ರಾರಂಭಮಾಡಲು ಸರಕಾರಕ್ಕೆ ಅರ್ಜಿ ಹಾಕಿಕೊಂಡರು. ಆಗ ಒಬ್ಬ ಅಧಿಕಾರಿ, ಇದರ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಮಾತ್ರ ಅಧಿಕಾರ ಇದೆ, ಸರ್ಕಾರಕ್ಕೆ ಈ ಒಂದು ಅಧಿಕಾರವಿಲ್ಲ ಎಂದು ಹೇಳಿದರು ಮತ್ತು ನಮಗೆ ಆ ಅಧಿಕಾರ ಹೇಗೆ ಬರುತ್ತದೆ ಎಂದು ಪ್ರಶ್ನೆ ಹಾಕುವ ಅಧಿಕಾರಿಗಳೂ ವಿದ್ಯಾ ಇಲಾಖೆಯಲ್ಲಿ ಇದ್ದಾರೆ. ಇಂಥಾದ್ದು ಆಗಬಾರದು ಎಂದು ನಾನು ತಿಳಿಸಬಯಸುತ್ತೇನೆ.

ವಿದ್ಯಾವಂತ ಅಧಿಕಾರಿಗಳು, ವಿದ್ಯೆಕಲಿಯದವರನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ರೀತಿಯ ಪ್ರಸಂಗಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಬೇಕು. ನಮ್ಮ ಮಕ್ಕಳಿಗೆ ಉತ್ತಮ ಮಟ್ಟದ ವಿದ್ಯೆ ಕೊಟ್ಟು, ತನ್ಮೂಲಕ ದೇಶದ ಪುರೋಭಿವೃದ್ಧಿಯನ್ನು ಸಾಧಿಸಲು ವಿದ್ಯಾ ಇಲಾಖೆ ಶ್ರಮಿಸಲಿ ಎಂದು ಹಾರೈಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಬಹಳ ಯೋಗ್ಯರು; ಅವರ ಬಗ್ಗೆ ನನಗೆ ಗೌರವ ಇದೆ. ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಮತ್ತು ದೈಹಿಕ ಶಿಕ್ಷಣಗಳ ಬಗ್ಗೆ ಹಲವಾರು ಮಾತುಗಳನ್ನು ತುಲನಾತ್ಮಕ

ದೃಷ್ಟಿಯಿಂದ, ಅಂಕಿ-ಸಂಖ್ಯೆಗಳನ್ನು ಜೋಡಿಸಿ, ಮಾನ್ಯ ಮಂತ್ರಿಗಳು ತಮ್ಮ ಇಲಾಖಾ ವರದಿಯಲ್ಲಿ ಬರೆದಿದ್ದಾರೆ. ಇದನ್ನು ಬಾಹ್ಯ ದೃಷ್ಟಿಯಿಂದ ನೋಡಿದಾಗ, ಮಾನ್ಯ ಮಂತ್ರಿಗಳು ಬಹಳ ಪ್ರಯತ್ನ ಪಟ್ಟಿದ್ದಾರೆ; ಇಂಥಾ ಶಿಕ್ಷಣ ಮಂತ್ರಿಗಳು ದೊರೆಯುವುದು ದುರ್ಲಭ ಎನ್ನುವಂತಾಗುತ್ತದೆ. ಆದರೆ ಇದರ, ಒಳಹೊಕ್ಕು ನೋಡಿದಾಗ ನಮ್ಮ ರಾಜ್ಯದ ಜನತೆಗೆ ಎಂಥಾ ಶಿಕ್ಷಣ ದೊರಕಬೇಕು; ಅದು ಹೇಗೆ ದೊರಕಬೇಕು; ಇದರ ಬಗ್ಗೆ ಮಾಡಿರುವ ಪ್ರಯತ್ನಗಳಾವುವು ಎಂಬುದೊಂದೂ ಸಿಕ್ಕುವುದಿಲ್ಲ. ಲೋಕೋಪಯೋಗಿ ಇಲಾಖೆಯುವರ ಕಾರ್ಯಕ್ರಮಗಳನ್ನು ನಾವು ನೋಡುತ್ತಿದ್ದೇವೆ. ಅವರು ಸಾವಿರಾರು ಸೇತುವೆಗಳನ್ನು ಕಟ್ಟುತ್ತಿದ್ದಾರೆ. ಅವುಗಳಲ್ಲಿ ನೂರಾರು ಬಿದ್ದರೂ ಅಡ್ಡಿಯಿಲ್ಲ ! ಆದರೆ, ದೇಶದ ಭವಿಷ್ಯದ ದೃಷ್ಟಿಯಲ್ಲಿ ಮೂರು ಖಾತೆಗಳು ಅತಿ ಮಹತ್ವವಿದೆ. ಒಂದು, ಭಾರತ ಸರ್ಕಾರದಲ್ಲಿರತಕ್ಕಂಥ ಸೈನ್ಯ ಖಾತೆ. ಆಮೇಲೆ, ನಮ್ಮ ಸರ್ಕಾರದಲ್ಲಿ ಆಂತರಿಕವಾಗಿ ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡತಕ್ಕ ಖಾತೆ; ಮತ್ತು ಎರಡನೆಯದಾಗಿ, ಆಹಾರ ಖಾತೆ. 3ನೇದು ಶಿಕ್ಷಣ ಖಾತೆ. ಇನ್ನುಳಿದ ಖಾತೆಗಳು ಇದ್ದರೂ ಸರ್ಕಾರ ನಡೆಯುತ್ತದೆ; ಇಲ್ಲದಿದ್ದರೂ ನಡೆಯುತ್ತದೆ. ಸರ್ಕಾರದ ವರದಿ ನೋಡಿದಾಗ, ಇಷ್ಟು ಹುಡುಗರು ಹೆಚ್ಚಾಗಿದ್ದಾರೆ; ಇಷ್ಟು ರೂಮುಗಳನ್ನು ಹೆಚ್ಚು ಮಾಡಿದ್ದೇವೆ ಎಂದು ಹಲವಾರು ಅಂಕಿ-ಸಂಖ್ಯೆಗಳನ್ನು ಕೊಟ್ಟಿರುವುದು ಕಂಡುಬರುತ್ತದೆ. ಆದರೆ, ನನ್ನ ದೃಷ್ಟಿಯಲ್ಲಿ ನಮ್ಮ ಭಾರತದ ಸ್ವಾತಂತ್ರ್ಯವನ್ನು ಯಾರು ಗಳಿಸಿಕೊಟ್ಟರು: ಹೇಗೆ ಗಳಿಸಿಕೊಟ್ಟರು ಎನ್ನುವುದು ಮುಖ್ಯ. ನೀವು, ನಿಮ್ಮ ಹೆಸರನ್ನು ಬರೆದುಕೊಂಡು, ಇದಕ್ಕೆ ನಾವೇ ಕಾರಣರು ಎಂದು ಒಂದು ಪುಸ್ತಕವನ್ನು ನೀವೇ ಬರೆದುಕೊಳ್ಳಬಹುದು. ಆದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರಲು ಮಹಾತ್ಮಾ ಗಾಂಧಿಯವರು ಕಾರಣ. ಜವಹರಲಾಲ್ ನೆಹರೂ ಅವರು, ವಲ್ಲಭಾಯಿ ಪಟೇಲ್, ಅವರು, ಡಾ. ರಾಜೇಂದ್ರ ಪ್ರಸಾದ್ ಅವರು, ಇನ್ನೂ ಮುಂತಾದ ಹಲವಾರು ದೇಶಭಕ್ತರು ತ್ಯಾಗ ಮಾಡಿದ ಫಲವಾಗಿ ನಮಗೆ ಸ್ವಾತಂತ್ರ್ಯ ಬಂದಿದೆ. ಅಷ್ಟೇ ಅಲ್ಲದೆ, ಅನೇಕ ಸ್ವಾತಂತ್ರ್ಯ ವೀರ ಯೋಧರ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಇದಕ್ಕಾಗಿ ಫಾಸಿ ಶಿಕ್ಷೆಯನ್ನು ಅನುಭವಿಸಿದ್ದಾರೆ.

ಇವೊತ್ತು ಈ ದೇಶ ಅಭಿವೃದ್ಧಿಯಾಗಬೇಕಾದರೆ ಇರಿಗೇಷನ್ ಹೆಚ್ಚಿಗೆಯಾಗಬೇಕು ಎಂದು ನಾನು ಯಾವಾಗಲೂ ಮಾತನಾಡುತ್ತಿರುತ್ತೇನೆ. ಆದರೆ ಇವೊತ್ತು ನಾನು ಅದನ್ನು ಹೇಳುವುದಿಲ್ಲ, ಇವೊತ್ತು ನಮ್ಮ ಕನ್ನಡ ನಾಡಿನಲ್ಲಿ ಇರಿಗೇಷನ್ ಆಗದೇ ಇದ್ದರೆ ಬೇರೆ ಭಾಗದಲ್ಲ ಪ್ರವಾಸ ಮಾಡಿ ಉತ್ತರ ಹಿಂದೂಸ್ತಾನದ ಕಡೆಯಿಂದ ಗೋದಿಯನ್ನು ತಂದು ತಿಂದು ಬದುಕಬಹುದು. ಇವೊತ್ತು ನಮಗೆ ಸರಿಯಾದ ಶಿಕ್ಷಣ ಸಿಕ್ಕದೇ ಹೋದರೆ ನಮ್ಮ ತಲೆಯಲ್ಲಿ ಶಿಕ್ಷಣ ವ್ಯವಸ್ಥೆ ತಪ್ಪಾದರೆ ಅದನ್ನು ಯಾವ ಒಂದು ಡಿಪಾರ್ಟ್‌ಮೆಂಟಿನಿಂದಲೂ ಕೂಡ ಟ್ರಾನ್ಸ್‌ಫರ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಇವೊತ್ತು ಆಹಾರ ಧಾನ್ಯ ಗೋಧಿ ಇಲ್ಲ ಎಂದರೆ ಅಮೆರಿಕಾದಿಂದ ತರಬಹುದು, ಬ್ಲಡ್ ಇಲ್ಲ ಎಂದರೆ ಬ್ಲಡ್ ಬ್ಯಾಂಕಿನಿಂದ ಬ್ಲಡ್ ತರಬಹುದು, ಆದರೆ ಈ ಶಿಕ್ಷಣವನ್ನು ತರಲಿಕ್ಕೆ ಸಾಧ್ಯವಾಗುವುದಿಲ್ಲ, ಇವೊತ್ತಿನ ದಿವಸ ಈ ಶಿಕ್ಷಣ ದೃಷ್ಟಿಯನ್ನು ನೋಡುವುದಾದರೆ, ಇದು ಅತ್ಯಂತ ವಿರೋಧ ಮಾಡತಕ್ಕ ಡಿಮ್ಯಾಂಡ್ ಆಗಿದೆ, ಆದುದರಿಂದ ಇದನ್ನು ನಾನು ತಾತ್ವಿಕವಾಗಿ ವಿರೋಧ ಮಾಡುತ್ತಿದ್ದೇನೆ. ಈ ಒಂದು ಶಿಕ್ಷಣ ಖಾತೆಯಲ್ಲಿ ಯಾರೇ ವಿದ್ಯಾಸಚಿವರು ಬಂದರೂ ಕೂಡ ಉಪಯುಕ್ತವಾಗುವುದಿಲ್ಲ. ಇವೊತ್ತು ಇದಕ್ಕೆ ಒಂದು ಉದಾಹರಣೆ ಹೇಳಬೇಕು. ಎಂದರೆ ಡಾಕ್ಟರು ಯಾರಾದರೆ ಏನು ಮುಖ್ಯವಾಗಿ ಕಾಯಿಲೆ ಗುಣವಾಗಬೇಕು. ಇವೊತ್ತು ಬೇಕಾದಷ್ಟು ಡಿಗ್ರಿ ತೆಗೆದುಕೊಂಡಿರುತ್ತಾರೆ ಆದರೆ ಅವರ ಕೈಯಿಂದ ಕಾಯಿಲೆ ಗುಣವಾಗುವುದಿಲ್ಲ, ಅದೇ ಒಬ್ಬ ಹಳ್ಳಿಯ ಡಾಕ್ಟರ ಬಳಿ ಔಷಧ ತೆಗೆದುಕೊಂಡರೆ ಕಾಯಿಲೆ ಗುಣವಾಗುತ್ತದೆ. ಆದ್ದರಿಂದ ಹಿತವಂ ತೋರುವವರು ಆತ್ಮಬಂಧು ಎಂದು ಹೇಳುತ್ತೇನೆ. ಯಾರು ಮಗುವನ್ನು ಹಡೆಯುತ್ತಾರೆ ಅವರು ತಾಯಿಯಾಗುತ್ತಾರೆ, ಇನ್ನು ಇವೊತ್ತು ನಮ್ಮ ಬದುಕು ಹೇಗಿದೆ ಎಂದರೆ ನಮ್ಮ ಪಾಲಿಗೆ ಯಾರು ಇದ್ದಾರೆ ಎಂದರೆ ಎಸ್.ಎಸ್.ಎಲ್ ಸಿ. ಆದಂತ ಹುಡುಗರು ಯಾವ ಎಂ, ಎಲ್. ಎ. ಬೆನ್ನು ಹತ್ತಿದರೆ ಕೆಲಸ ಸಿಕ್ಕುತ್ತದೆ ಎಂದು ನೋಡುತ್ತಿದ್ದಾರೆ. ಇವೊತ್ತು ಹುಡುಗರು ಏನು ಹೇಳುತ್ತಾರೆ ಎಂದರೆ ನಿಮಗೆ ಒಂದು ಕೆಲಸ ಕೊಡಿಸಲು ಸಾಧ್ಯವಾಗುವುದಿಲ್ಲ ಯಾಕೆ ನಮ್ಮ ಎಂ.ಎಲ್.ಎ. ಆಗಿದ್ದೀರಿ ಅನ್ನುತ್ತಾರೆ. ನಾವು ನಮ್ಮ ಪಾಲಿನ ಕರ್ತವ್ಯವನ್ನು ಚೆನ್ನಾಗಿ ಇವೊತ್ತಿನ ದಿವಸ ಯೋಚನೆ ಮಾಡಿ ನೋಡಬೇಕಾದ ಸಂದರ್ಭ ಬಂದಿದೆ. ಈಗ ಇಲ್ಲಿ ಏನಾಗಿದೆ

ಎಂದರೆ ಆ ಪಾರ್ಟಿ ಜನರು ಹೊಗಳುವುದು ಈ ಪಾರ್ಟಿ ಜನರು ಟೀಕಿಸುವುದು ನಡೆಯುತ್ತಾ ಇದೆ. ಇದನ್ನು ಬಿಟ್ಟು ಎರಡು ಕಡೆಯವರು ಸೇರಿ ಇವೊತ್ತಿನ ದಿವಸ ಹುಡುಗರಿಗೆ ಒಳ್ಳೆಯ ಶಿಕ್ಷಣ ಸಿಕ್ಕುತ್ತಿದೆಯೋ ಇಲ್ಲವೇ, ನಮ್ಮ ಮಕ್ಕಳ ದೃಷ್ಟಿಯಿಂದ ಒಳ್ಳೆಯದು ಆಗುತ್ತದೆಯೋ, ಇಲ್ಲವೇ ಎಂದು ನೋಡಬೇಕಾಗಿದೆ. ಆದುದರಿಂದ ಆ ಕಡೆ ಪಾರ್ಟಿಯವರು, ಈ ಕಡೆ ಪಾರ್ಟಿಯವರು ಅಧ್ಯಕ್ಷರು ಎಲ್ಲರೂ ಸೇರಿ ಒಮ್ಮೆ ವಿಚಾರ ಮಾಡಬೇಕು ಎಂದು ಹೇಳುತ್ತೇನೆ. ಇವತ್ತು ನಾವು ಒಳ್ಳೆಯ ಶಿಕ್ಷಣ ಕೊಟ್ಟಿಲ್ಲ ಎಂದು ಟೀಕೆ ಮಾಡಿ ಪಾರಾಗುವುದಕ್ಕಿಂತ ಎಂತಹ ಶಿಕ್ಷಣ ಸಿಕ್ಕಿದರೆ ಜನರ ಅಭ್ಯುದಯವಾಗುತ್ತದೆ ಎಂದು ನೋಡಬೇಕು, ಮಾನ್ಯ ಮಂತ್ರಿಗಳು ನಮ್ಮ ಸಲಹೆಗಳನ್ನ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತಾ, ಇಲ್ಲ, ನಾವು Selection ಮಂದಿಯಲ್ಲ Election ಮಂದಿ, ತಾವು ಎಲೆಕ್ಷನ್ ಮಂದಿಯವರು ಹೇಳಿದ್ದನ್ನು ಬರೆದುಕೊಂಡರೆ ಏನೂ ಆಗುವುದಿಲ್ಲ, ತಾವು ಇದರ ಬಗ್ಗೆ ಡಿ.ಸಿ. ಪಾವಟೆಯವರನ್ನು ಕೆ. ವಿ. ಪುಟ್ಟಪ್ಪನವರನ್ನು ಕೇಳಿ ಈ ಶಿಕ್ಷಣ ರಾಜಕೀಯದಿಂದ ಬಂದಿಲ್ಲ, ಋಷಿ ಮೂಲದಿಂದ ಬಂದದ್ದು. ಇವೊತ್ತು ಹುಡುಗರಿಗೆ, ವಿದ್ಯಾಸಂಸ್ಥೆಗಳಲ್ಲಿ ಸರಿಯಾದಂತಹ ಶಿಕ್ಷಣ ದೊರೆಯುತ್ತಿಲ್ಲ, ಇವೊತ್ತು ಹುಡುಗರು ಏನೋ ಎಸ್. ಎಸ್. ಎಲ್. ಸಿ. ಪಾಸುಮಾಡಿಕೊಂಡು ಬಂದು ಎಂ. ಎಲ್. ಎ. ಮಿನಿಸ್ಟರುಗಳು ಕಾಲು ಹಿಡಿದು ನೌಕರಿ ಕೊಡಿಸಬೇಕೆಂದು ಕೇಳತಕ್ಕದ್ದು ನೋಡುತ್ತಿದ್ದೇವೆ. ಇವೊತ್ತು ಈ ರೀತಿ ಅಲೆದಾಡತಕ್ಕಂತಹವರಿಗೆ ನೌಕರಿ ದೊರಕಿಸತಕ್ಕ ಒಂದೇ ಉದ್ದೇಶವಾಗಿದೆ ಇವೂ ಅಲ್ಲದೆ ಎಂ.ಬಿ.ಬಿ.ಎಸ್. ಪಾಸಾದ ತಕ್ಷಣ ಅವರು ಗವರ್ನ್‌ಮೆಂಟ್ ಡಾಕ್ಟರು ಆಗಬೇಕು ಎಂದು ಹೇಳುತ್ತಾರೆ. ಬಿ.ಎ. ಎಲ್.ಎಲ್.ಬಿ. ಓದಿದವರು ಗವರ್ನಮೆಂಟ್ ಪ್ಲೀಡರ್ ಆಗಬೇಕು ಎಂದು ಹೇಳುತ್ತಾರೆ. ಹೇಗೋ ಅಂತೂ ಒಂದು ಸರ್ಕಾರ ಕೆಲಸ ಸಿಕ್ಕಿದರೆ ಅವರ ತಂದೆತಾಯಿಗಳು ಒಂದು ಹೆಣ್ಣು ನೋಡಿ ಮದುವೆ ಮಾಡಿಬಿಡುತ್ತಾರೆ. ಇನ್ನು ಪ್ರೈವೇಟ್ ಸಂಸ್ಥೆಗಳನ್ನು ನಡೆಸಿ ಎಂದು ಹೇಳಿದರೆ, ಇವೊತ್ತು ಪ್ರೈವೇಟ್ ಸಂಸ್ಥೆ ನಡೆಸಿದರೆ ಅಲ್ಲಿ ಯಾರು ಬರುವುದಿಲ್ಲ, ಮಿನಿಸ್ಟರು ಏನಾದರೂ ನಡೆಸಿದರೆ ಒಂದು ಇಪ್ಪತ್ತು ಹುಡುಗರು ಬರಬಹುದು. ಇನ್ನು ಕೆಲವು ಕಡೆ ಏನಾಗಿದೆ ಎಂದರೆ ಹುಡುಗರಿಗೆ ಪುಸ್ತಕ ಕೊಟ್ಟು ಕಾಪಿ ಮಾಡು ಎಂದು ಹೇಳಿದರು ಅವರಿಗೆ ಕಾಪಿ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಮಾನ್ಯಮಂತ್ರಿಗಳು ನಾವು ಏನೊಂದು ಹತ್ತಾರು ಸಲಹೆಗಳನ್ನು ಕೊಡುತ್ತೇವೆ. ಅದನ್ನು ತೆಗೆದುಕೊಳ್ಳಬೇಕು, ನಮ್ಮ ಸಜೆಷನ್‌ನಿಂದ ಏನೂ ಆಗುವುದಿಲ್ಲ, ತಾವು ಕವಿಗಳಾದ ಕೆ. ವಿ. ಪುಟ್ಟಪ್ಪನವರನ್ನು ಕೇಳಬೇಕು. ತಾವು ಅನುಭವೀ ಶಿಕ್ಷಣ ತಜ್ಞರು ಇದೀರಿ, ತಾವು ತಮ್ಮ ಅಂತರಾತ್ಮ ಹೇಳುವ ಹಾಗೆ, ಒಳ್ಳೆಯ ಪ್ರಾಮಾಣಿಕತೆಯಿಂದ ಮಹಾತ್ಮ ಗಾಂಧಿಯವರನ್ನು ನೆನಸಿಕೊಂಡು ಉತ್ತರ ಕೊಡಬೇಕು. ಇವೊತ್ತು ಈ ರಿಪೋರ್ಟ್‌ನಲ್ಲಿ ಅನೇಕ ಅಂಕಿಸಂಖ್ಯೆಗಳು ತುಂಬಿಕೊಂಡಿವೆ, ಇವೊತ್ತು ಈ ಹುದ್ದೆಗಳನ್ನು ನೋಡಿದರೆ ಬೇಕಾದಷ್ಟು ಇವೆ. ಇವೊತ್ತು ಟೀಚರ್‌್ಸ ಏನಾಗಿದ್ದಾರೆ, ನಮ್ಮ ದೇಶದಲ್ಲಿ ಏನು ನಡೆಯುತ್ತಿದೆ, ಬಿಗಿನಿಂಗ್ ಆಫ್ ದಿ ಡೆಮಾಕ್ರಸಿ ಏನಾಗಿದೆ ಅದನ್ನು ನೋಡಬೇಕಾಗಿದೆ. ಇವೊತ್ತಿನ ದಿವಸ ನಿಮ್ಮ ಡೈರೆಕ್ಟರು, ನಿಮ್ಮ ಸೆಕ್ರೆಟರಿಯವರು ನಿಮ್ಮ ಕೈಯಲ್ಲಿ ಇದ್ದಾರೆ ಇವೊತ್ತು ಡೈರೆಕ್ಟರು ಏನೋ ಒಂದು ವಿಸಿಟ್ ಮಾಡಬೇಕು ಎಂದು ಹೇಳುತ್ತಾರೆ, ಆದರಂತೆ ಕೆಳಗಿನ ಅಧಿಕಾರಿಗಳು ವಿಸಿಟ್ ಮಾಡುತ್ತಾರೆ, ಅಷ್ಟೇ ಹೊರತು ಕೆಳಗಿನ ಅಧಿಕಾರಿಗಳ ಬಗ್ಗೆ ಹೇಳಬೇಕಾದರೆ ಯಾರ ಕೈಯ್ಯಲ್ಲಿ ಯಾರು ಇಲ್ಲ, ತಮ್ಮ ಕೈ ಕೆಳಗೆ ಮಾತ್ರ ತಮ್ಮ ಸೆಕ್ರೆಟರಿಗಳು, ಡೈರೆಕ್ಟರುಗಳು ಸಿಕ್ಕುತ್ತಾರೆ. ಆದುದರಿಂದ ಇವೊತ್ತು ಇದರ ಮೂಲ ತಳಹದಿಗೆ ಹೋಗಿ ನೋಡಬೇಕಾಗಿದೆಯೋ ಹೊರತು ಅದನ್ನು ಬಿಟ್ಟು ಸುಮ್ಮನೆ ಯಾರನ್ನು ಟೀಕೆ ಮಾಡಿದರು ಈ ಪ್ರಶ್ನೆ ಬಗೆಹರಿಯುವುದಿಲ್ಲ. ಇವೊತ್ತು ರೋಗಿಗಳಿಗೆ ಸರಿಯಾದ ಔಷಧ ಕೊಟ್ಟರೆ ಕಾಯಿಲೆ ವಾಸಿಯಾಗುತ್ತದೆ, ಸುಮ್ಮನೆ ಅದನ್ನು ಬಿಟ್ಟು ಸರಿಯಾದ ಔಷಧಿ ಇಲ್ಲ ಎಂದು ಅಲಿಗೇಷನ್ ಮಾಡಿಕೊಂಡು ಹೋದರೆ ಅದು ಬಗೆಹರಿಯುವುದಿಲ್ಲ. ಇನ್ನು ವಿಜಾಪುರ ಜೈಲಿನಲ್ಲಿ ನಡೆದದ್ದು ಹೇಳಬೇಕು ಎಂದರೆ 1930ರಲ್ಲಿ ಜೈಲಿನ ಡಾಕ್ಟರರು ಎಲ್ಲ ರೋಗಗಳಿಗೂ ಒಂದೇ ತರದ ಮುಲಾಮು ಹಚ್ಚುತ್ತಿದ್ದರು. ಇಂಥವರು ಪಡೆದ ಶಿಕ್ಷಣ ನೋಡಿ ದುಃಖವಾಯಿತು. ಇವೊತ್ತು ಮಾನ್ಯ ಚನ್ನಬಸಪ್ಪನವರು ಇಲ್ಲಿ ಇದ್ದಾರೆ ನಾನು ಇವರಿಗೆ ಹೇಳುವುದು ಏನೆಂದರೆ ತಾವು ಇಲ್ಲಿ ವಿಧಾನಸೌಧ ನೋಡುತ್ತಿದ್ದೀರಿ, ಇವೊತ್ತು ತಾವು ಯಾವುದೇ ಒಂದು ಪ್ಲಾನ್ ಮಾಡಿ ಸರಿಯಾಗಿ ಸಿಮೆಂಟ್ ಹಾಕದೇ ಇದ್ದರೆ, ಸರಿಯಾದ ಫೌಂಡೇಷನ್ ಹಾಕದೇ ಇದ್ದರೆ ಆ ಬಿಲ್ಡಿಂಗ್ ಉಳಿಯುವುದಿಲ್ಲ.

ಇವೊತ್ತು, ಇದೇ ರೀತಿ ಮಕ್ಕಳ ಜನನವಾದ ಕೂಡಲೇ ಯಾವ ಒಂದು ಪೌಷ್ಟಿಕ ಆಹಾರ ಹಾಕಿದರೂ ಸರಿ ಆಗುವುದಿಲ್ಲ. ಅದಕ್ಕೆ ತಾಯಿ ಹಾಲು ಮುಖ್ಯ ಇರುತ್ತದೆ, ಹಾಗೆ ಈ ಪ್ರೈಮರಿ ಶಿಕ್ಷಣ ನಂತರ ಮಾಧ್ಯಮಿಕ ಶಿಕ್ಷಣ. ಕಾಲೇಜು ಶಿಕ್ಷಣ ತದನಂತರ. ಆದುದರಿಂದ ತಾವು ಪ್ರಾಥಮಿಕ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ. ಇನ್ನು ನಮ್ಮ ಹುಡುಗರು ಏನು ಹೇಳುತ್ತಾರೆ ಎಂದರೆ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದರೆ ಸಾಕು, ನಮ್ಮಲ್ಲಿ ಬಂದು ತಾವು ನೌಕರಿ ಕೊಡಿಸುತ್ತೀರೋ ಅಥವಾ ನಾವು ಬಾವಿಗೆ ಬೀಳೋಣವೋ, ನೀವು ಏತಕ್ಕೆ ಎಂ.ಎಲ್.ಎ. ಗಳಾಗಿದ್ದೀರಾ ಎಂದು ನಮ್ಮ ಮೇಲೆ ಚಾರ್ಜ್ ಮಾಡುತ್ತಾರೆ. ನಾನು ಬೊಂಬಾಯಿ ಎಂ.ಎಲ್.ಎ. ಆಗಿದಾಗ ನಾನು ಒಂದು ಕಡೆ ಹೋಗಿಲ್ಲ, ಈಗ ನಮ್ಮ ಮನೆಯಲ್ಲಿ ಏನಾಗಿದೆ ಎಂದರೆ ನಮ್ಮ ಮನೆಗೆ ನೌಕರಿ ಕೊಡಿಸಿರಿ ಎಂದು ಬರುವವರ ಸಂಖ್ಯೆ ಜಾಸ್ತಿಯಾಗುತ್ತದೆ. ಇವನ್ನು ನೋಡಿ ನನ್ನ ಧರ್ಮಪತ್ನಿಯವರು ನೌಕರಿ ಸಲುವಾಗಿ ಎಡತಾಕುವ ಹುಡುಗರನ್ನು ನೋಡಿ ನಿಮಗೆ ಈ ಹುಡುಗರಿಗೆ ಕಲ್ಯಾಣ ಮಾಡುವುದು ಆಗದಿದ್ದರೆ MLA ಬಿಡರಿ ಅಂತಾ ಅನ್ನುತ್ತಿರುವರು. ಅವರಿಗೆ ಈ ದಡ್ಡ ಹುಡುಗರಿಗಾಗಿ MLA ಬಿಡಲಾರೆ. ನಿಮ್ಮೆಲ್ಲರನ್ನೂ ಮನೆಯನ್ನೆ ಬಿಡುವೆ ಅಂತಾ ಹೇಳಿರುವೆ. ಇವತ್ತು ನೀವು ನಮ್ಮ ಕಡೆ ಅಪ್ಪರ್ ಕೃಷ್ಣಾ ಯೋಜನೆಯನ್ನು ಮಾಡಿ ಕೊಟ್ಟಿಲ್ಲ. ಇವತ್ತು ಜನರಿಗೆ ಆಹಾರವಿಲ್ಲ. ಮೇಲಾಗಿ ಇಂಥಹ ಶಿಕ್ಷಣ ಪಡೆದ ನಿರುದ್ಯೋಗಿಗಳು. ನಾನು ಭಾರತೀಯ ಸಂಸ್ಕೃತಿಯನ್ನು ಓದಿದ್ದೇನೆ. ಶ್ರೀರಾಮಚಂದ್ರನ ಚರಿತ್ರೆ ಸತ್ಯ ಹರಿಶ್ಚಂದ್ರನ ಚರಿತ್ರೆ ಓದಿದ್ದೇನೆ. ನಮ್ಮ ಸ್ನೇಹಿತರೊಬ್ಬರು ಝಾನ್ಸಿ ರಾಣಿ ಕಿತ್ತೂರು ಚೆನ್ನಮ್ಮನ ಬಗ್ಗೆ ಹೇಳಿದರು. ಮತ್ತೆ ರಾಮ ಮೋಹನ ರಾವ್, ಬಾಲ ಗಂಗಾಧರ್ ತಿಲಕ್‌ರವರ ಚರಿತ್ರೆಯನ್ನು ಓದಿದ್ದೇವೆ. ಮಹಾತ್ಮಾ ಗಾಂಧೀಜಿಯವರು ಸಣ್ಣವರು ಇದ್ದಾಗ ಅವರು ಶಿಕ್ಷಣ ಪಡೆದದ್ದು ಅವರ ತಾಯಿಯಿಂದ, ಇವತ್ತು ನಾವು ಶಿಕ್ಷಣವನ್ನು ಶಿಕ್ಷಕರಿಂದ ಪಡೆಯಬಹುದು. ಆದರೆ ಇವತ್ತು ನಮ್ಮ ಇಂದಿನ ವಿದ್ಯಾಭ್ಯಾಸ ಕ್ರಮ ಒಂದು ಲಂಗುಲಗಾಮು ಇಲ್ಲದೆ ನಡೆಯುತ್ತಿರುವುದಕ್ಕೆ ಕಾರಣವೇನು ? ಇವತ್ತಿನ ಪುಸ್ತಕಗಳಲ್ಲಿ ಏನೂ ಇಲ್ಲವೇ ಇಲ್ಲ. ಅದನ್ನು ಓದಿದಂಥ ಹುಡುಗರಿಗೆ ಒಂದು ಅಪ್ಲಿಕೇಷನ್ ಬರೆಯುವುದಕ್ಕೂ ಬರುವುದಿಲ್ಲ. ಅವನು ಬಿ. ಎ. ಪಾಸ್ ಆಗಿರುತ್ತಾನೆ. ಅಂಥವನು ಸಹ ತಂದೆಗೇ ಒಂದು ಅಪ್ಲಿಕೇಷನ್‌ನ್ನು ಕನ್ನಡದಲ್ಲಿ ಬರೆದುಕೊಡು ಎಂದು ಕೇಳುತ್ತಾನೆ. ಆದರೆ ಹಿಂದಿನ ಶಿಕ್ಷಣ ಕ್ರಮ ಹೇಗಿತ್ತು ಎಂದು ನಾವು ನೋಡುವುದಾದರೆ ನಮ್ಮ ಡಾ. ಅಂಬೇಡ್ಕರ್‌ರವರಿಗೆ ಒಂದು ಉತ್ತಮವಾದ ಶಿಕ್ಷಣ ದೊರೆತಿದ್ದರಿಂದ ಅವರು ಭಾರತದ ರಾಜ್ಯಾಂಗ ಘಟನೆಯನ್ನು ಬರೆದಿಡುವುದಕ್ಕೆ ಸಾಧ್ಯವಾಯಿತು. ಅವರು ಪಂಡಿತ ನೆಹರೂರವರನ್ನು ಕೇಳಿ ಬರೆಯಲಿಲ್ಲ. ಅವರು ಬಹಳ ದೊಡ್ಡ ಮನುಷ್ಯರು, ಅಂಥ ಒಂದು ಒಳ್ಳೆಯ ವಿದ್ಯಾಭ್ಯಾಸದಿಂದ ಭಾರತದ ರಾಜ್ಯಾಂಗ ಘಟನೆಯನ್ನು ಬರೆದಿಡುವುದಕ್ಕೆ ಸಾಧ್ಯವಾಯಿತು. ಆದರೆ ಇವತ್ತು ನಾವು ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಟೀಕೆ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ ಅಥವಾ ಇವತ್ತು ಸರ್ಕಾರದವರನ್ನು ದೂರುವುದರಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ಹಿಂದೆ ಬ್ರಿಟೀಷರು ಇದ್ದ ಕಾಲದಲ್ಲಿ ಅವರು ಒಂದು ಕಾರಕೂನನ್ನು ತಯಾರು ಮಾಡುವುದಕ್ಕಾಗಿ ಒಂದು ವಿದ್ಯಾಭ್ಯಾಸ ಕ್ರಮವನ್ನು ಪ್ರಾರಂಭ ಮಾಡಿದರು. ಅದು ಸರಿಯಾದ ಕ್ರಮವಲ್ಲ. ಇವತ್ತು ನಮ್ಮ ಹುಡುಗರಿಗೆ ಒಳ್ಳೆಯ ವಿದ್ಯಾಭ್ಯಾಸ ಕ್ರಮವನ್ನು ಕೊಡುವುದಕ್ಕಾಗಿ ನೀವು ಎಷ್ಟು ಬೇಕಾದರೂ ಟ್ಯಾಕ್ಸ್ ಹಾಕಿ ನಾವು ಬೇಡವೆಂದು ಹೇಳುವುದಿಲ್ಲ. ಮಕ್ಕಳಿಗೆ ಒಂದು ಒಳ್ಳೆಯ ವಿದ್ಯೆಯನ್ನು ಕೊಡುವುದಕ್ಕಾಗಿ ತಾವು ಎಂಥಾ ಕಾರ್ಯಕ್ರಮವನ್ನಾದರೂ ತೆಗೆದುಕೊಳ್ಳಿ. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ನಾನು ಇಡೀ ಭಾರತ ದೇಶವನ್ನೆಲ್ಲಾ ಸುತ್ತಾಡಿ ನೋಡಿದ್ದೇನೆ. ಮಾರ್ವಾಡಿಗಳ ಒಬ್ಬರ ಹೆಸರೂ ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ನಲ್ಲಿ ಇರುವುದಿಲ್ಲ. ಅದಕ್ಕೆ ಕಾರಣ ಅವರಲ್ಲಿ ದುಡಿದು ತಿನ್ನತಕ್ಕಂಥ ಒಂದು ಯೋಗ್ಯತೆ ಇದೆ. ಇವತ್ತು ಒಂದು ಹೊತ್ತಿಗೆ ಊಟ ಸಿಕ್ಕಲ್ಲಿ ಏನಾದರೂ ಕೆಲಸ ಮಾಡೋಣ ರಾತ್ರಿಯ ಊಟ ಹೇಗೋ ಆಗುತ್ತದೆಂದು ಅವರು ಕಷ್ಟಪಟ್ಟು ಒಂದು ಕೆಲಸವನ್ನು ನಿಷ್ಠೆಯಿಂದ ಮಾಡಿ, ಸ್ವತಃ ಉದ್ಯೋಗವನ್ನು ಹುಡುಕಿಕೊಂಡು ಮಾಡುತ್ತಾರೆ. ಅವರಲ್ಲಿ ಒಂದು ಅಂಥ ಉತ್ತಮ ವಿದ್ಯೆ ಇರುವುದರಿಂದ ಆ ರೀತಿ ಮಾಡಲು ಸಾಧ್ಯತೆ ಇದೆ. ಈಗ ಒಬ್ಬ ಎಸ್.ಎಸ್.ಎಲ್.ಸಿ. ಯಾದರೆ ಸಾಕು ಅವನಿಗೆ ಹೆಣ್ಣು ಕೊಡುತ್ತಾರೆ, ಹಣ ಕೊಡುತ್ತಾರೆ ಆದರಿಂದ ಅವನ ಜೀವನ ಹೇಗೋ ನಡೆಯುತ್ತದೆ, ನಾನು ಮಾತನಾಡುವಾಗ ನಮ್ಮ ವಿಜಾಪುರದ ಬಗ್ಗೆ ಮಾತ್ರ ಮಾತನಾಡಲು

ಇಚ್ಛೆಪಡುತ್ತೇನೆ. ನಮ್ಮಲ್ಲಿ ಏನಾಗಿದೆಯೆಂದರೆ ಅತ್ಯಂತ ಬಡತನವಿರುವುದರಿಂದ, ಅವರಿಗೆ ಸರಿಯಾದ ವಿದ್ಯಾಭ್ಯಾಸದ ಸೌಕರ್ಯವಿರುವುದಿಲ್ಲ ಅವರಿಗೆ ಪ್ರತಿ ದಿವಸವೂ ದೂರದ ಊರಿನಿಂದ ಬಸ್‌ನಲ್ಲಿ ಊಟ ಬರಬೇಕಾಗುತ್ತದೆ. ಮತ್ತೆ ಅವರಿಗೆ ಸರಿಯಾಗಿ ಪುಸ್ತಕಗಳು ದೊರೆಯುವುದಿಲ್ಲ. ಅದು ದೊರೆತರೂ 7–8 ಹುಡುಗರು ಸೇರಿ ಓದಬೇಕಾಗುತ್ತದೆ. ಹೇಗೋ ಎಸ್.ಎಸ್.ಎಲ್.ಸಿ. ಪಾಸ್ ಮಾಡುತ್ತಾರೆ. ನಮ್ಮಲ್ಲಿ 35 ಪರ್ಸೆಂಟ್ ಅದು ಮಿನಿಮಂಗಿಂತ ಕಡಿಮೆ ಸಂಖ್ಯೆಯಲ್ಲಿ ಪಾಸಾಗುತ್ತಾರೆ. ಪಾಸಾದ ನಂತರ ಕೆಲವರಿಗೆ ಇಂಟರ್ ವ್ಯೂ ಬರುತ್ತದೆ. ಅದು ಎಲ್ಲರಿಗೂ ಬರುವುದಿಲ್ಲ. ಕೆಲಸ ಸಿಗುವ ಮಾತಂತೂ ಬೇರೆ. ಇಂಟರ್ ವ್ಯೂನಲ್ಲಿ ಸೆಲೆಕ್ಟ್ ಆಗುವುದಿಲ್ಲ. ಆದುದರಿಂದ ಅವರಿಗೆ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಹರಿಜನರ ಬಗ್ಗೆ ನನಗೆ ಪ್ರೀತಿ ವಿಶ್ವಾಸವಿದೆ ಆದರೆ ಒಂದು ವಿಷಯದಲ್ಲಿ ಮಾತ್ರ ನಾನು ವಿರುದ್ಧವಾಗಿ ಮಾತನಾಡಬೇಕಾಗಿದೆ. ನಾನು ಮಹಾತ್ಮಾ ಗಾಂಧೀಜಿಯವರೊಡನೆ ಓಡಾಡಿರುವುದರಿಂದ ಅವರು ಹೇಳಿರತಕ್ಕಂಥ ಮಾತುಕತೆಗಳು ನನಗೆ ನೆನಪಿದೆ. ಇವತ್ತು ನೀವು ಬರೀ ಹರಿಜನರಿಗೆ 18 ಪರ್ಸೆಂಟ್ ರಿಜರ್ವೇಷನ್ ಕೊಡಬೇಕು ಎನ್ನುತಕ್ಕಂಥ ದೃಷ್ಟಿಯಿಂದ ಯೋಗ್ಯರಲ್ಲದವರನ್ನು ಶಿಕ್ಷಕರನ್ನಾಗಿ ನೇಮಕ ಮಾಡಬೇಡಿ ಅವರಿಗೆ ಸರಿಯಾದ ಟ್ರೈನಿಂಗ್ ಕೊಟ್ಟು ಪ್ರೈಮರಿ ಶಿಕ್ಷಕ ಕೆಲಸಕ್ಕೆ ನೇಮಿಸಿ ಎಂದು ಹೇಳುತ್ತೇನೆ. ನಮ್ಮ ಸ್ನೇಹಿತರೊಬ್ಬರು ಸೈನಿಕ ಶಿಕ್ಷಣ ಶಾಲೆ ಬಿಜಾಪುರದಲ್ಲಿ ಇರುವಂತೆ ಕೂರ್ಗ್‌ನಲ್ಲಿ ಒಂದು ಇರುವುದು ಒಳ್ಳೆಯದೆಂದು ಹೇಳಿದರು. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಬ್ರಾಹ್ಮಣರ ಬಗ್ಗೆ ಹೇಳುತ್ತಿಲ್ಲ. ಜಾತಿ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸದೆ ಯೋಗ್ಯತೆಯ ಮೇಲೆ ಯಾರು ಅಂಥ ಯೋಗ್ಯರು ಇದ್ದಾರೆ ಅಂಥವರಿಗೆ ಇವತ್ತು ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ರಿಜರ್ವೇಷನ್ ಇರಲಿ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತು ಡಾ. ಅಂಬೇಡ್ಕರ್‌ರವರು ಉತ್ತಮವಾದ ಶಿಕ್ಷಣವನ್ನು ಪಡೆದಿದ್ದರಿಂದಲೇ ಅವರು ಭಾರತದ ರಾಜ್ಯಾಂಗ ಘಟನೆಯನ್ನು ಬರೆಯುವುದಕ್ಕೆ ಸಾಧ್ಯವಾಯಿತು. ಅವರು ಆ ರೀತಿ ಉತ್ತಮವಾದ ಶಿಕ್ಷಣವನ್ನು ಪಡೆಯದಿದ್ದರೆ ಆ ರೀತಿ ಬರೆಯಲು ಸಾಧ್ಯವಾಗುವುದಿಲ್ಲ. ಶಿಕ್ಷಕರಿಗೆ ಪ್ರಾಪಂಚಿಕ ಸಮಸ್ಯೆ ಇರಬಾರದು. ಅವನ ಹೆಂಡರ ಮಕ್ಕಳಿಗೆ ತೊಂದರೆ ಇರದಿದ್ದರೆ ಮಾತ್ರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯ. ಶಿಕ್ಷಕರ ಕಲ್ಯಾಣದ ಬಗ್ಗೆ ತಾವು ಸೂಕ್ತ ಗಮನವನ್ನು ತೆಗೆದುಕೊಳ್ಳಬೇಕು ತಾವು ನನಗೆ ಇದರ ಬಗ್ಗೆ ಹೆಚ್ಚು ಮಾತನಾಡಲು ಅವಕಾಶ ಕೊಡಬೇಕು. ನಾನು ಈ ಸಭೆಗೆ ಸೀನಿಯರ್ ಮೋಸ್ಟ್ ಮೆಂಬರ್ ಆದುದರಿಂದ ಎಲ್ಲರಿಗೂ 20 ನಿಮಿಷ ಕೊಟ್ಟರೆ ನನಗೆ 43 ನಿಮಿಷಗಳ ಕಾಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈ ವಿದ್ಯಾಭ್ಯಾಸದ ಡಿಮ್ಯಾಂಡ್ ಬಹಳ ಮುಖ್ಯವಾದಂಥ ಬೇಡಿಕೆಯಾಗಿದೆ ಇದರ ಬಗ್ಗೆ ನನಗೆ ಇನ್ನು ಸ್ವಲ್ಪ ಹೊತ್ತು ಮಾತನಾಡಲು ಅವಕಾಶ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ವಿದ್ಯಾಭ್ಯಾಸವನ್ನು ಸರಿಪಡಿಸುವುದು ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರೊಬ್ಬರಿಂದಲೇ ಸಾಧ್ಯವಿಲ್ಲ ಅದು ಕ್ಯಾಬಿನೆಟ್‌ನಲ್ಲಿ ಇರತಕ್ಕಂಥ ಎಲ್ಲ ಎಲ್ಲಾ ಮಂತ್ರಿಗಳ ಜವಾಬ್ದಾರಿಯಾಗಿದೆ. ಇವತ್ತು ನೀವು ಬೇಕಾದರೆ ಸೇತುವೆಗಳನ್ನು ಕಟ್ಟಿಸುವುದನ್ನಾದರೂ ಬೇಕಾದರೆ ನಿಲ್ಲಿಸಿ ಒಳ್ಳೆಯ ವಿದ್ಯಾಭ್ಯಾಸವನ್ನು ಒದಗಿಸಲು ಹೆಚ್ಚು ಹಣವನ್ನು ವಿನಿಯೋಗಿಸುವುದಾದರೆ ನಮ್ಮ ಅಡ್ಡಿ ಏನೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಇವತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು, ಶ್ರೀ ಮಲ್ಲಿಕಾರ್ಜುನ ಸ್ವಾಮಿ ಯಂಥವರು ಹಾಗೂ ಶ್ರೀ ಚನ್ನಬಸಪ್ಪನವರಂಥವರಿಗೆ ಒಳ್ಳೆಯ ವಿದ್ಯಾ ಸಿಕ್ಕಿರುವುದರಿಂದ ನೀವು ಇಲ್ಲಿ ಬಂದು ಕುಳಿತುಕೊಂಡು ಚನ್ನಾಗಿ ಮಾತನಾಡುತ್ತಿದ್ದೀರಿ ಒಳ್ಳೆಯ ಸ್ಥಾನ ಮಾನದಲ್ಲಿ ಇದ್ದೀರಿ. ಇಲ್ಲದಿದ್ದರೆ ಸಾಧ್ಯವಾಗುತ್ತಿತ್ತೋ ಎಂದು ತಾವು ಆಲೋಚನೆ ಮಾಡಬೇಕು. ನಾನು ಹೇಳುವುದೇನೆಂದರೆ ಬಿ ಎ. ಎಂ.ಎ ವರೆಗೆ ಕಲಿತವರಿಗೆ ಶಿಕ್ಷಕರಿಗೆ ಒಳ್ಳೆಯ ಶಿಕ್ಷಣವನ್ನು ಕೊಟ್ಟು ಅವರನ್ನು ಪ್ರೈಮರಿ ಸ್ಕೂಲ್ ಟೀಚರ್ಸ್‌ನ್ನಾಗಿ ನೇಮಕ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಹೆಚ್ಚು ವಿಷಯವನ್ನು ನಾನು ಈ ಬೇಡಿಕೆಯ ಮೇಲೆ ಮಾತನಾಡಬೇಕೆಂದು ಇದ್ದೆ ಆದರೆ ಅಧ್ಯಕ್ಷರವರು ಬೆಲ್ ಬಾರಿಸುತ್ತಲೇ ಇರುವುದರಿಂದ ಇನ್ನು ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳದೇ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† ಶ್ರೀ ಮಾಣಿಕ್‌ರಾವ್ ಆರ್. ಫುಲೇಕರ್ : (ಬೀದರ್).—ಅಧ್ಯಕ್ಷರೇ ಈವೊತ್ತಿನ ದಿವಸ ಈ ಶಿಕ್ಷಣ ಖಾತೆ ಸಚಿವರು ನಮ್ಮ ಮುಂದೆ ಬೇಡಿಕೆಯನ್ನು ಏನು ಇಟ್ಟಿದ್ದಾರೆ ಅದಕ್ಕೆ ನಾನು ಬೆಂಬಲವನ್ನು ಕೊಡುತ್ತಾ ನಾಲ್ಕಾರು ಮಾತುಗಳನ್ನು ಆಡಲು ಬಯಸುತ್ತೇನೆ. ಮೊದಲು ಈ ಶಿಕ್ಷಣ ಖಾತೆ ಎಷ್ಟು ಚಿಕ್ಕದಾಗಿತ್ತೋ ಈವೊತ್ತಿನ ದಿವಸ ಅಷ್ಟು ದೊಡ್ಡದಾಗಿದೆ ಎಂದು ಹೇಳುತ್ತೇನೆ. ಅಲ್ಲದೇ ಈ ಖಾತೆಯಲ್ಲಿರುವ ಸಿಬ್ಬಂದಿ ನೋಡಿದರೆ ಪಿ.ಡಬ್ಲ್ಯು.ಡಿ. ಖಾತೆಗಿಂತಲೂ ಹೆಚ್ಚು ಸಿಬ್ಬಂದಿ ಇದ್ದಾರೆ. ಮೊದಲು ಪಿ ಡಬ್ಲ್ಯು ಡಿ. ಖಾತೆಯಲ್ಲಿ ಒಬ್ಬೊಬ್ಬರು ಚೀಫ್ ಇಂಜಿನೀಯರ್ ಇರುತ್ತಾ ಇದ್ದರು ನಂತರ ಅದರಲ್ಲಿ ಹೆಚ್ಚು ಹೆಚ್ಚು ಚೀಫ್ ಇಂಜಿನೀಯರ್‌ಗಳಾದರೂ ಹಾಗೆಯೇ ಈವೊತ್ತಿನ ದಿವಸ ಈ ಶಿಕ್ಷಣ ಖಾತೆಯಲ್ಲಿ ಹೆಚ್ಚು ಹೆಚ್ಚು ಡೈರೆಕ್ಟರ್‌ಗಳಾಗಿದ್ದಾರೆ. ಅಲ್ಲದೆ ಪ್ರತಿಯೊಂದರಲ್ಲೂ ಕೂಡ ಡಿಪಾರ್ಟ್‌ಮೆಂಟ್‌ಗಳು ಬೇರೆ ಬೇರೆ ಆಗಿವೆ. ಈಗ ಅದರ ಬಗ್ಗೆ ಲೆಕ್ಕಕ್ಕೆ ತೆಗೆದುಕೊಳ್ಳುವುದಾದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಯಾರ್ಯಾರು ಇದ್ದಾರೆ ಎಂದರೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಅಡಿಷನಲ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್. ಇವರಲ್ಲದೆ ಡಿಪಾರ್ಟ್‌ಮೆಂಟ್ ಆಫ್ ಟೆಕ್ಸ್ಟ್ ಬುಕ್ಸ್, ಕರ್ನಾಟಕ ಸೆಕೆಂಡರಿ ಎಜುಕೇಷನ್ ಅಂಡ್ ಎಕ್ಸಾಮಿನೇಷನ್ ಬೋರ್ಡ್. ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್ ಎಜುಕೇಷನಲ್ ರೀಸರ್ಚ್ ಅಂಡ್ ಟ್ರೈನಿಂಗ್ ಡಿಪಾರ್ಟ್‌ಮೆಂಟ್ ಆಫ್ ಪ್ರೀ ಯೂನಿವರ್ಸಿಟಿ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ಕೊಲಿಜಿಯೇಟ್ ಎಜುಕೇಷನ್ ಡಿಪಾರ್ಟ್ ಆಫ್ ಟೆಕ್ನಿಕಲ್ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ವೈನಿಂಗ್ ಎಜುಕೇಷನ್ ಡಿಪಾರ್ಟ್‌ಮೆಂಟ್ ಆಫ್ ಆರ್ಟ್ಸ್ ಅಂಡ್ ಕಲ್ಚರ್, ಡಿಪಾರ್ಟ್‌ಮೆಂಟ್ ಆಫ್ ಪ್ರಿಂಟಿಂಗ್, ಸ್ಟೇಷನರಿ ಅಂಡ್ ಪಬ್ಲಿಕೇಷನ್ಸ್, ಡಿಪಾರ್ಟ್‌ಮೆಂಟ್ ಆಫ್ ಯೂತ್ ಸರ್ವಿಸಸ್, ಫ್ಲೈಯಿಂಟ್ ಟ್ರೈನಿಂಗ್ ಸ್ಕೂಲ್ ಮತ್ತು ನ್ಯಾಷನಲ್ ಕೆಡೆಟ್ ಕೋರ್ ಇವಕ್ಕೆಲ್ಲಾ ಒಬ್ಬೊಬ್ಬರು ಡೈರೆಕ್ಟರ್ ಇದ್ದಾರೆ. ಈ ರೀತಿಯಾಗಿ 16-17 ಜನ ಡೈರೆಕ್ಟರ್‌ಗಳು ಏನು ಇದ್ದಾರೆ ಅವರಿಗೆಲ್ಲಾ ಖಾತೆಗಳೂ ಕೂಡ ಡಿಸ್ಟ್ರಿಬ್ಯೂಟ್ ಆಗಿವೆ. ಇಷ್ಟಿದ್ದರೂ ಕೂಡ ಈವೊತ್ತಿನ ದಿವಸ ಈ ವಿದ್ಯಾಭ್ಯಾಸದಲ್ಲಿ ಯಾವರೀತಿ ನಡೆಯುತ್ತಾ ಇದೆ ಎಂದರೆ ಒಂದು ತರಹ ಮಾಸ್ ಎಜುಕೇಷನ್ ಸ್ಕೇಲ್‌ನಲ್ಲಿ ನಡೆಯುತ್ತಾ ಇರುವುದರಿಂದ ಇದರಲ್ಲಿ ಕ್ವಾಂಟಿಟಿ ಜಾಸ್ತಿಯಾಗಿದೆಯೇ ವಿನಾ ಕ್ವಾಲಿಟಿ ಜಾಸ್ತಿಯಾಗಿಲ್ಲ. ಈ ವಿದ್ಯಾಭ್ಯಾಸದಲ್ಲಿ ಕ್ವಾಲಿಟಿ ಜಾಸ್ತಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಕ್ವಾಲಿಟಿ ಸರಿಯಾಗಿ ಇದರಲ್ಲಿ ಮೆಂಟೇನ್ ಆಗುತ್ತಾ ಇಲ್ಲ ತಮಗೆಲ್ಲಾ ಗೊತ್ತಿದೆ ರೀಆರ್ಗನೈಸೇಷನ್ಸ್ ಆಗುವ ಮೊದಲು ನಮ್ಮ ಹೈದ್ರಾಬಾದ್ ಕರ್ನಾಟಕದಲ್ಲಿ ಬೀದರ್ ಡಿಸ್ಟ್ರಿಕ್‌ನಲ್ಲಿ ಒಂದೇ ಒಂದು ಹೈಸ್ಕೂಲ್ ಇತ್ತು. ಮುಂದೆ ಕಾಲೇಜು ವಿದ್ಯಾಭ್ಯಾಸಕ್ಕಾಗಲಿ ಮತ್ತಾವ ವಿಧ್ಯಾಭ್ಯಾಸಕ್ಕಾಗಲಿ ಮಾಡಬೇಕಾಗಿದ್ದರೆ ಹೈದ್ರಾಬಾದ್‌ಗೆ ಹೋಗಬೇಕಾಗಿತ್ತು. ಈ ಒಂದು ಹೈಸ್ಕೂಲ್ ಬಿಟ್ಟು ಬೇರೆಯಾವ ಹೈಸ್ಕೂಲ್ ನಮ್ಮಲ್ಲಿ ಇರಲಿಲ್ಲ ರೀ ಆರ್ಗನೈಸೇಷನ್ ಆದನಂತರ ನಮ್ಮ ಬೀದರ್ ಜಿಲ್ಲೆಯಲ್ಲಿ ಬೇಕಾದಷ್ಟು ಕಾಲೇಜುಗಳು ಆಗಿವೆ, ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು, ಲಾ ಕಾಲೇಜು, ಪಾಲಿಟೆಕ್ನಿಕ್ಸ್, ವಿಮೆನ್ಸ್ ಕಾಲೇಜು ಮತ್ತು ಜೂನಿಯರ್ ಗೌರ್ನಮೆಂಟ್ ಕಾಲೇಜುಗಳು ಈ ರೀತಿಯಾಗಿ ನಾನಾ ತರಹ ಕಾಲೇಜುಗಳು ಆಗಿವೆ. ಆದರೆ ಮೊದಲು ಒಂದು ಹೈಸ್ಕೂಲ್ ಇದ್ದ ಕಾಲಕ್ಕೆ ಏನು ಎಜುಕೇಷನ್ ಅನ್ನು ಮೆಂಟೇನ್ ಮಾಡುತ್ತಾ ಇದ್ದರು, ಎಜುಕೇಷನ್ ಸ್ಟ್ಯಾಂಡರ್ಡ್ ಏನು ಇತ್ತು ಈವೊತ್ತಿನ ದಿವಸ ಅದು ಇಲ್ಲ ಈ ವಿದ್ಯಾಭ್ಯಾಸದಲ್ಲಿ ಕ್ವಾಲಿಟಿ ಮೆಂಟೇನ್ ಮಾಡುವ ಬದಲು ಈ ಇಲಾಖೆಗೆ ಸ್ಟ್ಯಾಫ್ ಹೆಚ್ಚಾಗುತ್ತಾ ಇದೆ, ಉಪಾಧ್ಯಾಯರು ಹೆಚ್ಚಾಗುತ್ತಾ ಇದ್ದಾರೆ ಹಾಗೆಯೇ ಅವರುಗಳಿಗೆ ಹೆಚ್ಚು ಟ್ರೈನಿಂಗ್ ಕೊಡುತ್ತಾ ಇದ್ದಾರೆ. ನಾನು ಹೇಳುವುದು ಇವುರುಗಳು ಹೆಚ್ಚಿಗೆ ಟ್ರೈನಿಂಗ್ ಕೊಡುವುದರ ಜೊತೆಗೆ ಆ ಮಕ್ಕಳಿಗೆ ಸರಿಯಾಗಿ ಪಾಠ ಹೇಳಿಕೊಡುವುದಕ್ಕೆ ಹೇಳಬೇಕು, ಹಾಗಾದರೆ ಆ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈ ಮಾಸ್ ಎಜುಕೇಷನ್‌ನಲ್ಲಿ ಈಗ ಏನಾಗಿವೆ ಎಂದರೆ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಆಗುತ್ತಾ ಇಲ್ಲ. ಇದಕ್ಕೆ ಹೆಚ್ಚಾಗಿ ಕಟ್ಟಡಗಳು ಇಲ್ಲ. ಈವೊತ್ತಿನ ದಿವಸ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಪ್ರೈಮರಿ ಸ್ಕೂಲುಗಳು ಆಗಿವೆ. ಆ ಉಪಾಧ್ಯಾಯರಿಗೆ ಅಲ್ಲಿಗೆ ಹೋಗಿ ಇರಲಿಕ್ಕೆ ಆಗುವುದಿಲ್ಲ ಕಾರಣ ಅಲ್ಲಿ ಬಿಲ್ಡಿಂಗ್ ಇಲ್ಲದೇ ಇರುವುದರಿಂದ. ಆದುದರಿಂದ ಆ ಉಪಾಧ್ಯಾಯರು

ಏನು ಮಾಡುತ್ತಾರೆ ಎಂದರೆ 4 ದಿವಸ ಹಳ್ಳಿಯಲ್ಲಿ ಇದ್ದು, 3 ದಿವಸ ಪಟ್ಟಣದಲ್ಲಿ ಇರುತ್ತಾರೆ. ಆ ಪಟ್ಟಣದ ಸುತ್ತಮುತ್ತ ಇರುವ 8-10 ಮೈಲಿ ರೇಡಿಯಸ್ ಒಳಗೆ ಇರುವ ಶಾಲೆಗಳ ಅಧ್ಯಾಪಕರು ಹಳ್ಳಿಯಲ್ಲಿದ್ದು ಅವರು 3-4 ದಿವಸ ಇದ್ದು ಇನ್ನು 3 ದಿವಸ ಪಟ್ಟಣದಲ್ಲಿ ಇರುತ್ತಾರೆ. ಈ ವಿದ್ಯಾಭ್ಯಾಸಕ್ಕೆ ನೋಡಿದರೆ ಬಹಳಷ್ಟು ದುಡ್ಡು ಖರ್ಚಾಗುತ್ತಿದ್ದರೂ ಕೂಡ ಸರಿಯಾದ ಅನುಕೂಲ ಉಪಾಧ್ಯಾಯರಿಗೆ ಆಗಿಲ್ಲ. ಆದುದರಿಂದ ನಾನು ಹೇಳುವುದು ಪ್ರತಿ ಹಳ್ಳಿಯಲ್ಲಿ ಪ್ರೈಮರಿ ಸ್ಕೂಲುಗಳು ಏನು ಇವೆ ಆ ಸ್ಕೂಲಿನ ಜೊತೆಗೆ ಒಂದು ರೂಮನ್ನಾಗಲಿ ಅಥವಾ ಒಂದು ಕುಟುಂಬಕ್ಕೆ ಆಗುವಂತೆ ಒಂದು ಚಿಕ್ಕ ಜಾಗದಲ್ಲಿ ಆಗಲಿ ಬಿಲ್ಡಿಂಗ್ ಕಟ್ಟಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ಆ ರೀತಿ ಮಾಡಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ಇದರ ಜೊತೆಗೆ ಇನ್ನೊಂದು ವಿಷಯ ಹೇಳುವುದಾದರೆ ಈಗ ಏನಾಗಿದೆ ಎಂದರೆ ಮೈಸೂರು, ಬೆಂಗಳೂರು ಬೆಳಗಾಂ ಮತ್ತು ಹುಬ್ಬಳ್ಳಿ ಈ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅವರಿಗೆ ಎಷ್ಟು ಸ್ಟಾಫ್ ಬೇಕೋ ಅಷ್ಟು ಕೊಡುತ್ತೀರಿ, ಏತಕ್ಕೆಂದರೆ ಅಲ್ಲಿ ಹೆಚ್ಚು ಹೆಚ್ಚು ಕಂಪ್ಲೈಂಟ್ಸ್ ಬರುತ್ತದೆ ಎಂದು ಅಲ್ಲಿ ಸ್ಟ್ಯಾಫ್‌ನ್ನು ಸರಿಯಾಗಿ ನೋಡಿ ಕೊಳ್ಳುತ್ತೀರಿ. ಇಲ್ಲಿ ನಮ್ಮ ಬೀದರ್ ಜಿಲ್ಲೆಯಲ್ಲಾದರೆ ಇದು ಇದಂ ಹಿಂದುಳಿದ ಏರಿಯಾ, ಇಲ್ಲಿ ಸ್ಟ್ಯಾಫ್‌ನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲಾ ಎಂದು ಹೇಳುತ್ತೇನೆ. ಈ ಬಗ್ಗೆ ತಮಗೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಮ್ಮ ಬೀದರ್ ಡಿಸ್ಟ್ರಿಕ್ಟ್ ಸಣ್ಣ ಡಿಸ್ಟ್ರಿಕ್ಟ್ ಆದರೂ ಈ ಸಣ್ಣ ಜಿಲ್ಲೆಯಲ್ಲಿರುವ ಡಿ.ಡಿ.ಪಿ.ಐ. ಆಫೀಸಿನಲ್ಲಿ 12 ಪೋಸ್ಟ್ ವೇಕೆಂಟ್ ಇದೆ. ಅದು ಯಾವ್ಯಾವುದು ಅನ್ನುವುದನ್ನು ನಾನು ಓದಿ ಹೇಳುತ್ತೇನೆ. ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್, ಔರಾದೆ, ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್, ಭಾಲ್ಕಿ, ಹೆಡ್ ಮಾಸ್ಟರ್ ಬಾಯ್ಸ್ ಹೈಸ್ಕೂಲ್ ಬೀದರ್, ಹೆಡ್ ಮಿಸ್ಟ್ರೆಸ್ ಗರ್ಲ್ಸ್ ಹೈಸ್ಕೂಲ್ ಬೀದರ್, ಹೆಡ್ ಮಾಸ್ಟರ ಬಾಯ್ಸ್ ಅಂಡ್ ಗರ್ಲ್ಸ್ ಹೈಸ್ಕೂಲ್, ಔರಾದೆ, ಹೆಡ್ ಮಾಸ್ಟರ್ ಬಾಯ್ಸ್ ಅಂಡ್ ಗರ್ಲ್ಸ್ ಹೈಸ್ಕೂಲ್ ಭಾಲ್ಕಿ, ಪ್ರಿನ್ಸಿಪಾಲ್, ಜೂನಿಯರ್ ಕಾಲೇಜ್, ಹುಮ್ನಾಬಾದ್, ಹೆಡ್ ಮಾಸ್ಟರ್ ಬಾಯ್ಸ್ ಅಂಡ್ ಗರ್ಲ್ಸ್ ಹೈಸ್ಕೂಲ್, ಮುಡುಬಿ, ಸಬ್ಜೆಕ್ಟ್ ಇನ್‌ಸ್ಪೆಕ್ಟರ್, ಡಿ.ಡಿ.ಪಿ.ಐ. ಬೀದರ್ ಆಫೀಸಿನಲ್ಲಿ ಸೂಪರಿಂಟೆಂಡೆಂಟ್, ಅಕೌಂಟ್ಸ್ ಸೂಪರಿಂಟೆಂಡೆಂಟ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟ್, ಈ ತರಹ ನಾನಾ ಪೋಸ್ಟ್‌ಗಳು ಬೀದರ್ ಡಿ.ಡಿ.ಪಿ.ಐ. ಆಫೀಸಿನಲ್ಲಿ ವೇಕಂಟ್ ಇದೆ. ಹೀಗೆ ವೇಕೆಂಟ್ ಆಗಿದ್ದರೆ ಆ ಮಕ್ಕಳಿಗೆ ಯಾವ ರೀತಿ ವಿದ್ಯಾಭ್ಯಾಸವಾಗುತ್ತದೆ ಅನ್ನುವುದನ್ನು ತಿಳಿದುಕೊಂಡು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ಪ್ರತಿ ಹಳ್ಳಿಯಲ್ಲೂ ಉಪಾಧ್ಯಾಯರನ್ನು ನೇಮಕ ಮಾಡಿಬಿಡುತ್ತೀರಿ. ಆದರಂತೆ ಈವೊತ್ತು ಪ್ರತಿ ತಾಲ್ಲೂಕಿನಲ್ಲಿ ಎ.ಇ.ಒ., ಅಸಿಸ್ಟೆಂಟ್ ಎ.ಇ.ಒ. ಇನ್‌ಸ್ಪೆಕ್ಟರ್ಸ್ ಅವರು ಏನು ಇದ್ದಾರೆ ಅವರು ತಿಂಗಳಿಗೊಂದು ಸಾರಿಯಾದರೂ ಆ ಹಳ್ಳಿಗಳಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿ ಇನ್‌ಸ್ಪೆಕ್ಷನ್ ರಿಪೋರ್ಟ್ ಕೊಡಬೇಕು. ಎಲ್ಲಿ, ಯಾವ ಶಾಲೆಯಲ್ಲಿ ಮಕ್ಕಳು ಹೇಗೆ ಇದ್ದಾರೆ, ಅಲ್ಲಿಯ ವಿದ್ಯಾಭ್ಯಾಸ ಮಟ್ಟ ಹೇಗಿದೆ, ಅಲ್ಲಿಗೆ ಮಕ್ಕಳು ಯಾವ ರೀತಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಇದರ ಬಗ್ಗೆ ಅವರುಗಳು ಪ್ರತಿ ಹಳ್ಳಿಗೂ ಭೇಟಿ ಕೊಟ್ಟು ಇನ್‌ಸ್ಪೆಕ್ಷನ್ ಮಾಡಿ ತಮ್ಮ ರಿಪೋರ್ಟನ್ನು ಮೇಲಾಧಿಕಾರಿಗಳಿಗೆ ಕೊಡಬೇಕು. ಇದನ್ನು ನೋಡಿದರೆ ಈವೊತ್ತಿನ ದಿವಸ ಅವರು ಇನ್‌ಸ್ಪೆಕ್ಷನ್ ಮಾಡುವುದಿಲ್ಲ. ಇದರಿಂದ ಈವೊತ್ತಿನ ದಿವಸ ಹಳ್ಳಿಗಳಲ್ಲಿ ಏನಾಗಿದೆ ಎಂದರೆ ಆ ಉಪಾಧ್ಯಾಯರುಗಳು ಮಕ್ಕಳ ಪಾಠದ ಕಡೆ ಅಷ್ಟು ಹೆಚ್ಚಾಗಿ ಗಮನ ಕೊಡುವುದಿಲ್ಲ ಈ ಅಥಾರಿಟಿಯಲ್ಲಿರುವ ಸಬ್ಜೆಕ್ಟ್ ಇನ್‌ಸ್ಪೆಕ್ಟರ್ಸ್ ಮತ್ತು ಇನ್‌ಸ್ಪೆಕ್ಟರ್ಸ್ ಏನು ಇದ್ದಾರೆ ಅವರು ಪ್ರತಿ ಶಾಲೆಗೂ ಹೋಗಿ ಉಪಾಧ್ಯಾಯರ ಟೀಚಿಂಗ್ ಬಗ್ಗೆ ಹೋಗಿ ನೋಡಬೇಕು, ಅವರು ಹೇಗೆ ಮಕ್ಕಳಿಗೆ ಟೀಚ್ ಮಾಡುತ್ತಿದ್ದಾರೆ ಅವರು ಹೇಗೆ ಮಕ್ಕಳನ್ನು ನೋಡಿಕೊಳ್ಳುತ್ತಾರೆ ಅದನ್ನು ಇವರು ಹೋಗಿ ನೋಡಬೇಕು. ಹಿಂದೆ ಹೇಗೆ ನಡೆಯುತ್ತಿತ್ತು ಎಂದರೆ ಯಾವುದಾದರೂ ಒಂದು ಶಾಲೆಗೆ ಒಬ್ಬ ಶಾಲಾ ಇನ್‌ಸ್ಪೆಕ್ಟರ್ಸ್ ಬರುತ್ತಾನೆ ಎಂದರೆ ಇಡೀ ಉಪಾಧ್ಯಾಯರಿಗೇನೇ ಹೆದರಿಕೆ ಬರುತ್ತಿತ್ತು. ಅವನು, ಆ ಶಾಲೆಗೆ ಬಂದು ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋಗುವವರಿಗೂ ಆ ಉಪಾಧ್ಯಾಯರ ಮನಸ್ಸಿಗೆ ಧೈರ್ಯ ಬರುತ್ತಿರಲಿಲ್ಲ ಒಂದು ರೀತಿ ಭಯ ಉಂಟಾಗುತ್ತಿತ್ತು. ಈವೊತ್ತಿನ ದಿವಸ ನೋಡಿದರೆ ಆ ಇನ್‌ಸ್ಪೆಕ್ಟರ್ಸ್ ಹಳ್ಳಿ

ಗಳಿಗೆ ಭೇಟಿ ಕೊಡುತ್ತಾರೋ ಇಲ್ಲವೋ, ಅವರೊತ್ತು ಆ ಇನ್‌ಸ್ಪೆಕ್ಟರ್ಸ್ ಆ ಶಾಲೆಗೆ ಬರಲಿ, ಬಾರದೇ ಇರಲಿ ಆ ಉಪಾಧ್ಯಾಯರುಗಳಿಗೆ ಏನೂ ಹೆದರಿಕೆಯೇ ಇರುವುದಿಲ್ಲ. ಆದುದರಿಂದ ಅವರ ಮೇಲೆ ತಾವು ಹತೋಟಿ ಇಟ್ಟುಕೊಳ್ಳುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಆದರ ಜೊತೆಗೆ ಸರ್ಕಾರದವರು ಇವೊತ್ತಿನದಿವಸ ಖಾಸಗೀ ವಿದ್ಯಾಸಂಸ್ಥೆಗಳಿಗೆ ಬೇಕಾದಷ್ಟು ಅನುಕೂಲ ಮಾಡಿ ಕೊಡುತ್ತಿದ್ದಾರೆ. ಅಂದರೆ ಖಾಸಗೀ ಕಾಲೇಜುಗಳಿಗೆ ಮತ್ತು ಖಾಸಗೀ ಹೈಸ್ಕೂಲುಗಳಿಗೆ ಇನ್ಸಿಡೆಂಟಲ್ ಚಾರ್ಜಸ್‌ನ್ನು, ರೆಕರಿಂಗ್ ಮತ್ತು ನಾನ್‌ರೆಕರಿಂಗ್ ಖರ್ಚನ್ನು ಕೊಡುತ್ತಿರುವುದರ ಜೊತೆಗೆ ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಸರ್ಕಾರದವರೇ ಚೆಕ್ ಮೂಲಕ ಪೂರ್ತಾ ಸಂಬಳ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಆದರೆ ಅಲ್ಲಿ ಏನಾಗುತ್ತಿದೆಯೆಂದರೆ ಆ ಸಂಸ್ಥೆಗಳವರು ಉಪಾಧ್ಯಾಯರುಗಳಿಗೆ ಪೂರ್ತಾ ಸಂಬಳ ಕೊಡುತ್ತಿಲ್ಲ. ಒಬ್ಬರಿಗೆ 500 ರೂಪಾಯಿ ಸಂಬಳವಿದ್ದರೆ. ಅದರಲ್ಲಿ 200 ರೂಪಾಯಿಗಳನ್ನು ಡೊನೇಷನ್ ಎಂಬುದಾಗಿ ಕಟ್ ಮಾಡಿಕೊಂಡು ಉಳಿದ 300 ರೂಪಾಯಿಗಳನ್ನು ಅವರ ಕೈಗೆ ಕೊಡುತ್ತಿದ್ದಾರೆ ಬೇರೆ ಕಡೆ ಯಾವ ರೀತಿ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಆದರೆ ನಮ್ಮ ಕಡೆ ಮಾತ್ರ ಪ್ರತಿ ಉಪಾಧ್ಯಾಯರ ಕಡೆಯಿಂದಲೂ ಡೊನೇಷನ್ ರೂಪದಲ್ಲಿ ಸಂಬಳ ಕಟ್ ಮಾಡುತ್ತಿದ್ದಾರೆ. ಆಡಿಟ್ ಮಾಡುವ ಕಾಲಕ್ಕೆ ಲೆಕ್ಕಪತ್ರಗಳೆಲ್ಲಾ ಸರಿಯಾಗಿಯೇ ಇರುತ್ತವೆ. ಅಂದರೆ ಎಲ್ಲ ಖರ್ಚುಗಳನ್ನು ಸರಿಯಾಗಿ ತೋರಿಸಿ ಸರ್ಕಾರದಿಂದ ಗ್ರಾಂಟ್ ಪಡೆದಿರುತ್ತಾರೆ. ಇನ್ನು ಮುಂದೆ ಈ ರೀತಿ ಡೊನೇಷನ್ ಹೆಸರಿನಲ್ಲಿ ಉಪಾಧ್ಯಾಯರ ಸಂಬಳವನ್ನು ಕಟ್ ಮಾಡದಂತೆ ನೋಡಿಕೊಳ್ಳಬೇಕೆಂದು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ಇಲ್ಲವಿದ್ದರೆ ಸರ್ಕಾರ ಹಣ ವ್ಯರ್ಥವಾಗಿ ಖರ್ಚಾದಂತೆ ಆಗುತ್ತದೆ. ಅದೇರೀತಿ ನಮ್ಮ ಭಾಗದಲ್ಲಿ ಕೆಲವು ಖಾಸಗೀ ಸಂಸ್ಥೆಗಳು ಈಗ ಸರ್ಕಾರದ ಶಾಲಾ ಕಟ್ಟಡಗಳಲ್ಲಿ ಏನು ತಮ್ಮ ಶಾಲೆಗಳನ್ನು ನಡೆಸುತ್ತಿವೆ, ಅದನ್ನು ಕೂಡ ತಪ್ಪಿಸಬೇಕು. ನಾಲ್ಕಾರು ತಿಂಗಳುಗಳ ಸಲುವಾಗಿ ಅವರಿಗೆ ಸರ್ಕಾರದ ಶಾಲಾ ಕಟ್ಟಡಗಳನ್ನು ಬಿಟ್ಟುಕೊಡಲಾಗಿತ್ತು. ಆದರೆ ಅವರು ನಾಲ್ಕಾರು ವರ್ಷಗಳು ಕಳೆದರೂ ಸಹ ಅಲ್ಲಿಯೇ ತಮ್ಮ ಶಾಲೆಗಳನ್ನು ನಡೆಸುತ್ತಿವೆ. ಇದರಿಂದ ಸರ್ಕಾರದ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಕಷ್ಟವೇನೆಂಬುದು ಶಾಲೆಗಳನ್ನು ನಡೆಸುತ್ತಿರುವ ಹೆಡ್‌ಮಾಸ್ಟರ್ ಅವರಿಗೆ ಮತ್ತು ಬೆಟರ್‌ಮೆಂಟ್ ಕಮಿಟಿಯವರಿಗೇ ಗೊತ್ತು. ಸರ್ಕಾರದವರಿಗೆ ಏನಾದರು ಆ ಖಾಸಗೀ ಸಂಸ್ಥೆಗಳವರ ಮೇಲೆ ಅಷ್ಟೊಂದು, ಭಕ್ತಿ, ಪ್ರೇಮವಿದ್ದರೆ ಈಗಿನ ಶಾಲಾ ಕಟ್ಟಡಗಳನ್ನು ಅವರಿಗೇ ಬಿಟ್ಟುಕೊಟ್ಟು, ಸರ್ಕಾರದ ಶಾಲೆಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸಲಿ ಎಂದು ಹೇಳುತ್ತೇನೆ. ಆದರೆ ಒಂದೇ ಕಟ್ಟಡದಲ್ಲಿ ಖಾಸಗೀ ಮತ್ತು ಸರ್ಕಾರೀ ಶಾಲೆಗಳನ್ನು ನಡೆಸುವುದಕ್ಕೆ ಮಾತ್ರ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ಸರ್ಕಾರದವರು ಏನಾದರು ಕ್ರಮ ಕೈಕೊಳ್ಳಬೇಕು. ಈಗ ಸರ್ಕಾರದವರು ಖಾಸಗೀ ಸಂಸ್ಥೆಗಳವರಿಗೆ ಬೇಕಾದಷ್ಟು ಗ್ರಾಂಟ್ ಕೊಡುತ್ತಿದ್ದಾರೆ. ಅದರ ಜೊತೆಗೇ ಅವರು ಬೇಕಾದಷ್ಟು ಡೊನೇಷನನ್ನು ಶಾಲಾ ಕಟ್ಟಡ ಕಟ್ಟಿಸುತ್ತೇವೆಂಬ ಹೆಸರಿನಲ್ಲಿ ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ ಕಟ್ಟಡವನ್ನು ಕಟ್ಟಿಸದೆ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಅವರಿಗೆ ಸರ್ಕಾರದವರು ಇನ್ನೂ ಒಂದೆರಡು ಲಕ್ಷ ರೂಪಾಯಿಗಳನ್ನು ಹೆಚ್ಚು ಕೊಟ್ಟರೂ ಸರಿಯೆ, ಅವರು ಬೇರೆ ಬಾಡಿಗೆ ಕಟ್ಟಡಗಳಲ್ಲಿ ತಮ್ಮ ಶಾಲೆಗಳನ್ನು ನಡೆಸುವಂತೆ ತಿಳಿಸಬೇಕು. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಜಿಲ್ಲಾ ಕೇಂದ್ರದಲ್ಲಿ ಮತ್ತು ತಾಲ್ಲೂಕ್ ಕೇಂದ್ರಗಳಲ್ಲಿ ಹೈಸ್ಕೂಲು ಮತ್ತು ಕಾಲೇಜುಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಿರುವುದಕ್ಕಾಗಿ ನಾನು ಸರ್ಕಾರಕ್ಕೆ ಅಭಾರಿಯಾಗಿದ್ದೇನೆ. ಮುಖ್ಯವಾಗಿ ಬೀದರ್‌ಗೆ ಒಂದು ಸರ್ಕಾರೀ ಕಾಲೇಜು ಕೊಟ್ಟಿರುವುದಕ್ಕಾಗಿ ನಾನು ಸರ್ಕಾರಕ್ಕೆ ಅಭಾರಿಯಾಗಿದ್ದೇನೆ. ಈ ಕಾಲೇಜಿಗೆ ಬೇಕಾದಂಥ ಕಟ್ಟಡ ಕಟ್ಟಿಸಲು 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಸಲುವಾಗಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದಾರೆ. ಆದಕಾರಣ ಆ ಕಟ್ಟಡದ ಕೆಲಸವನ್ನು ಜಾಗ್ರತೆ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಈ ಸರ್ಕಾರೀ ಕಾಲೇಜು ಅಲ್ಲಿ ಪ್ರಾರಂಭವಾಗದ್ದರಿಂದ ಬಡವರಿಗೆ ಹಿಂದುಳಿದ ವರ್ಗದವರಿಗೆ ಮತ್ತು ವೀಕರ್ ಸೆಕ್ಷನ್ ಏನಿದ್ದಾರೆ, ಅವರಿಗೆಲ್ಲಾ ಬಹಳ ಅನುಕೂಲವಾಗಿದೆ. ಇವರುಗಳೆಲ್ಲಾ ಈಗ ಸರ್ಕಾರೀ ಕಾಲೇಜಿನಲ್ಲಿ ಮತ್ತು ಸರ್ಕಾರೀ ಜೂನಿಯರ್ ಕಾಲೇಜಿನಲ್ಲಿ ವಿದ್ಯಾ

ಭ್ಯಾಸ ಮಾಡುತ್ತಿದ್ದಾರೆ. ಇದಕ್ಕೆ ಮೊದಲು ಇವರೆಲ್ಲಾ ಖಾಸಗೀ ಕಾಲೇಜುಗಳಿಗೇ ಹೋಗಬೇಕಾಗಿತ್ತು, ಆದರೆ ಈಗ ಅಲ್ಲಿ ಸರ್ಕಾರೀ ಕಾಲೇಜು ಬಂದ ಕಾರಣದಿಂದ ಬೀದರ್ ಜಿಲ್ಲೆಯ ಬಡ ಜನರಿಗೆ ಬಹಳ ಅನುಕೂಲವಾಗಿದೆ ಎಂದು ಹೇಳುತ್ತೇನೆ. ಮುಖ್ಯವಾಗಿ ವಿದ್ಯಾ ಇಲಾಖೆಯ ಮೂಲಕ ಮತ್ತು ಯೂತ್ ಸರ್ವಿಸಸ್ ಮೂಲಕ ಸರ್ಕಾರದವರು ನಮ್ಮ ಮಕ್ಕಳಿಗೆ ಬಹಳ ಸಹಾಯ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ತುಂಬಾ ಆಭಾರಿಯಾಗಿದ್ದೇನೆ. ಇಷ್ಟು ಹೇಳಿ, ಇವೊತ್ತಿನ ದಿವಸ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ವಿದ್ಯಾಮಂತ್ರಿಗಳು ದಕ್ಷರಾಗಿದ್ದಾರೆ ಮತ್ತು ವಿರಾಮ ವೇಳೆಯಲ್ಲಿ ಅನೇಕ ಪುಸ್ತಕಗಳನ್ನು ಓದಿ ನಾನಾ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಈ ಕಾರಣದಿಂದ ಇವರ ಕಾಲದಲ್ಲಿ ಒಳ್ಳೆಯ ಕೆಲಸಗಳಾಗುತ್ತವೆಂದು ಜನರು ಭಾವನೆ ಮಾಡಿದ್ದರು ; ಆದರೆ ಅಷ್ಟೊಂದು ಇಂಪ್ರೂವ್‌ಮೆಂಟ್ ಈ ಇಲಾಖೆಯಲ್ಲಿ ಕಾಣುತ್ತಿಲ್ಲ ; ಕಾರಣವೇನು ಎಂಬುದು ತಿಳಿಯುತ್ತಿಲ್ಲ ; ಈಗಿನ ವಿದ್ಯಾಭ್ಯಾಸ ಕ್ರಮದಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿವೆ ; ಇಂದು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಕೂಡ, ಅದರಿಂದ ನಾನಾ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುತ್ತಿವೆ. ಅದರಲ್ಲಿ ಮುಖ್ಯವಾದುದು ನಿರುದ್ಯೋಗ ಸಮಸ್ಯೆ ; ಇದನ್ನು ಹೇಳುವುದಕ್ಕೆ ಅಸದಳವಾಗಿದೆ ಜೊತೆಗೆ ಇಂದಿನ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆ, ಶಿಸ್ತು, ಶಾಂತಿ ಎಂಬುದೇ ಮಾಯವಾಗಿಬಿಟ್ಟಿದೆ. ಈಗ ತುರ್ತುಪರಿಸ್ಥಿತಿ ಜಾರಿಯಲ್ಲಿರುವುದರಿಂದ, ವಿದ್ಯಾರ್ಥಿಗಳಲ್ಲಿ ನಾವು ಸ್ವಲ್ಪ ಶಿಸ್ತನ್ನು ನೋಡುತ್ತಿದ್ದೇವೆ. ಇದಕ್ಕೆ ಮೊದಲು ಅವರಲ್ಲಿ ಶಿಸ್ತು ಎಂಬುದೇ ಇರಲಿಲ್ಲ ; ಇಂದಿನ ವಿದ್ಯಾರ್ಥಿಗಳಲ್ಲಿ ಅಸಾಧ್ಯವಾದಂಥ ದುರ್ನಡತೆಗಳಿರುವುದನ್ನು ನಾವು ನೋಡುತ್ತಿದ್ದೇವೆ. ಹಳ್ಳಿಗಳಲ್ಲಿರತಕ್ಕಂಥ ವಿದ್ಯಾರ್ಥಿಗಳನ್ನು ಪಟ್ಟಣಗಳಲ್ಲಿಟ್ಟು ಅವರಿಗೆ ವಿದ್ಯಾಭ್ಯಾಸ ಕೊಡಿಸುವ ವಿಚಾರದಲ್ಲಿ ನಾವು ಸ್ವಲ್ಪ ಆಲೋಚನೆ ಮಾಡಬೇಕಾದಂಥ ಸ್ಥಿತಿ ಬಂದಿದೆ. ಏಕೆಂದರೆ, ಇದು ಪಟ್ಟಣಗಳಲ್ಲಿರತಕ್ಕಂಥ ವಿದ್ಯಾರ್ಥಿಗಳು ಹಾಕಿಕೊಳ್ಳತಕ್ಕಂಥ ಬಟ್ಟೆಗಳನ್ನು ನೋಡಿದರೆ, ಅವು ನಮ್ಮ ಹಿಂದೂ ಸಂಸ್ಕೃತಿಗೆ ತದ್ವಿರುದ್ಧವಾಗಿರುತ್ತವೆ. ಅವರ ವೇಶ ಭೂಷಣಗಳನ್ನು ನೋಡಿದರೆ, ಅವರು ಹುಡುಗರೋ ಅಥವಾ ಹುಡುಗಿಯರೋ ಎಂದು ಹೇಳುವುದಕ್ಕಾಗುವುದಿಲ್ಲ ; ಅಂದರೆ ಅಷ್ಟೊಂದು ಅಸಹನೀಯವಾಗಿರುತ್ತವೆ ಅವರಲ್ಲಿ ಏನಾದರೂ ಅಶಾಂತಿ ಮೂಡಿದಾಗ ರಾಷ್ಟ್ರೀಯ ಸಂಪತ್ತು, ನಮ್ಮ ದೇಶದ ಆಸ್ತಿ ಎಂಬುದನ್ನು ಸಹ ಯೋಚನೆ ಮಾಡದೆ ಶಾಲಾಕಟ್ಟಡಗಳಿಗೆ ಕಲ್ಲು ಹೊಡೆಯುವುದು ಬಸ್‌ಗಳಿಗೆ ಕಲ್ಲು ಹೊಡೆಯುವುದು, ಬೆಂಕಿಯಿಡುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ ; ಇಂತಹ ದುರ್ವ್ಯವಹಾರಗಳನ್ನು ನಾವು ವಿದ್ಯಾರ್ಥಿಗಳಲ್ಲಿ ನೋಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿದ್ಯಾರ್ಥಿಗಳಿಗೆ ಕೆಟ್ಟ ಹೆಸರು ಬರಲಿ ಎಂದುಕೊಂಡು ಕೆಲವರು ಆ ರೀತಿ ಮಾಡಿಸುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಇಂದು ವಿದ್ಯಾಭ್ಯಾಸವೊಂದೇ ಬೆಳೆದರೆ ಸಾಕಾಗುವುದಿಲ್ಲ ಅದರ ಜೊತೆಗೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯೂ ಸಹ ಬೆಳೆಯಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ನಾವು ನಮ್ಮ ಹಿಂದೂ ಸಂಸ್ಕೃತಿಯನ್ನು ಮರೆಯಬಾರದು ; ಅದರ ಮೇಲೆ ನಾವು ನಿಗಾ ಇಡಬೇಕೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ, ಗ್ರಾಮಾಂತರ ಪ್ರದೇಶದಿಂದ ಬಂದಂಥ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಸರ್ಕಾರದ ಕೆಲಸಕ್ಕೆ ಇಷ್ಟಪಡುತ್ತಾರೆಯೇ ಹೊರತು, ಅವರಿಗೆ ಹಳ್ಳಿಯಲ್ಲಿ ಆಸ್ತಿಯಿದ್ದರೂ ಸಹ ಅಲ್ಲಿಗೆ ಹೋಗಿ ವ್ಯವಸಾಯ ಮಾಡಿ, ಅದನ್ನು ಇಂಪ್ರೂವ್ ಮಾಡಬೇಕು ಎನ್ನತಕ್ಕಂಥ ಇಚ್ಛೆಯನ್ನು ಹೊಂದಿರುವುದಿಲ್ಲ ; 30 ರೂಪಾಯಿ ಸಂಬಳ ಕೊಟ್ಟರೆ ಸಾಕು ಸಿಟಿಯಲ್ಲಿರಬೇಕು ಎಂಬತಕ್ಕಂಥ ಮನೋಭಾವ ಅವರಲ್ಲಿ ಬೆಳೆಯುತ್ತಿದೆ. ಇದನ್ನು ತಪ್ಪಿಸಿ ಗ್ರಾಮಾಂತರ ಪ್ರದೇಶದಲ್ಲಿಯೇ ಸ್ವತಂತ್ರವಾಗಿ ತಮ್ಮ ಕಾಲಮೇಲೆ ತಾವು ನಿಂತುಕೊಂಡು ಜೀವನ

ಮಾಡತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಇಂದು ಜಮೀನು ಇರತಕ್ಕಂಥವರು ಸಹ ವಿದ್ಯಾಭ್ಯಾಸ ಮುಗಿದ ಮೇಲೆ ಹಳ್ಳಿಗಳಿಗೆ ಹೋಗಿ ವ್ಯವಸಾಯ ಮಾಡುವುದಕ್ಕೆ ಇಷ್ಟಪಡದೆ ಸಿಟಿಯಲ್ಲಿಯೇ ನಿರುದ್ಯೋಗಿಗಳಾಗಿ ಅಲೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ತಪ್ಪಬೇಕು. ನಮ್ಮ ದೇಶದಲ್ಲಿ ಶೇಕಡಾ 80ರಷ್ಟು ಜನರು ವ್ಯವಸಾಯವನ್ನೇ ತಮ್ಮ ಕಸುಬನ್ನಾಗಿ ಮಾಡಿಕೊಂಡಿರುವುದರಿಂದ, ವ್ಯವಸಾಯಕ್ಕೆ ಸಂಬಂಧಪಟ್ಟ ಸ್ಕೂಲು ಮತ್ತು ಕಾಲೇಜುಗಳನ್ನು ಹೆಚ್ಚಾಗಿ ತೆರೆದು, ನಮ್ಮ ರೈತಾಪಿ ಜನರ ಮಕ್ಕಳಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ

ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳಬೇಕೆಂದರೆ, ಕೆಲವರು ಕೆಮಿಸ್ಟ್ರಿ, ಜೂಯಾಲಜಿ ಮುಂತಾದ ವಿಷಯಗಳಲ್ಲಿ ಬಿ ಎಸ್ ಸಿ. ಅಥವಾ ಎಂ.ಎಸ್.ಸಿ. ಡಿಗ್ರಿಗಳನ್ನು ತೆಗೆದುಕೊಂಡು ನಂತರ ಗುಮಾಸ್ತಗಿರಿಗೆ ಹೋಗುತ್ತಾರೆ. ಗುಮಾಸ್ತಗಿರಿಗೆ ಹೋಗಲು ಅವರು ಇಂತಹ ಡಿಗ್ರಿಗಳನ್ನೆಲ್ಲಾ ಅವರು ಏತಕ್ಕೆ ಪಡೆದುಕೊಳ್ಳಬೇಕು ? ಇದರಿಂದ ಸರ್ಕಾರಕ್ಕೂ ವ್ಯರ್ಥ ಹಣ ಖರ್ಚಲ್ಲವೇ ? ಈ ರೀತಿಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ವಿದ್ಯಾರ್ಥಿಗಳು ಯಾವ ಕೆಲಸವನ್ನು ಇಷ್ಟಪಡುತ್ತಾರೋ ಅಂತಹ ವಿಷಯಗಳ ಬಗ್ಗೆಯೇ ಟ್ರೈನಿಂಗ್ ಕೊಟ್ಟು ಅವರನ್ನು ಆ ಕೆಲಸಕ್ಕೇ ಕಳುಹಿಸಬೇಕೆಂದು ಹೇಳುತ್ತೇನೆ.

ಇನ್ನು ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರ ಬಗ್ಗೆ ಹೇಳಬೇಕೆಂದರೆ ಕೆಲವರು 15-20 ವರ್ಷಗಳಿಂದ ಒಂದೇ ಸ್ಥಳದಲ್ಲಿದ್ದಾರೆ. ಅಂತಹವರನ್ನು ಅಲ್ಲಿಂದ ವರ್ಗ ಮಾಡಿ ಒಳ್ಳೆಯವರನ್ನು ಆ ಜಾಗಕ್ಕೆ ಹಾಕಬೇಕೆಂದು ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಈಗ ಸಿಂಗಲ್ ಟೀಚರ್ಸ್ ಸ್ಕೂಲ್‌ಗಳಿವೆ. ಆ ಟೀಚರ್‌ಗಳು ಸರಿಯಾಗಿ ಸ್ಕೂಲಿಗೆ ಬಂದು ಪಾಠ ಮಾಡುತ್ತಿಲ್ಲ ; ಇಂತಹ ಸ್ಕೂಲ್‌ಗಳಿಗೆ ಕೆಲವು ಕಡೆಗಳಲ್ಲಿ ಲೇಡೀಸ ಟೀಚರ್ಸನ್ನು ಹಾಕಿದ್ದಾರೆ. ಅವರಿಗೆ ಅದೇ ಜಾಗದಲ್ಲಿ ವಾಸಕ್ಕೆ ಮನೆಗಳು ಸಿಗದೇ ಬೇರೆ ಕಡೆಗಳಿಂದ ಬಂದು ಹೋಗುತ್ತಾರೆ. ಇದರಿಂದ ಕಾಲಕ್ಕೆ ಸರಿಯಾಗಿ ಬಂದು ಪಾಠ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ ; ನಾಲ್ಕು ಗಂಟೆಯವರೆಗೆ ಶಾಲೆಗಳನ್ನು ನಡೆಸಬೇಕೆಂದು ನಿಯಮವಿದ್ದರೂ ಸಹ, ಮೂರುವರೆ ಗಂಟೆಗೆ ಸ್ಕೂಲ್ ಬಿಟ್ಟು ಹೋಗುತ್ತಾರೆ. ಇದು ತಪ್ಪಬೇಕಾದರೆ, ಆ ಶಾಲೆಗಳು ಇರುವ ಕಡೆಗಳಲ್ಲಿಯೇ ವಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರು ಏನು ಇದ್ದಾರೆ ಅವರು ಅದೇ ಊರಿನವರಿದ್ದರೆ ಅವರು ಸಾಮಾನ್ಯವಾಗಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿಗೆ ಗಮನ ಕೊಡುವುದಿಲ್ಲ. ಅವರ ಗಮನವೆಲ್ಲವೂ ವ್ಯವಸಾಯದ ಕಡೆ ಇರುತ್ತದೆ. ಆದ್ದರಿಂದ ಆ ರೀತಿ ಇದ್ದರೆ ಕೂಡಲೇ ತಾಲ್ಲೂಕಿನಿಂದ ತಾಲ್ಲೂಕಿಗೆ ಟ್ರಾನ್ಸ್‌ಫರ್ ಮಾಡಿದರೆ ಒಳ್ಳೆಯದು ಇದು ನನ್ನ ಅಭಿಪ್ರಾಯ. ಇನ್ನು ತಾಂತ್ರಿಕ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿಯೂ ತೆರೆಯಬೇಕೆಂದು ಹೇಳುತ್ತೇನೆ. ಇನ್ನು ವಿದ್ಯಾ ಇಲಾಖೆಯ ಅಧಿಕಾರಿಗಳು ಪ್ರವಾಸ ಹೋಗುವಾಗ ಯಾವರೀತಿಯಿಂದಲೂ ತಮ್ಮ ಪ್ರವಾಸದ ಕಾರ್ಯಕ್ರಮ ಯಾರಿಗೂ ಗೊತ್ತಿರಬಾರದು. ಆಕಸ್ಮಿಕವಾಗಿ ಬೇಟಿ ಕೊಟ್ಟು ಅಲ್ಲಿ ಕಾರ್ಯಕ್ರಮಗಳನ್ನು ಪರಿಶೀಲಿಸಬೇಕು. ಇನ್ನು ಅಲ್ಲಿ ಓದುತ್ತಿರುವ ಮಕ್ಕಳ ಸ್ಟ್ಯಾಂಡರ್ಡ್ ಅಂತೂ ನಿಜವಾಗಿಯೂ ಹೇಳುವುದಾದರೆ ಕಾಗುಣಿತವೂ ಕೂಡ ಆ ಮಕ್ಕಳಿಗೆ ಬರುವುದಿಲ್ಲ. ಇಂಗ್ಲೀಷ್ ಬರುವುದಿಲ್ಲ ಕನ್ನಡವೂ ಬರುವುದಿಲ್ಲ. ಆದ್ದರಿಂದ ಉಪಾಧ್ಯಾಯರನ್ನು ನೇಮಕಮಾಡುವಾಗ ಸರಿಯಾದ ಯೋಗ್ಯತೆ ಇದೆಯೇ ಎಂದು ತಿಳಿದು ನೇಮಕ ಮಾಡಬೇಕು. ಇನ್ನು ರಿಸಲ್ಟ್ ತೆಗೆದುಕೊಂಡರೆ ಒಬ್ಬ ವಿದ್ಯಾರ್ಥಿಯೂ ಕೂಡ ಪಾಸಾಗಿರುವುದಿಲ್ಲ. ಕೇಳಿದರೆ ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ ಹೆಚ್ಚು ಜನ ವಿದ್ಯಾರ್ಥಿಗಳು ಇರುವುದರಿಂದ ಅವರನ್ನು ಸರಿಯಾದ ರೀತಿಯಲ್ಲಿ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಒಂದು ಕಾರಣ ಹೇಳುತ್ತಾರೆ. ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು. ಇನ್ನು ಖಾಸಗಿ ಶಾಲೆಗಳ ವಿಷಯದಲ್ಲಿ ಅದು ವ್ಯಾಪಾರ ಸಂಸ್ಥೆಯಾಗಿದೆ. ಸರ್ಕಾರದವರು 90 ಪರ್ಸೆಂಟ್ ಗ್ರ್ಯಾಂಟ್ ಕೊಡುವಾಗ ಸರ್ಕಾರವೇ ಏತಕ್ಕೆ ವಹಿಸಿಕೊಳ್ಳಬಾರದು ? ಖಾಸಗಿ ಶಾಲೆಗಳಲ್ಲಿ ಡೊನೇಷನ್ ಸಿಕ್ಕಾಪಟ್ಟೆ ತೆಗೆದುಕೊಳ್ಳುತ್ತಾರೆ ಇಂತಹ ಶಾಲೆಗಳ ಮೇಲೆ ಕಂಪ್ಲೇಂಟ್ ಬಂದರೆ ಅದರ ಬಗ್ಗೆ ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಕೂಡಲೇ ಅವರಿಗೆ ಕೊಡ

ತಕಂಥ ಗ್ರಾಂಟನ್ನು ತಪ್ಪಿಸಿದರೆ ಒಳ್ಳೆಯದು. ಇನ್ನು ವಿದ್ಯಾ ಇಲಾಖೆಯಲ್ಲಿ ಕೆಲಸಮಾಡತಕ್ಕ ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಮತ್ತು ಇತರೆ ಸಿಬ್ಬಂದಿಯವರು ಒಂದೇ ಜಾಗದಲ್ಲಿ ಬಹಳ ವರ್ಷಗಳಕಾಲ ಇರುವುದರಿಂದ ಅಲ್ಲಿ ಲಂಚ ರುಶುವತ್ತುಗಳು ಜಾಸ್ತಿಯಾಗಿವೆ ಆದ್ದರಿಂದ ಬಹಳ ವರ್ಷಗಳ ಕಾಲ ಇರುವವರನ್ನು ಕೂಡಲೇ ಟ್ರಾನ್ಸ್‌ಫರ್ ಮಾಡಿ ಬೇರೆಯವರನ್ನು ನೇಮಕ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಇಷ್ಟು ಕೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ನಾನು ಈ ದಿವಸ ವಿದ್ಯಾ ವಾರ್ತಾ ಹಾಗೂ ಯುವಜನ ಖಾತೆಯ ಬೇಡಿಕೆಗಳನ್ನು ಬೆಂಬಲಿಸಿ ಮಾತನಾಡಬೇಕೆಂದು ಬಯಸಿದ್ದೇನೆ ಕೆಲವು ಮಾನ್ಯ ಸ್ನೇಹಿತರು ಮಾತನಾಡುವಾಗ ಬರೀ ವಿದ್ಯಾ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ ಆದರೆ ನಾನು ಮೊದಲು ಯುವಜನ ಖಾತೆಯನ್ನು ಕುರಿತು ಪ್ರಾರಂಭಮಾಡಿ ಆಮೇಲೆ ವಿದ್ಯಾ ಇಲಾಖೆಗೆ ಬರಬೇಕೆಂದು ಬಯಸುತ್ತೇನೆ. ಇವತ್ತು ವಾರ್ತಾ ಮತ್ತು ಯುವಜನ ಇಲಾಖೆಯಲ್ಲಿ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದಿದೆ ಅದರ ಬಗ್ಗೆ ನಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಬೇಕಾದ್ದು ನಮ್ಮ ಕರ್ತವ್ಯ. ಸಾಕಷ್ಟು ಕೆಲಸ ಕಾರ್ಯಗಳು ಆಗಿವೆ ಬೆಂಗಳೂರಿನಲ್ಲಿ ಮತ್ತು ಎಲ್ಲಾ ಕಡೆಯಲ್ಲೂ ಆಗಿವೆ. ಇನ್ನು ಆಗಬೇಕಾದ ಕೆಲಸಗಳು ಬಹಳಮಟ್ಟಿಗೆ ಇವೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಮಾನ್ಯ ಮಂತ್ರಿಗಳನ್ನು ಮಾನ್ಯ ಬಂಗಾರಪ್ಪನವರು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಯುವಜನ ಖಾತೆಯಲ್ಲಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದಾರೆ ಆದರೆ ಇಲ್ಲಿ ಒಂದು ಕ್ರಿಕೆಟ್ ಬೋರ್ಡ್ ಇದೆ ಅದರ ಬಗ್ಗೆ ಅನೇಕ ತರದ ಅಪಾದನೆಗಳನ್ನು ಮಾಡಿದ್ದಾರೆ ಅದು ಜನಜನಿತವಾಗಿದೆ. ಒಂದು ಸಾರಿ ಶಿವಮೊಗ್ಗದಲ್ಲಿ ಕ್ರಿಕೆಟ್ ಆಡತಕ್ಕಂಥ ಅಭಿಮಾನಿಗಳು ನನ್ನನ್ನು ಕರೆದು ಅವತ್ತಿನ ಸಮಾರಂಭಕ್ಕೆ ಅಧ್ಯಕ್ಷರನ್ನಾಗಿ ಮಾಡಿದರು ಕರ್ನಾಟಕದ ಹಲವಾರು ಜಿಲ್ಲೆಗಳಿಂದ ಸಾಕಷ್ಟು ಅಭಿಮಾನಿಗಳು ಸಭೆಗೆ ಬಂದಿದ್ದರು ಅಲ್ಲಿ ಎಲ್ಲರೂ ಒಕ್ಕೊರಲಿನಿಂದ ಹೇಳಿದ ಮಾತು. ಕ್ರಿಕೆಟ್ ಆಟದಲ್ಲಿ ಆಯ್ಕೆ ವಿಷಯದಲ್ಲಿ ಬಹಳ ಅನ್ಯಾಯ ನಡೆಯುತ್ತಿದೆಯೆಂದು ವ್ಯಕ್ತಪಡಿಸಿದರು. ಅದಕ್ಕೆ ಕಾರಣ ಗ್ರಾಮ ಮಟ್ಟದಲ್ಲಿ ಕ್ರಿಕೆಟ್ ಆಡತಕ್ಕಂಥ ಪಟುಗಳು ಅವರನ್ನು ಆಯ್ಕೆ ಸರಿಯಿಲ್ಲವೆಂದು ಬೇರೆ ಒಂದು ಸಲೆಕ್ಷನ್ ಬೋರ್ಡ್ ರಚನೆ ಮಾಡಬೇಕೆಂದರೆ ಒತ್ತಾಯಮಾಡಿ ಸಭೆಯಲ್ಲಿ ತೀರ್ಮಾನ ಮಾಡಿದರು. ಅದಾದನಂತರ ಏನಾಯಿತು ಎಂದು ಗೊತ್ತಾಗಲಿಲ್ಲ. ಆ ವಿದ್ಯಮಾನವನ್ನು ನೋಡಿದರೆ ಸಂಸ್ಥಾನಮಟ್ಟದ ಕ್ರಿಕೆಟ್ ಬೋರ್ಡಿಗೂ ಇವರಿಗೂ ಹೊಂದಾಣಿಕೆಯಾಗಿರಬಹುದೆಂದು ಕಾಣುತ್ತದೆ. ಯುವಜನ ಖಾತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅನೇಕ ಕ್ರೀಡೆಗಳನ್ನು ಆಡಿಸುತ್ತಿದ್ದಾರೆ. ಇದು ಅಗತ್ಯ ನಾನು ಕೂಡ ಒಪ್ಪುತ್ತೇನೆ. ಆದರೆ ನನ್ನದು ಒಂದು ಕೋರಿಕೆ ಜಿಲ್ಲಾಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ನಡೆಯುವ ಕ್ರೀಡೆಗಳಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಪಾಲ್ಗೊಂಡರೆ ಗ್ರಾಮಾಂತರದಿಂದ ಬಂದಂತ ಜನರಿಗೆ ಬಹಳ ತೊಂದರೆ ಯಾಗುತ್ತದೆ ಆದ್ದರಿಂದ ಜಿಲ್ಲಾಧಿಕಾರಿಗಳು ಮತ್ತು ಅವರ ಕೈಕೆಳಗಿನ ಎಲ್ಲಾ ಅಧಿಕಾರಿಗಳು ಕ್ರೀಡಾಂಗಣದಲ್ಲಿ ಇದ್ದರೆ ಸರ್ಕಾರಿ ಕೆಲಸಕಾರ್ಯಗಳಿಗೆ ಬಹಳ ತೊಂದರೆ ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಹೇಳುವುದು ಇಷ್ಟೆ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಇದರ ನೇತೃತ್ವವನ್ನು ವಹಿಸಿಕೊಟ್ಟರೆ ಒಳ್ಳೆಯದು. ರಾಷ್ಟ್ರಮಟ್ಟದಲ್ಲಿ ಏನು ಈ ಕ್ರೀಡೆಗಳು ಮುಂದುವರಿದಿದ ಅದರಲ್ಲಿ 100ಕ್ಕೆ 50 ರಷ್ಟು ಕೂಡ ನಾವು ಮುಂದುವರೆದಿಲ್ಲ. ಇದರ ಹೆಚ್ಚಿನ ಆಸಕ್ತಿ ವಹಿಸುವುದು ಬಹಳ ಒಳ್ಳೆಯದು. ಜೊತೆಗೆ ನಮ್ಮ ಯುವಕರು ಏನು ಇದ್ದಾರೆ ಅವರಿಗೆ ಸರಿಯಾದ ಶಕ್ತಿ ಮತ್ತು ಸಾಮರ್ಥ್ಯ ಇರುವುದಿಲ್ಲ ಆದ್ದರಿಂದ ಎನ್.ಸಿ.ಸಿ. ಏನು ಮಾಡಿದ್ದೀರಿ ಅದರಲ್ಲಿಯೇ ಮಿಲಿಟರಿ ಟ್ರೈನಿಂಗ್ ಕೊಡಬೇಕು ಸಾಕಷ್ಟು ಶಿಸ್ತು ಬೆಳೆಯುತ್ತದೆ. ಇನ್ನು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ವಿಷಯದಲ್ಲಿ 2 ಮಾತುಗಳನ್ನು ಹೇಳುತ್ತೇನೆ. ನಮ್ಮ ಮಂತ್ರಿಗಳು ಸ್ನೇಹಿತರು ಅವರು ಒಬ್ಬರು ಫುಟ್‌ಬಾಲ್ ಒದೆಯುವ ಫೋಟೋ ಬಂದರೆ ಸಾಲದು. ಬೇರೆಯವರು ಬರಬೇಕು. ಮೊನ್ನೆ ಒಂದು ಮಹಿಳಾ ಸಮ್ಮೇಳನ ನಡೆಸಬೇಕಾದಾಗ ನಾನು ಇನ್‌ಫರ್ಮೇಷನ್ ಇಲಾಖೆಗೆ ಕಾಗದ ಬರೆದಿದ್ದೆ. ಪ್ರಚಾರ ಸಲುವಾಗಿ ಆದರೆ ಒಬ್ಬರೂ ಬರಲಿಲ್ಲ. ಶ್ರೀಮತಿ ಇ. ಇ. ವಾಜ್‌ರವರು ಕೂಡ ಆ ಸಮ್ಮೇಳನಕ್ಕೆ ಬಂದಿದ್ದರು. ತಮ್ಮ ಇಲಾಖೆಯವರು ಯಾರೂ

ಬರಲಿಲ್ಲ ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸಾಕಷ್ಟು ಪ್ರಚಾರ ಬೇಕು. ಇನ್ನು ಸಿನಿಮಾಕ್ಕೆ ಸಬ್ಸಿಡಿ ಕೊಡುವ ವಿಚಾರದಲ್ಲಿ 50 ಸಾವಿರ ರೂಪಾಯಿ ಕೊಡುತ್ತೀರಿ ಆದರೆ ತಮಿಳು, ತೆಲಗು ಎಲ್ಲಾ ಭಾಷೆಯ ಸಿನಿಮಾಗಳಿಗೆ ಕೊಡುವುದಕ್ಕಿಂಥಾ ನಮ್ಮ ಕನ್ನಡಕ್ಕೆ ಮೊದಲು ಪ್ರೋತ್ಸಾಹ ಕೊಡಿ ತಾವು ಏನು ಎಲ್ಲಾ ಭಾಷೆಗಳಿಗೆ ಕೊಡುತ್ತೀರಿ ಅದೇ ರೀತಿ ನಮ್ಮ ಕನ್ನಡಕ್ಕೆ ಬೇರೆಯವರು ಕೊಡುತ್ತಾರೆಯೇ ಯೋಚನೆಮಾಡಿ. ಮೊದಲು ನಮ್ಮ ಕನ್ನಡಕ್ಕೆ ಪ್ರೋತ್ಸಾಹ ದೊರಕಬೇಕೆಂದು ಹೇಳುತ್ತೇನೆ. ಕರ್ನಾಟಕದಲ್ಲಿ ನಾವು ಕನ್ನಡ ಸಿನಿಮಾಗಳಿಗೆ ಮತ್ತು ಕನ್ನಡ ಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡದಿದ್ದರೆ ಇನ್ನು ಯಾವ ನೆರೆಹೊರೆಯ ರಾಜ್ಯಗಳವರು ಕೊಡುತ್ತಾರೆ. ತಮಿಳು ತೆಲುಗು ಮಾತನಾಡುವವರುಇತ್ತೀಚೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ ಅಕ್ಕಪಕ್ಕದ ರಾಜ್ಯಗಳವರೂ ಸಹ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಆದ್ದರಿಂದ ಇನ್ನುಮುಂದೆ ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಮಾನ್ಯ ಸಚಿವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈಗ ವಿದ್ಯಾ ಇಲಾಖೆಯಲ್ಲಿ ಸುಮಾರು ೧೦೦ ಚಿಲ್ಲರೆ ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದಾರೆ. ಇದು ಬೃಹದಾಕಾರವಾದ ಇಲಾಖೆ. ಅಷ್ಟು ದೊಡ್ಡದು. ಹಾವು, ಚೇಳು ಮೊಸಳೆ ಎಲ್ಲವು ಇರತಕ್ಕ ದೊಡ್ಡ ಇಲಾಖೆ. ಇದರಿಂದ ನಮ್ಮ ವಿದ್ಯಾಮಂತ್ರಿಗಳಿಗೆ ಎಷ್ಟು ಕಷ್ಟವಾಗಿದೆಯೆಂಬುದು ನನಗೆ ಚೆನ್ನಾಗಿ ಗೊತ್ತಿದೆ ಇಂತಹ ಒಂದು ದೊಡ್ಡ ಇಲಾಖೆಯಲ್ಲಿ ಏನಾದರೂ ಸಾಧನೆ ಮಾಡಿದ್ದರೆ ಅದು ನಮ್ಮ ವಿದ್ಯಾ ಮಂತ್ರಿಗಳ ಶಕ್ತಿ ಸಾಮರ್ಥ್ಯಗಳನ್ನು ಎತ್ತಿ ತೋರಿಸುತ್ತದೆ. ಅದ್ದರಿಂದ ಅವರನ್ನು ನಾನು ಶ್ಲಾಘಿಸಲಿಕ್ಕೆ ಇಚ್ಛಿಸುತ್ತೇನೆ. ಇವತ್ತು ಯಾವ ಕಾಲದಲ್ಲಿಯೂ ಆಗದೇ ಇರತಕ್ಕ ವಿದ್ಯಾ ಪ್ರಗತಿ ಈಗ ಇವರ ಕಾಲದಲ್ಲಿ ಆಗಿದ. ಕಾಲೇಜುಗಳು, ಪೋಸ್ಟ್ ಗ್ರಾಜುಯೇಟ್ಸ್ ಇನ್‌ಸ್ಟಿಟ್ಯೂಷನ್ಸ್ ಮುಂತಾದ ಎಲ್ಲ ಹಂತಗಳಲ್ಲಿಯೂ ಹೆಚ್ಚಿಗೆ ಬೆಳವಣಿಗೆಯಾಗಿದೆ.

5-30 P.M.

ಶ್ರೀ ಕೋಣಂದೂರು ಲಿಂಗಪ್ಪ :— ಅದು ಇವರ ಕಾಲದಲ್ಲಿ ಆಗಿದೆಯೋ ಅಥವಾ ಇವರ ಹಿಂದಿವರ ಕಾಲದಲ್ಲಿಯಾಗಿದೆಯೋ ?

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್ :— ಎಲ್ಲರ ಕಾಲದಲ್ಲಿಯೂ ಆಗಿದೆ. ತಾವು ತಮ್ಮ ಕಾಲದಲ್ಲಿ ಹೆಚ್ಚಿನ ಪ್ರಗತಿಯನ್ನು ಮಾಡಿದ್ದೀರಿ. ಅದಕ್ಕಾಗಿ ತಮಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಆದರೆ ಇವತ್ತು ನಿಮ್ಮ ಆಡಳಿತ ಯಂತ್ರದ ಬಗ್ಗೆ ಕೆಲವು ದೋಷಗಳನ್ನು ಎತ್ತಿ ಹೇಳದೆ ಗತ್ಯಂತರವಿಲ್ಲ. ದೇವರೂ ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲವೆಂದು ಹೇಳುವ ಹಾಗೆ ದೇವರಂತೆ ತಾವು ಒಂದು ದೊಡ್ಡ ಮನಸ್ಸನ್ನು ಮಾಡಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡಿದ್ದೀರಿ. ಆದರೆ ಪೂಜಾರಿಗೆ ಆ ಮನಸ್ಸು ಇಲ್ಲದಿದ್ದರೆ ಅದರಿಂದೇನೂ ಅನುಕೂಲವಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಇವತ್ತು ತಮ್ಮ ಇಲಾಖೆಯಲ್ಲಿ ನಡೆಯುತಕ್ಕ ಕೆಲವಾರು ದೋಷಗಳನ್ನು ಎತ್ತಿ ಹೇಳಿದರೆ ತಾವು ತಪ್ಪು ಭಾವಿಸುವುದಿಲ್ಲವೆಂದು ಹೇಳುತ್ತೇನೆ. ಶಿವಮೊಗ್ಗದಲ್ಲಿ ಒಬ್ಬ ಎ.ಇ.ಒ. ಇದ್ದಾರೆ. ಆ ಎ.ಇ.ಒ. ಮೇಲೆ ಒಂದು ಕಂಪ್ಲೇಂಟ್ ಬಂದಿದೆ. ಯಾರಾದರೂ ಹೆಣ್ಣುಮಕ್ಕಳು ಟೀಚರ್ಸ್ ಆಗಿರುವವರು ಅವರ ಟ್ರಾನ್ಸ್‌ಫರ್ಸ್ ಬಗ್ಗೆ ಏನಾದರೂ ಹೇಳುವುದಕ್ಕೆ ಅವರಲ್ಲಿ ಹೋದರೆ ಅವರನ್ನು ಮನೆಗೆ ಬನ್ನಿ ಎಂಬದಾಗಿ ಕರೆಯುತ್ತಾರೆ. ಅಷ್ಟು ಮಟ್ಟಿನ ಕಂಪ್ಲೇಂಟನ್ನು ನಾವು ಆಗಾಗ್ಗೆ ಕೇಳುತ್ತಿದ್ದೇವೆ. ಇದು ಏಕೆ ಈ ರೀತಿಯಾಗಿದೆಯೆಂಬುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಆನೆಗೆ ಅಂಕುಶ ಹಾಕಿದರೆ ಅದರ ದಾರಿ ಸರಿ ಹೋಗುತ್ತದೆ. ಆದರೆ ಅಂಕುಶದ ಬಲ ಕಡಿಮೆಯಾದಾಗ ಆನೆ ಸ್ವತಂತ್ರವಾಗಿ ವಿಹರಿಸುವುದಕ್ಕೆ ಹೋಗುತ್ತದೆ. ಹಾಗೆ ಇಲ್ಲಿ ಮಂತ್ರಿಗಳ ಅಂಕುಶ ಇಲ್ಲಿ ಕಡಿಮೆಯಾಗಿರುವ ಕಾರಣ ಇಂತಹ ಮಹನೀಯರುಗಳು ಇದ್ದಾರೆನ್ನುವ ಭಾವನೆ ನಮಗೆ ಬರುತ್ತದೆ. ತಾವು ನಮ್ಮ ಜಿಲ್ಲೆಗೆ ಬಂದಿದ್ದಾಗ ತಮ್ಮ ಹತ್ತಿರ ಎಲ್ಲ ವಿಷಯಗಳನ್ನು ಹೇಳಿದ್ದೇನೆ. ಎಷ್ಟು ಶಾಲೆಗಳು ಜಲ್ಲಿ ಬಾಗಿಲು ಹಾಕಿದೆಯೆಂಬುದನ್ನು ನೋಡಬಹುದು. ಅವು ಕೇವಲ ಒಂದು ವರ್ಷ ಅಥವಾ ೬ ತಿಂಗಳುಗಳು ಮಾತ್ರ ನಡೆಯುತ್ತವೆ. ಅಲ್ಲಿನ ಡಿ.ಡಿ.ಪಿ.ಐ. ಅವರು ಸೆಲೆಕ್ಷನ್ ಮಾಡುತ್ತಾರೆ. ಆದರಂತೆ ಅವರನ್ನು ಪೋಸ್ಟ್ ಮಾಡುತ್ತಾರೆ ಎಂಬುದಾಗಿ ಹೇಳುತ್ತಾರೆ. ಆದರೆ ಅವರು ಬಂದೇ ಇಲ್ಲ. ತುಂಬಾ ದಿವಸಗಳಾಗಿವೆ. ಅದರ ಬಗ್ಗೆ ಅಂತಿಮ ತೀರ್ಮಾನಬೇಡವೇ ? ಸ್ಥಳದಲ್ಲಿಯೇ ಎಸ್.ಎಸ್.ಎಲ್.ಸಿ. ಮಾಡಿಕೊಂಡ ಯುವಕರು ಅನೇಕರು ಇದ್ದಾರೆ. ಅಂತಹವರನ್ನು ನೇಮಕ ಮಾಡುವ ಬಗ್ಗೆ ಏಕೆ ತಡಮಾಡುತ್ತೀರಿ ? ನೇಮಕ ಮಾಡುವುದಕ್ಕೆ ಏನು ತೊಂದರೆಯಾಗುತ್ತದೆ ? ನಿಮ್ಮ

ಸಮಿತಿಯೇ ಇರುತ್ತದೆ. ಇಂಟರ್‌ವ್ಯೂ ಸಹ ನಡೆಸಬಹುದು. ಇದೆಲ್ಲಾ ಆಗುವುದರೊಳಗೆ ನನ್ನ ಸಲಹೆ ಏನೆಂದರೆ ಸ್ಥಳೀಯ ಅಭ್ಯರ್ಥಿಗಳು ಇರುವಾಗ ತಾವಾಗಿಯೇ ಸ್ಥಳದಲ್ಲಿ ಬಿಡುವು ಕಾಲದಲ್ಲಿ ಬಂದು ಪಾಠ ಗಳನ್ನು ಹೇಳಿಕೊಡುತ್ತೇವೆ ಎಂಬುದಾಗಿ ಹೇಳುವಾಗ ನೀವೇಕೆ ಅಂತಹವರನ್ನು ತೆಗೆದುಕೊಳ್ಳಬಾರದು ? ಆದರೆ ಡಿ. ಡಿ. ಪಿ. ಐ. ಅವರು ಇತರ ಅಧಿಕಾರಿಗಳಿಗೆ ಏನೇನೋ ಹೇಳಿಕೊಂಡು ಬಂದಿದಾರೆ. ನಮಗೆ ಬೇರೆ ಬೇರೆ ಕಾರಣಗಳಿವೆಯೆಂದು ಮೇಲಿನಿಂದ ಒಪ್ಪಿಗೆ ಬರಬೇಕು ಈಗಿನ ರೂಲ್ಸ್‌ಗೆ ಅಮೆಂಡ್‌ಮೆಂಟ್ ಬರಬೇಕು ಹೀಗೆ ಮುಂತಾದ ಕಾರಣಗಳನ್ನು ಹೇಳಿಕೊಂಡೇ ಬರುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :— ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ವಿಲ್ಲವೆಂದು ಕಾಣುತ್ತವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :— ಅದನ್ನು ಕಲ್ಪಿಸಿಕೊಡಬೇಕು.

ಇನ್ನು ಪ್ರೈಮರಿ ಎಜುಕೇಷನ್ ಎಷ್ಟು ಮುಖ್ಯವೆಂಬುದನ್ನು ತಾವೇ ಘಂಟಾಘೋಷವಾಗಿ ಹೇಳು ತ್ತಿದ್ದೀರಿ. ಪ್ರೈಮರಿ ಶಾಲೆಗಳು ಬಾಗಿಲುಹಾಕುವ ಪರಿಸ್ಥಿತಿ ಆದರೆ ನಿಜವಾಗಿಯೂ ಈ ರಾಜ್ಯಕ್ಕೆ ಬಹಳ ಲುಕ್ಸಾನು ಆಗುತ್ತದೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಎಷ್ಟೇ ಕಾನೂನು, ಆಡಳಿತ ವ್ಯವಸ್ಥೆ ಬಂದರೂ ಆ ಕಾನೂನನ್ನು ತಿದ್ದುಪಡಿ ಮಾಡುವ ಮುಖಾಂತರ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದು ಕೊಳ್ಳುವ ವಿಚಾರ ಮಾಡಬೇಕು. ಆ ರೀತಿಯಾಗಿ ಮಾಡಿದರೆ ಅನೇಕ ಶಾಲೆಗಳು ಬಾಗಿಲು ಹಾಕುವುದನ್ನು ನಿಲ್ಲಿಸಬಹುದು. ಉಪಾಧ್ಯಾಯರನ್ನು ಅಲ್ಲೆಲ್ಲಾ ನೇಮಕಮಾಡುತ್ತೇವೆಂದು ಬಾಯಿಯಲ್ಲಿ ಸುಮ್ಮನೆ ಹೇಳಿ ಕೊಂಡು ಬಂದರೆ ಅದರಿಂದೇನೂ ಆಗುವುದಿಲ್ಲ ಬಾಯಿನಲ್ಲಿ ಉಪಾಧ್ಯಾಯರು ನೇಮಕವಾಗಿದ್ದಾರೆಂದು ಹೇಳಿ ರಜಾ ಹಾಕುವುದು, ಇದೊಂದು ತರಹ ರೋಗ ಇದೆ ಇದಕ್ಕೆ ಕೆಲವಾರು ಕಾರಣಗಳೂ ಇವೆ ಇದನ್ನು ನಾನು ಉಪಾಧ್ಯಾಯರ ತಪ್ಪು ಎಂಬುದಾಗಿ ಹೇಳುವುದಿಲ್ಲ. ಆದರೆ ಸ್ಥಳೀಯವಾಗಿ ಅವರಿಗೆ ಸಾಕಷ್ಟು ಸೌಲಭ್ಯಗಳು ಸಿಗುವುದಿಲ್ಲ ನಾವೇನೂ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟಿಲ್ಲ ಪ್ರತಿಯೊಂದು ಹಳ್ಳಿಯಲ್ಲಿಯೂ ಉಪಾಧ್ಯಾಯರಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಿ ಕೊಡುವುದು ಸರ್ಕಾರದ ಕರ್ತವ್ಯ ಆ ರೀತಿಯಾಗಿ ಆಗದೇ ಹೋದರೆ ನಮ್ಮ ಉಪಾಧ್ಯಾಯರಿಗೆ ಹೆಚ್ಚಿನ ಸೌಲಭ್ಯ ದೊರೆಯಲಾರದು. ಹಿಂದೆ ಉಪಾಧ್ಯಾಯರುಗಳಾದಂಥವರು ಯಾರೋ ಮನೆಯಲ್ಲಿ ಮಲಗಿ, ಯಾರೋ ಹಾಕಿದ ತುತ್ತು ಅನ್ನವನ್ನು ತಿಂದು, ಯಾರದೋ ಒಬ್ಬ ಮನೆಯಲ್ಲಿ ಮಲಗಿ ಸುಖವಾಗಿ ಇರುತ್ತಿದ್ದಂಥ ಒಂದು ಸುಭಿಕ್ಷಕಾಲವೂ ಇತ್ತು ಕೆಲವು ಸಂದರ್ಭಗಳಲ್ಲಿ ಉಪಾಧ್ಯಾಯರನ್ನು ಮಹಾರಾಜರಂತೆ ನೋಡಿಕೊಳ್ಳುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲಿಯೂ ಈಗ ಸ್ಕೂಲುಗಳು ಇರುವಾಗ ಎಷ್ಟು ಜನ ಉಪಾಧ್ಯಾಯರುಗಳು ಇದ್ದರೂ ಸಾಕಾಗು ವುದಿಲ್ಲ ಆದ್ದರಿಂದ ಉಪಾಧ್ಯಾಯರಿಗೆ ಕಡ್ಡಾಯವಾದ ಸೌಕರ್ಯಗಳನ್ನು ಕೊಡಬೇಕೆಂದು ಕೇಳಿಕೊಳ್ಳು ತ್ತೇನೆ. ಇವತ್ತು ಉಪಾಧ್ಯಾಯರ ನೇಮಕಾತಿಯಲ್ಲಿಯೂ ಮಾನ್ಯ ಶ್ರೀ ಪಾಟೀಲ್ ಅವರು ಹೇಳಿದಂತೆ ಅಕ್ಷರಶಃ ನಿಜ. ಅವರು ನೇಮಕಾತಿಯೊಳಗೆ ಇತರ ಎಲ್ಲಾ ಕಾನೂನುಗಳನ್ನೂ ಬದಿಗಿಡಬೇಕು. ಏಕೆಂದರೆ ಅವರೇ ಭವಿಷ್ಯ ಸಮಾಜವನ್ನು ನಿರ್ಮಾಣಮಾಡುವವರು. ಎಳೆಯ ಮನಸ್ಸಿನಮೇಲೆ ಅವರ ಮಾತುಗಳೇ ಒಂದು ಆದರ್ಶವಾಗಿರುತ್ತದೆ. ಆದ್ದರಿಂದ ಅಂಹವರ ಮೇಲೆ ಯಾರು ಏನು ಹೇಳಿದರೂ ಕೂಡ ನನಗೆ ಕಿವಿ ಕಿವಿಡಾಗಿರುತ್ತದೆ. ಮುಂದೆ ಭವಿಷ್ಯ ಜನಾಂಗ ಅವರ ಆದರ್ಶವನ್ನು ಇಟ್ಟುಕೊಂಡು ಅವರ ಜೀವನವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಒಬ್ಬನಿಗೆ ಯಾವಾಗಲಾದರೂ ಒಂದು ಕೆಟ್ಟ ಹವ್ಯಾಸ ಇರತಕ್ಕ ಒಬ್ಬ ಉಪಾಧ್ಯಾಯ ಸಿಕ್ಕಿದರೆ ಅವನ ಮುಂದಿನ ರೀತಿನೀತಿಗಳು, ನಡತೆ ಇವೆಲ್ಲವನ್ನೂ ನೋಡಿಕೊಂಡು ಆತ ಇನ್ನೆಷ್ಟರಮಟ್ಟಿಗೆ ಎಲ್ಲಿಗೆ ಬರಬಲ್ಲವೆಂಬುದನ್ನು ವಿಚಾರಮಾಡಬೇಕು ನಮ್ಮಲ್ಲಿ ಒಂದು ವಿಚಾರ ನಡೆಯಿತು. ಪರೀಕ್ಷೆಗೆ ಎಂದು ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಒಬ್ಬ ಉಪಾಧ್ಯಾಯ ಮೂರು ಮೈಲಿ ಗಳ ದೂರದಲ್ಲಿರತಕ್ಕ ಅಂದರೆ ಮಾನ್ಯ ಶ್ರೀ ಲಿಂಗಪ್ಪ ಅವರ ಕ್ಷೇತ್ರದ ಹತ್ತಿರವಿರುವ ಒಂದು ಪರೀಕ್ಷಾ ಕೇಂದ್ರಕ್ಕೆ ಕರೆದುಕೊಂಡು ಹೋಗಲು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ನಿಮ್ಮ ಪರಿಕ್ಷಾ ಕೇಂದ್ರ ಬೇರೆ ಕಡೆ ಇದೆಯೆಂದು ಹೇಳಿ ಬೇರೆ ಕಡೆಗೆ ಕರೆದುಕೊಂಡು ಹೋದ. ಪರೀಕ್ಷೆ ನಡೆಯಲಿಕ್ಕೆ ನಾಲ್ಕಾರು ನಿಮಿಷಗಳ ಕಾಲ ಇತ್ತು. ಅಷ್ಟುಹೊತ್ತಿಗೆ ಈ ಉಪಾಧ್ಯಾಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿ ಯಾರೋ ಒಬ್ಬಳ ಜೊತೆಗೆ ಇಲ್ಲದಸಲ್ಲದ ವ್ಯವಹಾರ ನಡೆಸಿ ಅದು ಒಂದು ದೊಡ್ಡ ಗಲಾಟೆ ಆಯಿತು. ಇದು ಸುಮಾರು ಆರೇಳು ತಿಂಗಳುಗಳ ಹಿಂದೆ ನಡೆದಂಥ ವಿಚಾರ.

ಶ್ರೀ ಕೋಣಂದೂರು ಲಿಂಗಪ್ಪ :— ಅದರ ಬಗ್ಗೆ ತಕ್ಷಣ ಅಲ್ಲಿನ ಎ. ಇ. ಒ. ಸೂಕ್ತ ಕ್ರಮ ತೆಗೆದು ಕೊಂಡಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :— ತೆಗೆದುಕೊಂಡರು. ಪ್ರೈಮರಿ ಸ್ಕೂಲಿನಲ್ಲಿ ಉಪಾಧ್ಯಾಯರ ನಡತೆ, ರೀತಿ ನೀತಿ ಇದ್ದರೆ ಹೇಗೆ ? ಇಂತಹ ವಿಚಾರಗಳ ಬಗ್ಗೆ ಸರ್ಕಾರ ಬಹಳ ಗಮನ ಕೊಡಬೇಕು. ಅವನ ಹತ್ತಿರ ಬೀರುಬಾಟಲ್ ಮುಂತಾದವುಗಳನ್ನು ಇಟ್ಟುಕೊಂಡು ಪಾಠಗಳನ್ನು ಹೇಳಿದರೆ ಮಕ್ಕಳ ಮೇಲೆ ಎಂತಹ ಪರಿಣಾಮ ಬಂದೀತೆಂದು ನಾನು ಕೇಳುತ್ತೇನೆ. ಇದರಿಂದ ಮಕ್ಕಳಿಗೆ ವಿದ್ಯಾಭ್ಯಾಸ ಸರಿಯಾಗಿ ಬರುವುದಿಲ್ಲ. ಇನ್ನು ಉಪಾಧ್ಯಾಯರು ಪರೀಕ್ಷೆ ಪೇಪರ್ ಕರೆಕ್ಟ್ ಮಾಡದೆಯೇ ಮಾರ್ಕ್ಸ್ ಹಾಕುತ್ತಾರೆ. ಇನ್ನು ಕೆಲವು ಮಾರ್ಕ್ಸ್ ಹಾಕಿರುವುದು ಸಿಕ್ಕಿತು. ಉತ್ತರದಲ್ಲಿ ೧೦ ನಂಬರ್ ಇದ್ದರೆ ೧೦ಕ್ಕೆ ೮ ಮಾರ್ಕ್ಸ್ ಮಾತ್ರ ಬಂದಿದೆಯೆಂದು ಕೊಟ್ಟಿದ್ದಾರೆ. ಇದರಿಂದ ಉಪಾಧ್ಯಾಯರ ಗುಣಮಟ್ಟ, ಜ್ಞಾನದ ಮಟ್ಟ ಎಷ್ಟೆಂಬುದಾಗಿ ನಾವು ಅಳೆಯಬಹುದು. ಇಷ್ಟರಮಟ್ಟಿಗೆ ಅವರ ಜ್ಞಾನದ ಮಟ್ಟವಿದ್ದರೆ ಹುಡುಗರ ಗತಿಯೇನು ? ಉಪಾಧ್ಯಾಯರ ನೇಮಕಾತಿಯಲ್ಲಿ ಹೆಚ್ಚಿಗೆ ಅವರ ಶಕ್ತಿಯನ್ನು ಮತ್ತು ಅವರ ಜ್ಞಾನವನ್ನು ನೋಡಬೇಕು. ಕಡ್ಡಾಯ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಇದಕ್ಕೆ ಬರೀ ಶಾಸನ ಮಾಡಿದರೆ ಸಾಲದು. ನಮ್ಮ ಕ್ಷೇತ್ರಕ್ಕೆ ಬಂದಾಗ ಮಾನ್ಯ ಸಚಿವರಿಗೆ ಈ ವಿಚಾರದಲ್ಲಿ ಬೆರಳುಮಾಡಿ ತೋರಿಸಿದ್ದೇವೆ. ಹರಿಜನ ಗಿರಿಜನ ಬಾಲಕರು ಯಾರು ಸ್ಕೂಲುಗಳಿಗೆ ಹೋಗುತ್ತಾರೋ ಅಂತಹವರ ಬಗ್ಗೆ ಬರೀ ಶಾಸನ ಮಾಡಿದರೆ ಏನೇನೂ ಸಾಲದು. ಅದಕ್ಕೇನಾದರೂ ಮಾಡಬೇಕು. ಹರಿಜನ, ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ಯಾವ ಸಾಲವನ್ನೂ ಕೊಡದಿದ್ದರೆ ಚಿಂತೆ ಇಲ್ಲ. ಮನೆಗಳನ್ನು ಕಟ್ಟಿಸಿಕೊಡದಿದ್ದರೂ ಚಿಂತೆ ಇಲ್ಲ. ಅವರಿಗೆ ಮೊಟ್ಟಮೊದಲನೆಯದಾಗಿ ಕಡ್ಡಾಯವಾದ ಶಿಕ್ಷಣವನ್ನು ಕೊಡಬೇಕು. ಈ ದೃಷ್ಟಿಯಿಂದ ಸರ್ಕಾರ ಅವರ ಬಗ್ಗೆ ಹೆಚ್ಚು ಗಮನಕೊಡಬೇಕು.

ಈ ಕಾರಣಕ್ಕಾಗಿ ಇವತ್ತು ಕಡ್ಡಾಯ ಶಿಕ್ಷಣವನ್ನು ಕಡ್ಡಾಯವಾಗಿ ಈ ಒಂದು ವರ್ಗಕ್ಕಾದರೂ ಕನಿಷ್ಟಪಕ್ಷ ತರಬೇಕಾಗುತ್ತದೆ,

ಸ್ವಾಮಿ, ಕೇರ್‌ಫುಡ್ ಎಂದು ಯಾವುದೋ ವಿಧವಾದ ಸಹಾಯವನ್ನು ತಂದು ನಮ್ಮ ಮಕ್ಕಳಿಗೆ ಹಂಚತಕ್ಕ ನಾಚಿಕೆಪಡತಕ್ಕ ವ್ಯವಸ್ಥೆಯನ್ನು ಇನ್ನಾದರೂ ನಿಲ್ಲಿಸುತ್ತೀರಾ ? ನಮ್ಮ ಮಕ್ಕಳಿಗೆ ಒಂದು ಹೊತ್ತಿನ ಊಟ ಕೊಡುವ ಶಕ್ತಿಯಿಲ್ಲವೇ ? ಯಾವುದೋ ಒಂದು ರೀತಿಯ ಲೇಬಲ್ ಬರುತ್ತದೆ ; ಈ ಫುಡ್‌ನಿಂದ ನಮ್ಮ ಮಕ್ಕಳ ಮೇಲೆ ಇಲ್ಲದ ಪರಿಣಾಮ ಉಂಟಾಗುತ್ತದೆ. ಮಕ್ಕಳಿಗಾಗಿ ಬಿಕ್ಷೆ ಮಾಡೋಣ; ನಾಲ್ಕು ಮನೆಯಲ್ಲಿ ಹೋಗಿ ಕೇಳಿದರೆ ಅಕ್ಕಿ ಕೊಡುತ್ತಾರೆ, ಬೇಳೆ ಕೊಡುತ್ತಾರೆ, ಅದನ್ನು ತಂದು ಅಡಿಗೆ ಮಾಡಿ ಹಾಕೋಣ. ಅಮೇರಿಕಾದಿಂದ ಬರುವ ಈ ಸಹಾಯವನ್ನು ನಿಲ್ಲಿಸುವುದಕ್ಕೆ ಮೊದಲು ಪ್ರಯತ್ನ ಪಡಿ. ಮಕ್ಕಳ ಮೇಲೆ ಇಲ್ಲದ ಪರಿಣಾಮ ಬೀರುತ್ತದೆ ಎನ್ನುವ ಭಾವನೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ ಇದರ ಬಗ್ಗೆ ತಮಗೂ ಕಾಳಜಿ ಇದೆ. ಮಕ್ಕಳ ಮೇಲೆ ದುಷ್ಪರಿಣಾಮ ಉಂಟಾಗಿ ಮುಂದಿನ ಪೀಳಿಗೆ ಅನುಭವಿಸುತ್ತದೆ. ಕಾಲಾವಕಾಶ ಇಲ್ಲದೆ ಇರುವುದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆವಿವಾಳದ ನಂಜಪ್ಪ (ಅರಸೀಕೆರೆ) :—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಮಂತ್ರಿಗಳು ಈ ದಿವಸ ಇಲ್ಲಿ ತಂದಿರತಕ್ಕಂಥ ಬೇಡಿಕೆ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇದು ಬಹಳ ಅತ್ಯಂತ ಮುಖ್ಯವಾದ ಖಾತೆ. ಈ ವಿದ್ಯಾಭ್ಯಾಸದ ಖಾತೆ ನಾಡಿನ ಇತಿಹಾಸ, ಸಂಸ್ಕೃತಿ ಹಾಗೂ ಅಭಿವೃದ್ಧಿ ಬಗ್ಗೆ, ತೆಗೆದುಕೊಳ್ಳತಕ್ಕ ಪ್ರಗತಿ ಬಗ್ಗೆ ಮುಖ್ಯವಾದ ಕಾರ್ಯಕ್ರಮ. ವಿದ್ಯಾಭ್ಯಾಸ ಏನಾದರೂ ಕುಂಠಿತವಾದರೆ; ವಿದ್ಯಾಭ್ಯಾಸದ ಬಗ್ಗೆ ಕಡಿಮೆ ಪ್ರಮಾಣದಲ್ಲಿ ಕೆಲಸ ಮಾಡಿದರೆ ನಾಡಿಗೆ ದೊಡ್ಡ ವಿಪತ್ತು ಬಂದಂತಾಗುತ್ತದೆ. ಈ ಖಾತೆ ಬಗ್ಗೆ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ವಿದ್ಯಾಭ್ಯಾಸದಲ್ಲಿ ಬಹಳ ಮುಖ್ಯವಾದ ಮೊದಲನೆ ಮೆಟ್ಟಲು ಅಂದರೆ ನರ್ಸರಿ ಹಾಗೂ ಪ್ರೀ ಪ್ರೈಮರಿ ಸೆಂಟರ್ಸ್ ಹಾಗೂ ಪ್ರಾಥಮಿಕ ಶಾಲೆಗಳು ; ಎಲ್ಲಿಯವರೆಗೆ ನಾವು ಇವುಗಳನ್ನು ಗುಣಮಟ್ಟವನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಪಡುವುದಿಲ್ಲ, ಎಲ್ಲಿಯವರೆಗೆ ಈ ಯೋಜನೆಗಳಿಗೆ ನಾವು ಉತ್ತೇಜನ ಕೊಡುವುದಿಲ್ಲ, ಎಲ್ಲಿಯವರೆಗೆ ಈ ಯೋಜನೆಗಳಲ್ಲಿ ಉತ್ಸಾಹದಿಂದ ಕೆಲಸ ನಡೆಯುವುದಿಲ್ಲ, ಅಲ್ಲಿಯವರೆಗೆ ನಮ್ಮ ವಿದ್ಯಾಭ್ಯಾಸದಲ್ಲಿ ಪ್ರಗತಿ ಆಗುವುದಕ್ಕೆ ಸಾಧ್ಯವಿಲ್ಲ. ಈ ಒಂದು ದೃಷ್ಟಿಯಿಂದ ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಹೆಚ್ಚು ತೆಗೆಯಬೇಕು. ನಗರ ಪ್ರದೇಶದಲ್ಲಿ ವಿದ್ಯಾಭ್ಯಾಸದ ಬಗ್ಗೆ ಹೊಂದಾಣಿಕೆ ಇರುತ್ತದೆ, ತಂದೆ ತಾಯಿಗಳಿಗೆ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೆಂಬ

ಜವಾಬ್ದಾರಿ ಇರುತ್ತದೆ; ಆದರೆ ಗ್ರಾಮಾಂತರ ಪ್ರದೇಶದ ನಿವಾಸಿಗಳಿಗೆ ಆ ಒಂದು ಭಾವನೆ ಇರುವುದಿಲ್ಲ. ಈ ಒಂದು ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದಲ್ಲಿ, ಹಳ್ಳಿಗಳಲ್ಲಿ ನರ್ಸರಿ ಸ್ಕೂಲುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ತಮ್ಮ ವರದಿಯಲ್ಲಿ 1975-76ನೇ ಇಸವಿಯಲ್ಲಿ 1,100 ನರ್ಸರಿ ಸಂಸ್ಥೆಗಳು ಇವೆ ಎಂದು ತಿಳಿಸಿದ್ದೀರಿ ; ಇದು ಏತಕ್ಕೂ ಆಗುವುದಿಲ್ಲ. 75-76ನೇ ಸಾಲಿಗೆ ಇನ್ನೂ ಹೆಚ್ಚು ಒಂದು ಸಾವಿರ ಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ಯೋಜನೆ ಹಾಕಬೇಕು. ನರ್ಸರಿ ಸ್ಕೂಲುಗಳಿಗೆ ಬೇಕಾದಂತ ಪಠ್ಯಪುಸ್ತಕ ಮತ್ತು ಪಿಠೋಪಕರಣಗಳನ್ನು ಮೊದಲು ಒದಗಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿ ನಾನು ನೋಡಿದ್ದೇನೆ; ಮಕ್ಕಳಿಗೆ ಶಿಕ್ಷಣ ಕೊಡುವ ಉಪಾಧ್ಯಾಯ ಇರುತ್ತಾನೆಯೇ ಹೊರತು ಉಪಕರಣಗಳು ಇರುವುದಿಲ್ಲ. ಸಣ್ಣ ಸಣ್ಣ ಮಕ್ಕಳು ಆಟವಾಡತಕ್ಕ ಆಟದ ಸಾಮಾನುಗಳನ್ನು ಒದಗಿಸಿ; ಈ ಮೂಲಕವೂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕು. ತಮ್ಮ ವರದಿಯಂತೆ 200 ಫ್ರೀ ಪ್ರೈಮರಿ ಸೆಂಟರ್ಸ್ ಎಂದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ; ಇದು ಏನೇನು ಸಾಕಾಗುವುದಿಲ್ಲ. ಎಸ್. ಎಸ್. ಎಲ್. ಸಿ. ಯಲ್ಲಿ ಪಾಸಾಗಿರತಕ್ಕಂಥ ಸಹಸ್ರಾರು ವಿದ್ಯಾರ್ಥಿಗಳಿದ್ದು; ಇವರಿಗೆ ತರಬೇತು ಕೊಟ್ಟು ಇವರನ್ನು ಫ್ರೀ ಪ್ರೈಮರಿ ಸೆಂಟರ್ಸ್‌ಗಳಿಗೆ ಉಪಯೋಗಿಸಿಕೊಂಡು ಈ ಸೆಂಟರ್ಸ್‌ಗಳನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನೂ ಪ್ರೈಮರಿ ಸ್ಕೂಲುಗಳ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶದಲ್ಲಿ ಇವು ಬಹಳ ಚಿಂತಾಜನಕವಾಗಿರುತ್ತವೆ. ಅದರಲ್ಲಿಯೂ ಏಕ ಉಪಾಧ್ಯಾಯರ ಪಾಠಶಾಲೆಗಳು ; ಹೋಬಳಿ ಮತ್ತು ತಾಲ್ಲೂಕುಗಳಲ್ಲಿರತಕ್ಕ ಏಕ ಉಪಾಧ್ಯಾಯರ ಪಾಠಶಾಲೆಗಳು ತುಂಬಾ ಶೋಚನೀಯವಾಗಿವೆ. ಈ ಉಪಾಧ್ಯಾಯರುಗಳು ತಾವು ವಾಸವಿರುವ ಕಡೆಯಲ್ಲಿಯೇ ಜಮೀನುಗಳನ್ನು ಮಾಡಿಕೊಂಡು, ಬೆಳಿಗ್ಗೆ 10 ಗಂಟೆಗೆ ಶಾಲೆಗೆ ಬಂದು ಬೆಲ್ ಹೊಡೆದು ಅರ್ಧ ಗಂಟೆ ಶಾಲೆಯಲ್ಲಿದ್ದು, ನಂತರ ತಮ್ಮ ತಮ್ಮ ಜಮೀನುಗಳಿಗೆ ಕೆಲಸ ಮಾಡಿಸುವುದಕ್ಕೆ ಹೋಗುತ್ತಾರೆ ಪಾಠಪ್ರವಚನಗಳಂತೂ ನಡೆಯುವುದೇ ಇಲ್ಲ. ತನಿಖಾ ಕ್ರಮ ಸರಿಯಾದ ರೀತಿಯಲ್ಲಿ ಇಲ್ಲ ಸರಿಯಾದ ರೀತಿಯಲ್ಲಿ ಪಾಠಶಾಲೆಗಳು ನಡೆಯದೆ ಹೋದರೆ ಮುಚ್ಚುವುದು ಒಳ್ಳೆಯದು. ಏಕ ಉಪಾಧ್ಯಾಯರ ಶಾಲೆಗಳ ಬಗ್ಗೆ ತಾವು ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೂ ಪಾಠಶಾಲೆಗಳಿಗೆ ಬೇಕಾದಂತ ಕಟ್ಟಡಗಳ ವಿಷಯದಲ್ಲಿ ಹೇಳುವುದಾದರೆ, ಬೆಂಗಳೂರು ನಗರದಲ್ಲಿರತಕ್ಕ ವಿದ್ಯಾಸಂಸ್ಥೆಗಳ ಭವನಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇಷ್ಟು ದೊಡ್ಡ ದೊಡ್ಡ ಭವನಗಳನ್ನು ಕಟ್ಟಿಸಿಕೊಟ್ಟಿರತಕ್ಕ ಸರ್ಕಾರ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ 6 ಸಾವಿರ ರೂಪಾಯಿಗಳ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಆಗುವುದಿಲ್ಲ ಎಂದರೆ ಇನ್ನು ಎಷ್ಟರಮಟ್ಟಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ ಎಂದು ಅನಿಸುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ದೇಶದ ಹಾಗೆ ಚೀಣಾದೇಶ ಸ್ವತಂತ್ರವಾದ ಮೇಲೆ ನಮ್ಮ ದೇಶದ ರಚನಾತ್ಮಕ ಕಾರ್ಯಕರ್ತರೂ, ಮುಖಂಡರೂ ಆದ ಜೆ. ಸಿ. ಕುಮಾರಪ್ಪ ಎಂಬುವರ ಅಧ್ಯಯನ ಮಾಡುವುದಕ್ಕೆ ಹೋದಾಗ ಚೀಣಾ ದೇಶದ ಒಂದು ದೊಡ್ಡ ವಿಶ್ವವಿದ್ಯಾನಿಲಯದಲ್ಲಿ ಮೊದಲೇ ಒಂದು ಕಾರ್ಯಕ್ರಮ ಇತ್ತು ; ಇವರನ್ನು ಇವರು ಇದ್ದ ಸ್ಥಳದಿಂದ ಒಂದು ಜೀಪಿನಲ್ಲಿ ಕರೆದುಕೊಂಡು ಹೋದರು ; ಇವರಿಗೆ ಸ್ವಲ್ಪ ಬೇಸರಿಕೆಯಾಯಿತು ; ನಾನು 40 ಕೋಟಿ ಜನಸಂಖ್ಯೆ ಇರತಕ್ಕ ದೊಡ್ಡ ಸರ್ಕಾರದಿಂದ ಬಂದಿರುವಾಗ; ಈ ಸರ್ಕಾರ ನನ್ನನ್ನು ಒಂದು ಹಳೇ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆಂದು. ವಿಶ್ವವಿದ್ಯಾನಿಲಯದ ಒಂದು ಭಾಗದಲ್ಲಿ ಜೀಪ್ ನಿಂತಮೇಲೆ ; ಒಬ್ಬ ಹೆಂಗಸರು ಬಂದು ಇವರನ್ನು ಸ್ವಾಗತಿಸಿದರು ; ಇವರಿಗೆ ಇನ್ನೂ ಬೇಸರಿಕೆ ಆಯಿತು ; ಆಕೆ ವಿಶ್ವವಿದ್ಯಾನಿಲಯದ ಎಲ್ಲಾ ಭಾಗಗಳನ್ನು ಪರಿಚಯಮಾಡಿಸಿಕೊಂಡು ಬಂದು ; ಇಂಥ ಒಂದು ದೊಡ್ಡ ಹಾಲಿನಲ್ಲಿ ಬಂದು ಇವರ ಪಕ್ಕದಲ್ಲಿಯೇ ಕೂತುಕೊಂಡಾಗ ಇವರಿಗೆ ಇನ್ನೂ ಆಶ್ಚರ್ಯವಾಯಿತು. ಆ ಹಾಲಿನಲ್ಲಿ ದೊಡ್ಡ ದೊಡ್ಡ ಪರಿಣತರೂ ಸಾವಿರಾರು ಮಂದಿ ಕೂತಿದ್ದಾರೆ. ವಿಭಾಗದ ಮುಖ್ಯಸ್ಥರುಗಳನ್ನೂ, ಎಲ್ಲರನ್ನೂ ಪರಿಚಯಮಾಡಿ ಕೊಟ್ಟ ನಂತರ; ಕುಮಾರಪ್ಪನವರು ತಾವು ಯಾರು ಎಂದು ಆಕೆಯನ್ನು ಕೇಳಿದಾಗ ; ಆಕೆ ಈ ವಿಶ್ವವಿದ್ಯಾನಿಲಯದ ಮುಖ್ಯ ಅಧಿಕಾರಿ , ಚೀಫ್ ಎಂದು ಹೇಳಿದಾಗ ಇನ್ನೂ

ಮತ್ತೂ ಆಶ್ಚರ್ಯವಾಯಿತು. ಆ ಮಹಿಳೆಯಾರು ಎನ್ನುವುದು ಅಲ್ಲಿಯವರೆಗೆ ಗೊತ್ತಾಗಿರಲಿಲ್ಲ. ಆ ಮಹಿಳೆ ಉಟ್ಟಿರತಕ್ಕ ಬಟ್ಟೆ ಭಾರತೀಯ ನಾಣ್ಯದಲ್ಲಿ 5-6 ರೂಪಾಯಿ ಬೆಲೆ ಬಾಳತಕ್ಕ ಸಾಧಾರಣವಾದ ಸೀರೆ; ಅತ್ಯಂತ ಸಾಧಾರಣವಾದ ಸಡಿಗೆ. ಆಗ ಕುಮಾರಪ್ಪನವರು ಆಕೆಯನ್ನು ಪ್ರಶ್ನೆ ಮಾಡಿದರು; ತಾವು ವಿದ್ಯಾಭ್ಯಾಸ ಮಾಡಿದ್ದು ಎಲ್ಲಿ ಎಂದು ಕೇಳಿದಾಗ, ಆಕೆ ಅಮೇರಿಕಾದಲ್ಲಿ ವಿದ್ಯಾಭ್ಯಾಸ ಮುಗಿಸಿದೆ. ಚೀಣಾದಿಂದ ಅಮೇರಿಕಾಕ್ಕೆ ಹೋದಾಗ ನನಗೆ ಒಂದು ದೊಡ್ಡ ವಿದ್ಯಾ ಸಂಸ್ಥೆಯಲ್ಲಿ ಮುಖ್ಯ ಕೆಲಸ ಸಿಕ್ಕಿತು; ತಿಂಗಳಿಗೆ 12,000—13,000 ರೂಪಾಯಿ ಸಂಬಳ ಕೊಟ್ಟು ಒಂದು ಕಾರು ಕೊಟ್ಟಿದ್ದರು. ನಮ್ಮ ದೇಶ ಸ್ವತಂತ್ರವಾದ ಮೇಲೆ ನಮ್ಮ ದೇಶದಿಂದ ಕರೆ ಬಂತು ಹೊರಗಡೆ ದೇಶಗಳಲ್ಲಿರತಕ್ಕ ಚೀನಿಯರು ಈ ದೇಶಕ್ಕೆ ವಾಪಸ್ಸು ಬಂದು ದೇಶ ಸೇವೆ ಮಾಡಬೇಕು ಎಂದರು. ಆ ಕರೆಯ ಮೇರೆಗೆ ನಾನು ಅಮೇರಿಕಾದಿಂದ ಇಲ್ಲಿಗೆ ಬಂದು ಈಗ ಇಲ್ಲಿ ಕೆಲಸ ಮಾಡುತ್ತಿದ್ದೇನೆಂದು ಹೇಳಿದಳು. ನಿಮಗೆ ಇಲ್ಲಿ ಸಂಬಳ ಎಷ್ಟು ಕೊಡುತ್ತಿದ್ದಾರೆಂದು ಕೇಳಿದಕ್ಕೆ; ಸಂಬಳ ಇಲ್ಲ ಒಂದು ತಿಂಗಳಿಗೆ ಬೇಕಾಗುವ ಆಹಾರ ಮತ್ತು ಉಡುಪು ಕೊಡುತ್ತಿದ್ದಾರೆಂದು ಹೇಳಿದಳು. ನಮ್ಮ ಗ್ರಾಮಗಳಲ್ಲಿ ಕೈಮಗ್ಗದಿಂದ ತಯಾರಾದಂತ ಸೀರೆ ಕೊಟ್ಟಿದ್ದಾರೆ; ಅದನ್ನು ಧರಿಸಿದ್ದೇನೆಂದು ಆಕೆ ಹೇಳಿದಾಗ ಇವರಿಗೆ ಇನ್ನೂ ಆಶ್ಚರ್ಯವಾಯಿತು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ. ಭಾರತದಲ್ಲಿ, ಕರ್ನಾಟಕದಲ್ಲಿ ನೋಡಿದರೆ; ಆಸ್ಪತ್ರೆಗಳಲ್ಲಿ ವಿದ್ಯಾಸಂಸ್ಥೆಗಳಲ್ಲಿ ಭವನಗಳನ್ನು ನಿರ್ಮಾಣ ಮಾಡಿರತಕ್ಕಂಥಾದ್ದನ್ನು ಮತ್ತು ಅಲ್ಲಿನ ಅಧಿಕಾರಿಗಳ ಕೊಠಡಿಗಳಿಗೆ ಮಾಡಿರತಕ್ಕ ಡೆಕೋರೇಷನ್ ನೋಡಿದರೆ; ನಮ್ಮಂತಹವರು ಇಣಕಿ ನೋಡುವುದಕ್ಕೂ ಸಾಧ್ಯವಿಲ್ಲ; ಅಷ್ಟರಮಟ್ಟಿಗೆ ಮಾಡಿರುತ್ತಾರೆ. ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ಕಡಿಮೆ ಸೌಲಭ್ಯ ಇದೆ.

ಅದು ಆಗಬಾರದು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಗರ ಪ್ರದೇಶದಲ್ಲಿ ದೊಡ್ಡ ದೊಡ್ಡ ಭವನಗಳನ್ನು ನಿರ್ಮಾಣ ಮಾಡುವುದಕ್ಕೆ ಮುಂಚೆ ಗ್ರಾಮಾಂತರ ಪ್ರದೇಶಗಳಲ್ಲಿ ಕೊನೆಯಪಕ್ಷ ತಾಲ್ಲೂಕುಬೋರ್ಡಿನವರು ಮತ್ತು ಸರ್ಕಾರದವರು ಈ ಎರಡು ಏಜೆನ್ಸಿಯಿಂದ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಗ್ರಾಮಾಂತರ ಪ್ರದೇಶದ ಜನಗಳಿಂದ ಈ ಕೆಲಸಕ್ಕೆ ಯಾವ ಹಣವನ್ನೂ ಅಪೇಕ್ಷೆ ಮಾಡಬಾರದು. ಅವರನ್ನು ಇದಕ್ಕೆ ಕಾಂಟ್ರಿಬ್ಯೂಷನ್ ಕೊಡಿ ಎಂದ ಕೇಳತಕ್ಕದ್ದು ಒಳ್ಳೆಯದಲ್ಲ. ಇದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾಗುವುದಿಲ್ಲ. ಪ್ರಾಥಮಿಕ ಶಾಲೆಗಳ ಕಟ್ಟಡ ಇತ್ಯಾದಿ ವಿಶಿಷ್ಟ ಖರ್ಚನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಪಾಠಶಾಲೆಗಳ ಉಪಾಧ್ಯಾಯರ ಬಗ್ಗೆ ಹೇಳುವುದಾದರೆ ಅನೇಕ ಜನ ಉಪಾಧ್ಯಾಯರು ಒಳ್ಳೆಯವರು ಇದ್ದಾರೆ. ಅವರಿಗೆ ಕಷ್ಟಪಟ್ಟು ಕೆಲಸ ಮಾಡಬೇಕು ಎನ್ನುವ ಮನೋಭಾವನೆ ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಒಂದು ಕಷ್ಟ ಏನಿದೆ ಎಂದರೆ ವಿದ್ಯಾ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರು ಸಂಸಾರಿಕರಾಗಿರುತ್ತಾರೆ. ಆದ್ದರಿಂದ ಅವರಿಗೆ ವಸತಿ ಸೌಕರ್ಯಗಳು ಇಲ್ಲದಿದ್ದರೆ ಅವರು ಕೆಲಸ ಮಾಡತಕ್ಕದ್ದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರಥಮತ: ಸ್ಕೂಲು ಕಟ್ಟಡಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಾರೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಉಪಾಧ್ಯಾಯರ ವಸತಿ ಸೌಕರ್ಯವನ್ನು ಒದಗಿಸುವ ಕಡೆಗೂ ಗಮನ ಕೊಟ್ಟು ಅವರಿಗೆ ವಸತಿಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಅದನ್ನು ಸರ್ಕಾರದವರೇ ಮಾಡಬೇಕು ಎಂದು ನಾನು ಹೇಳುವುದಿಲ್ಲ. ಜನತಾ ವಸತಿ ಯೋಜನೆ ಇದೆ ಹೌಸಿಂಗ್ ಬೋರ್ಡ್ ಇದೆ. ಹೌಸಿಂಗ್ ಕಾರ್ಪೋರೇಷನ್ ಇದೆ. ಅವರು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಉಪಾಧ್ಯಾಯರು ವಾಸಮಾಡುವುದಕ್ಕೆ ಯೋಗ್ಯವಾದ ವಸತಿಗೃಹಗಳನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಅದಕ್ಕೆ ಉಪಾಧ್ಯಾಯರ ಸಂಬಳದಿಂದ ಒಂದು ಭಾಗವನ್ನು ಬಾಡಿಗೆಗಾಗಿ ತೆಗೆದುಕೊಳ್ಳತಕ್ಕದ್ದು ಸೂಕ್ತ ಆ ರೀತಿ ಮಾಡುವುದಾದರೆ ನೋಪ್ರಾಫಿಟ್ ನೋಲಾಸ್ ರೀತಿ ಆ ಕೆಲಸವನ್ನು ನಡೆಸಿಕೊಂಡು ಹೋಗುವುದು ಒಳ್ಳೆಯದು. ಅದರಿಂದ ಜನತಾ ವಸತಿ ಯೋಜನೆಗೆ ನಷ್ಟವಾಗದ ರೀತಿಯಲ್ಲಿ ಬಾಡಿಗೆ ಬರುತ್ತದೆ. ಉಪಾಧ್ಯಾಯರಿಗೂ ಅನುಕೂಲವಾಗುತ್ತದೆ ಈ ದೃಷ್ಟಿಯಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಉಪಾಧ್ಯಾಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡತಕ್ಕದ್ದು ಮುಖ್ಯ ಎಂದು ನಾನು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅಟೆಂಡೆನ್ಸ್ ಸ್ಕಾಲರ್‌ಷಿಪ್ ಕೊಡಬೇಕೆಂದು ಅಳವಡಿಸಿಕೊಂಡಿರತಕ್ಕದ್ದು ಬಹಳ ಕಡಿಮೆ ಇದೆ. ಇದರ ಪ್ರಮಾಣವನ್ನು ಹೆಚ್ಚಿಸಬೇಕು. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಪ್ರಾಥಮಿಕ ಶಾಲೆಗಳಿಗೆ ಹುಡುಗರನ್ನು ಅಡ್ಮಿಟ್ ಮಾಡಿಕೊಳ್ಳಬೇಕಾದರೆ $4\frac{1}{2}$ ರೂಪಾಯಿಗಳ ಛಾಪಾಕಾಗದಲ್ಲಿ ಒಂದು ಪ್ರಮಾಣ ಪತ್ರವನ್ನು ವಯಸ್ಸಿನ ಬಗ್ಗೆ ಕೊಡಬೇಕು ಎಂದ ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ನಾನು ನನ್ನ ಮೊಮ್ಮಗಳನ್ನು ಪ್ರಾಥಮಿಕ ಶಾಲೆಗೆ ಸೇರಿಸುವುದಕ್ಕೆ ಹೋದಾಗ ಆಕೆಯ ವಯಸ್ಸಿನ ಬಗ್ಗೆ ಮುನಿಸಿಪಾಲಿಟಿ ಮತ್ತು ಆಸ್ಪತ್ರೆಯ ಬರ್ತ್ ರಿಜಿಸ್ಟರ್‌ನಲ್ಲಿದ್ದ ಕಾಪಿಯನ್ನು ಕೊಟ್ಟಾಗ ಅದನ್ನು ಇನ್‌ಸ್ಪೆಕ್ಟರು ಒಪ್ಪಲಿಲ್ಲ. ಅಫಿಡವಿಟ್ ತರಬೇಕು ಎಂದು ಹೇಳಿದರು. ಕೋರ್ಟಿಗೆ ಹೋಗಿ ಒಬ್ಬರು ಲಾಯರನ್ನು ಹಿಡಿದು ಅಫಿಡವಿಟ್ ತಂದು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಸ್ಕೂಲಿಗೆ ಸೇರಿಸಬೇಕು ಎಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಏತಕ್ಕೆ ಸರ್ಕಾರದರು ಈ ಆದೇಶವನ್ನು ಕೊಟ್ಟರೋ ಗೊತ್ತಾಗುವುದಿಲ್ಲ. ದಯವಿಟ್ಟು ಇದನ್ನ ರದ್ದು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮುನಿಸಿಪಾಲಿಟಿಯ ಒಂದು ರೆಕಾರ್ಡ್ ಆಗಲೀ, ಜನತಾ ಆಸ್ಪತ್ರೆಯ ಒಂದು ರೆಕಾರ್ಡ್ ಆಗಲಿ ಡೇಟ್ ಆಫ್ ಬರ್ತ್ ಬಗ್ಗೆ ಕೊಟ್ಟರೆ ಸಾಕು. ಅದನ್ನೇ ಒಪ್ಪಿಕೊಳ್ಳಬಹುದು. ಅಫಿಡವಿಟ್ ಕೊಟ್ಟು ಮಕ್ಕಳನ್ನು ಸ್ಕೂಲಿಗೆ ಅಡ್ಮಿಟ್ ಮಾಡಿತಕ್ಕ ಪದ್ಧತಿ ಒಳ್ಳೆಯದಲ್ಲ. ಕೂಡಲೇ ಇದನ್ನು ರದ್ದು ಮಾಡಬೇಕು ಎಂದು ನಾನು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಜವಾಬಿನಲ್ಲಿ ಇದಕ್ಕೆ ಉತ್ತರವನ್ನು ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸೆಕೆಂಡರಿ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಹೈಸ್ಕೂಲು ವಿದ್ಯಾಭ್ಯಾಸ ಬಹಳ ಮುಖ್ಯವಾದುದು, ವರ್ಷವರ್ಷಕ್ಕೂ ಹೈಸ್ಕೂಲುಗಳ ಸಂಖ್ಯೆ ಜಾಸ್ತಿಯಾಗಿದೆ. ಈ ಹೈಸ್ಕೂಲುಗಳ ಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಬೇಕಾದದ್ದು ಅವಶ್ಯಕ. ಹೊಸದಾಗಿ ಸರ್ಕಾರಿ ಹೈಸ್ಕೂಲುಗಳನ್ನು ಎಲ್ಲಾ ಕಡೆಗಳಲ್ಲಿಯೂ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಖಾಸಗಿಯವರು ಪ್ರೌಢಶಾಲೆಗಳನ್ನು ಸ್ಥಾಪನೆ ಮಾಡಬೇಕು ಎಂದು ಮುಂದೆ ಬಂದರೆ ಅವರಿಗೆ 5 ವರ್ಷ ಗ್ರಾಂಟ್ ಕೊಡುವುದಿಲ್ಲ. 5 ವರ್ಷ ಅವರೇ ತಮ್ಮ ಸ್ವಂತ ಹಣದಿಂದ ನಡೆಸಿಕೊಂಡು ಬರಬೇಕು ಎನ್ನುವ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ನಿಜವಾಗಿಯೂ ಕೂಡ ಇದು ಒಳ್ಳೆಯದಲ್ಲ. ಇದನ್ನು ಕೊನೆಯ ಪಕ್ಷ ಮೂರು ವರ್ಷಕ್ಕೆ ಇಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಫಿಜಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ ಮಕ್ಕಳು ಹೈಸ್ಕೂಲು, ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬರಬೇಕಾದರೆ 15-20 ವರ್ಷ ವಯಸ್ಸಾಗುತ್ತದೆ. ಅವರಿಗೆ ಬಹಳ ನಿಶ್ಶಕ್ತಿ ಇರುತ್ತದೆ. ಅವರಿಗೆ ಸರಿಯಾದ ವ್ಯಾಯಾಮ ಇರುವುದಿಲ್ಲ. ಕೆಟ್ಟ ಕೆಟ್ಟ ಸಿನಿಮಾಗಳನ್ನು ನೋಡತಕ್ಕದ್ದು, ಮತ್ತು ಅಶ್ಲೀಲ ಪ್ರದರ್ಶನಗಳನ್ನು ನೋಡತಕ್ಕದ್ದು, ಕುಡಿಯತಕ್ಕದ್ದು, ಇವುಗಳಿಂದ ಅವರು ಆರೋಗ್ಯವನ್ನು ಹಾಳುಮಾಡಿಕೊಂಡಿರುತ್ತಾರೆ. ಆದ್ದರಿಂದ ಫಿಜಿಕಲ್ ಎಜುಕೇಷನ್ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಆದಕಾರಣ ಮಾಧ್ಯಮಿಕ ಶಾಲೆಯಿಂದಲೇ ವ್ಯಾಯಾಮ ಶಿಕ್ಷಣವನ್ನು ಕೊಡತಕ್ಕ ಪ್ರಯತ್ನ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ ಮಕ್ಕಳಿಗೆ ಶಾಲೆಯಲ್ಲಿ ವ್ಯಾಕರಣ ಪಾಠವನ್ನು ಹೇಳಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈಗಿನ ಕಾಲದಲ್ಲಿ ಮಕ್ಕಳಿಗೆ ವ್ಯಾಕರಣ ಪಾಠವನ್ನು ಹೇಳಿಕೊಡುವುದಕ್ಕೆ ಪ್ರಾಶಸ್ತ್ಯವನ್ನು ಕೊಡತಕ್ಕದ್ದು ಬಹಳ ಮುಖ್ಯವಾದುದು. ನಗರಪ್ರದೇಶಗಳಲ್ಲಿರುವವರು ತಮ್ಮ ಮಕ್ಕಳಿಗೆ ಗೈಡ್ ಮಾಡುತ್ತಾರೆ. ಅವರು ತಿಳಿದುಕೊಳ್ಳುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಯಾವ ಗೈಡೆನ್ಸೂ ಸಿಕ್ಕುವುದಿಲ್ಲ. ಇದರಿಂದಾಗಿ ಅವರಿಗೆ ವ್ಯಾಕರಣ ಗೊತ್ತಾಗುವುದಿಲ್ಲ. ಶಾಲೆಗಳಲ್ಲಿ ಮಕ್ಕಳಿಗೆ ವ್ಯಾಕರಣ ಪಾಠವನ್ನು ಕಡ್ಡಾಯವಾಗಿ ತರಬೇಕು ಎಂದು ನಾನು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಮತ್ತು ಬಹಳ ಕಡಿಮೆ ಪ್ರಮಾಣದಲ್ಲಿ ಗಿಜಲ್ಟ್ ಬಂದಿರತಕ್ಕ ಕ್ಷೇತ್ರಗಳಲ್ಲಿ ಕೋಚಿಂಗ್ ಸೆಂಟರುಗಳನ್ನು ಪ್ರಾರಂಭ ಮಾಡಬೇಕು. ಮತ್ತು ಕೋಚಿಂಗ್ ಸೆಂಟರುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಅದಕ್ಕೆ ಮುಖ್ಯ ಕಾರಣವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಅಭ್ಯಾಸಮಾಡುವುದಕ್ಕೆ ಒಳ್ಳೆಯ ವಾತಾವರಣ ಇರುವುದಿಲ್ಲ. ಪುಸ್ತಕಗಳು ಇರುವುದಿಲ್ಲ, ಕಾಲ ಸಿಕ್ಕುವುದಿಲ್ಲ, ಅವರೆಲ್ಲರು ಬಡವರು. ಅವರು ಹೊಲದ ಕೆಲಸವನ್ನು ಮಾಡಿಕೊಂಡು ಪಾಠಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸಮಾಡಬೇಕು ಎಂದರೆ ಅವರಿಗೆ

ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೋಚಿಂಗ್ ಸೆಂಟರುಗಳನ್ನು ಜಾರಿ ಮಾಡಬೇಕು. ಮತ್ತು ಅಲ್ಲಿ ಚೆನ್ನಾಗಿ ಮಕ್ಕಳಿಗೆ ಕೋಚಿಂಗ್ ಕೊಟ್ಟು ಅವರು ಪರೀಕ್ಷೆಗಳಲ್ಲಿ ಪಾಸಾಗುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಏನು ಮಾಡದಿದ್ದರೂ ಕೂಡ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುವುದಕ್ಕೆ ನಮ್ಮ ಉಡುಪುಗಳಲ್ಲಿ ಸೂಕ್ತ ಮಾರ್ಪಾಡು ಮಾಡಬೇಕು. ಅದಕ್ಕೆ ಸಂಬಂಧಪಟ್ಟ ಹಾಗೆ ಈ ಸದನದಲ್ಲಿ ಒಂದು ಕಾನೂನು ತಂದರೆ ಒಳ್ಳೆಯದು. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಬಿಗಿಯಾದ ಉಡುಪನ್ನು ಧರಿಸುವುದಕ್ಕೆ ಅವಕಾಶ ಇಲ್ಲದಂತೆ ಮಾಡಬೇಕು. ಅವರು ಹಿಪ್ಪಿವೇಶವನ್ನು ಹಾಕಿಕೊಂಡು ನಮ್ಮ ಸಂಸ್ಕೃತಿಯು ಹಾಳಾಗುತ್ತಿದೆ. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು 6 ತಿಂಗಳಾದರೂ ತಲೆಗೆ ಎಣ್ಣೆ ಹಾಕುವುದಿಲ್ಲ. ಈ ರೀತಿ ಮಾಡುವುದರಿಂದ 30 ವರ್ಷಕ್ಕೇ ಕಣ್ಣು ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಹಿಪ್ಪಿ ವೇಶವನ್ನು ಧರಿಸಿರುವುದನ್ನು ನೋಡುವುದಕ್ಕೆ ಬಹಳ ಅಸಹ್ಯವಾಗುತ್ತದೆ. ನಮ್ಮ ಯುವ ಜನ ಶಾಖೆಯ ಮಂತ್ರಿಗಳಿಗೆ ಶ್ರೀಮಾನ್ ಗುಂಡೂರಾವ್ ಅವರಿಗೆ ಹೇಳಬೇಕಾಗಿಲ್ಲ. ಅವರೇ ನೋಡಿ ಅರಿತುಕೊಂಡು ಅವರು ಕೂದಲು ಬೆಳೆಸಿರುವುದನ್ನು ತೆಗೆಯಬೇಕು ಎಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ದಾರಿಯಲ್ಲಿ ಹೋಗುವಾಗ ಹುಡುಗನೋ ಹುಡಿಗಿಯೋ ಎಂದು ಗುರುತು ಹಿಡಿಯುವುದಕ್ಕಾಗುವುದಿಲ್ಲ. ಈ ತರಹ ರಾಷ್ಟ್ರವನ್ನು ನಾವು ಕಟ್ಟಬೇಕಾದರೆ ನಾವು ಆದಷ್ಟು ಮಿತವ್ಯಯ ಮಾಡಬೇಕು, ಸರಳವಾದ ಜೀವನವನ್ನು ನಡೆಸಬೇಕು, ಆ ದುಡ್ಡನ್ನು ದೇಶದ ಕೆಲಸಕ್ಕೆ ಉಪಯೋಗಿಸಬೇಕು ಎನ್ನುವ ಭಾವನೆ ಇರುವಾಗ, ದೇಶದಲ್ಲಿ ಲಕ್ಷೋಪಲಕ್ಷ ಜನರು ಅರೆಹೊಟ್ಟೆ ಊಟಮಾಡಿಕೊಂಡು ಜೀವನ ನಡೆಸುವಾಗ ಲಗ್ಜುರಿಯಿಂದ ಹಣ ಖರ್ಚು ಮಾಡತಕ್ಕದ್ದು ಅದಕ್ಕೆ ಪ್ರೋತ್ಸಾಹ ಕೊಡತಕ್ಕದ್ದು ಪ್ರಚೋದನೆ ಮಾಡತಕ್ಕದ್ದು ಒಳ್ಳೆಯದಲ್ಲ. ಶ್ರೀಮಾನ್ ಕುಮಾರಪ್ಪನವರು ಚೀಣಾದಲ್ಲಿರತಕ್ಕ ಇನ್ನೊಂದು ವಿಷಯವನ್ನು ಹೇಳಿದರು. ಆಫೀಸಿಗೆ ಮಂತ್ರಿಗಳು ಸೈಕಲ್ ಮೇಲೆ ಹೋಗುತ್ತಾರೆ, ಮುಖ್ಯ ಮಂತ್ರಿಗಳು ಮಾತ್ರ ಕಾರು ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ನಾನು ಚೈನಾದಲ್ಲಿರತಕ್ಕ ರಾಜಕೀಯ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನೀತಿಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಹಿಪ್ಪಿ ವೇಶವನ್ನು ಹಾಕಬಾರದು, ಸರಳ ಜೀವನವನ್ನು ನಡೆಸಬೇಕು. ಹೆಚ್ಚು ಬೆಲೆಬಾಳತಕ್ಕ ಉಡುಪನ್ನು ಧರಿಸಬಾರದು.

6.00 P.M.

ಇನ್ನು ವಿದ್ಯಾಭ್ಯಾಸದಲ್ಲಿ ಕಲೆಗೆ ಪ್ರೋತ್ಸಾಹ ಕೊಡತಕ್ಕದ್ದು ಬಹಳ ಮುಖ್ಯವಾದುದು. ಕಲೆಗೆ ಪ್ರೋತ್ಸಾಹ ಕೊಡದೇ ಹೋದರೆ, ಎಲ್ಲಾ ನಶಿಸಿ ಹೋಗುತ್ತದೆ. ಕಲೆಯ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ನಾಟಕ ಪ್ರದರ್ಶನವನ್ನು ಬಹಳ ಉತ್ತಮವಾಗಿ ಪ್ರದರ್ಶನ ಮಾಡತಕ್ಕವರಿದ್ದಾರೆ. ಇದರಿಂದ ಎಷ್ಟೋ ಜನ ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಉತ್ತಮವಾದ ಕಲೆಗಾರರು ಇದ್ದಾರೆ. ಸಿನಿಮಾಗಳಿಗೆ 50 ಸಾವಿರ ರೂಪಾಯಿ ಸಬ್ಸಿಡಿ ಕೊಡುವ ಹಾಗೆ ಈ ಕಲೆಗಾರರಿಗೂ ಕೊಡಬೇಕು. ನಾಟಕದಲ್ಲಿ ವಯಸ್ಸನ್ನು ಕಳೆದು ವೃದ್ಧಾಪ್ಯ ಜೀವನ ನಡೆಸತಕ್ಕಂಥವರಿಗೆ ವಿಶ್ರಾಂತಿವೇತನ ಕೊಡತಕ್ಕ ವ್ಯವಸ್ಥೆಯಾಗಬೇಕು. ಸಿನಿಮಾಗಳಿಗೆ ಸಬ್ಸಿಡಿ ಕೊಡುವುದನ್ನು ನಾನು ವಿರೋಧಿಸುತ್ತೇನೆ. ಇನ್ನು ಡೆವಲಪ್ ಆಗುವುದು ಬಹಳ ಇದೆ. ಸಿನಿಮಾಗಳಿಗೆ ಸಬ್ಸಿಡಿ ಕೊಡತಕ್ಕದ್ದನ್ನ ಗ್ರಾಮಾಂತರ ಪ್ರದೇಶದ ವಿದ್ಯಾಸಂಸ್ಥೆಗಳಿಗೆ ಉಪಯೋಗಿಸತಕ್ಕದ್ದು ಶ್ರೇಷ್ಠವಾದುದು. ಇಷ್ಟನ್ನು ತಮಗೆ ಹೇಳುತ್ತಾ, ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—Now the House stands adjourned to meet again tommorrow at One of the Clock.

The House adjourned at Two minutes past Six of the Clock to meet at One of the Clock on Thursday, the 18th March, 1976.